ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 30 ಸೋಮವಾರ 2025

₹4

ಸಂಪುಟ: 46 | ಸಂಚಿಕೆ: 74 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com



ರೋಟರಿ ಕ್ಲಬ್ ಆಫ್ ಮೈಸೂರು ಎಲೈಟ್‌ನ ಪದಾಧಿಕಾರಿಗಳ ಪದಗ್ರಹಣ



ರೋಟರಿ ಕ್ಲಬ್ ಆಫ್ ಮೈಸೂರು ಎಲೈಟ್‌ನ 2025-26ನೇ ಸಾಲಿನ ಪದಾಧಿಕಾರಿಗಳ ಪದಗ್ರಹಣ ಸಮಾರಂಭ ನಡೆಯಿತು.

ಮೈಸೂರು,ಜೂ.29(ಎಂಕೆ)- ನಗರದ ಖಾಸಗಿ ಹೋಟೆಲ್‌ನಲ್ಲಿ ರೋಟರಿ ಕ್ಲಬ್ ಆಫ್ ಮೈಸೂರು ಎಲೈಟ್‌ನ 2025-26ನೇ ಸಾಲಿನ ಪದಾಧಿಕಾರಿಗಳ ಪದಗ್ರಹಣ ಸಮಾರಂಭ ನಡೆಯಿತು.

ನೂತನ ಅಧ್ಯಕ್ಷ ಎನ್.ಎಸ್.ಮಹದೇವಸ್ವಾಮಿ ನೇತೃತ್ವದ ತಂಡಕ್ಕೆ ರೋಟರಿ ಅಂತರರಾಷ್ಟ್ರೀಯ ಜಿಲ್ಲೆ-3181ರ ನಿಕಟಪೂರ್ವ ಜಿಲ್ಲಾ ಗವರ್ನರ್ ಹೆಚ್.ಆರ್.ಕೇಶವ್ ಅಧಿಕಾರಿ ಹಸ್ತಾಂತರಿಸುವ ಮೂಲಕ ಪದಾಧಿಕಾರಿಗಳಿಗೂ ಶುಭ ಕೋರಿದರು.

ಬಳಿಕ ಮಾತನಾಡಿದ ಅವರು, ಸಾಮಾನ್ಯವಾಗಿ ನಾವು ನಮ್ಮ ಕೆಲಸ ಮುಗಿದ ಮೇಲೆ ನಮಗಿಂತಲೂ ಅರ್ಹರಾದವರಿಗೆ ಅಧಿಕಾರ ಹಸ್ತಾಂತರಿಸಿದರೆ ಮಾತ್ರವೇ ಯಾವುದೇ ಸಂಸ್ಥೆ ಸಮಾಜಮುಖಿಯಾಗಿ ಮುನ್ನಡೆಯಲು ಸಾಧ್ಯ. ಅದರಂತೆ ರೋಟರಿಯ ಸಮಾಜಮುಖಿ ಕಾರ್ಯಗಳು ಅವಿರತವಾಗಿ ನಡೆಯುತ್ತಲೇ ಇರಬೇಕು ಎಂದು ತಿಳಿಸಿದರು.

ಅಧಿಕಾರ ಸ್ವೀಕರಿಸಿದ ನೂತನ ಅಧ್ಯಕ್ಷ ಎನ್.ಎಸ್.ಮಹದೇವಸ್ವಾಮಿ ಮಾತನಾಡಿ, ಎಲ್ಲರೊಂದಿಗೆ ಸ್ನೇಹ, ವಿಶ್ವಾಸದೊಂದಿಗೆ ಸಮಾಜಮುಖಿ ಕೆಲಸ ಮಾಡಲು ರೋಟರಿ ಸಂಸ್ಥೆ ಅತ್ಯುತ್ತಮ ವೇದಿಕೆಯಾಗಿದೆ. ಸಮಾಜದ ಕಟ್ಟಕಡೆಯ ಜನರನ್ನು ತಲುಪುವ ಆಶಯ ಹೊಂದಿದ್ದೇವೆ. ಈ ಅಧಿಕಾರವನ್ನು ಸಾರ್ಥಕವಾಗಿ ಸದ್ಬಳಕೆ ಮಾಡಿಕೊಳ್ಳುವ ಹಂಬಲ ನನ್ನದಾಗಿದ್ದು, ಪರಿಪೂರ್ಣತೆ ಕಾಣುವ ವಿಶ್ವಾಸವಿದೆ. ಒಳ್ಳೆಯದಕ್ಕಾಗಿ ಒಗ್ಗೂಡಬೇಕು ಎಂಬ ಧ್ಯೇಯದೊಂದಿಗೆ ಮುನ್ನಡೆಯುವುದಾಗಿ ಹೇಳಿದರು.


ಸಹಾಯಕ ಜಿಲ್ಲಾ ಗವರ್ನರ್ ಡಾ.ಎಂ.ಡಿ.ರಾಘವೇಂದ್ರ ಪ್ರಸಾದ್, ವಲಯ ಸೇನಾನಿ ಕೆ.ಎಸ್.ಕುಮಾರ್, 2024-25ನೇ ಸಾಲಿನ ಅಧ್ಯಕ್ಷ ಎಂ.ರವಿ, ಕಾರ್ಯದರ್ಶಿ ಬಿ.ಸುರೇಶ್, 2025-26ನೇ ಸಾಲಿನ ಕಾರ್ಯದರ್ಶಿ ಕೆ.ಜಿ.ಹರೀಶ್ ಮತ್ತಿತರರು ಉಪಸ್ಥಿತರಿದ್ದರು.

ತರಗತಿ ಕೊಠಡಿ ಬಾಗಿಲು ತೆರೆಯದ ಸಿಬ್ಬಂದಿ; ಹೊರಗೆ ಕುಳಿತು ಪಾಠ ಕೇಳಿದ ವಿದ್ಯಾರ್ಥಿಗಳು!

ಮೈಸೂರು, ಜೂ.29(ಎಂಕೆ)- ಶತಮಾನದ ಇತಿಹಾಸ ಹೊಂದಿರುವ ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ತರಗತಿ ಕೊಠಡಿ ಇಲ್ಲದೆ ಕಾರಿಡಾರ್‌ನಲ್ಲಿ ಕುಳಿತು ಪಾಠ ಕೇಳುವ ದುಸ್ಥಿತಿ ಎದುರಾಗಿದೆ...!

ಗುಣಮಟ್ಟದ ಶಿಕ್ಷಣ ನೀಡಲು ಮೈಸೂರು ವಿಶ್ವವಿದ್ಯಾನಿಲಯ ಈಗಾಗಲೇ ಹತ್ತಾರು ಸವಾಲುಗಳನ್ನು ಎದುರಿಸುತ್ತಿದ್ದು, ಅವುಗಳ ಜೊತೆಗೆ ಮತ್ತೊಂದು ಸಮಸ್ಯೆ ಸೇರ್ಪಡೆಯಾಗಿದೆ. ಗಂಡ-ಹೆಂಡತಿ ಜಗಳದಲ್ಲಿ ಕೂಸು ಬಡವಾಯಿತು ಎಂಬ ಗಾದೆ ಮಾತಿನಂತೆ ಪ್ರಾಧ್ಯಾಪಕರು ಹಾಗೂ ಸಿಬ್ಬಂದಿ ನಡುವಿನ ಸಮನ್ವಯದ ಕೊರತೆಯಿಂದ ವಿದ್ಯಾರ್ಥಿಗಳು ತರಗತಿಯ ಹೊರಗಡೆ ಕುಳಿತು ಪಾಠ ಕೇಳುವಂತಾಗಿದೆ.

ಪ್ರಾಧ್ಯಾಪಕರ ಕೊರತೆಯಿಂದಾಗಿ ಅತಿಥಿ ಉಪನ್ಯಾಸಕರಿಂದ ತರಗತಿಗಳನ್ನು ನಡೆಸುತ್ತಿರುವ ಮೈಸೂರು ವಿವಿಯು ಇರುವ ಪ್ರಾಧ್ಯಾಪಕರನ್ನು ವ್ಯವಸ್ಥಿತವಾಗಿ ಸದ್ಬಳಕೆ ಮಾಡಿಕೊಳ್ಳದಿರುವುದೂ ವಿದ್ಯಾರ್ಥಿಗಳ ಕಲಿಕಾ ಗುಣಮಟ್ಟ ಕುಂಠಿತಗೊಳ್ಳಲು ಕಾರಣವಾಗುತ್ತಿದೆ. ಇದಕ್ಕೆ ನಿದರ್ಶನವೆಂಬಂತೆ ಶನಿವಾರ ಮಾನಸಗಂಗೋತ್ರಿಯ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನ ವಿಭಾಗದಲ್ಲಿ ವಿದ್ಯಾರ್ಥಿಗಳು ತರಗತಿಯ ಹೊರಗಡೆ



ಮಾನಸಗಂಗೋತ್ರಿಯ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನ ವಿಭಾಗದಲ್ಲಿ ವಿದ್ಯಾರ್ಥಿಗಳು ತರಗತಿಯ ಹೊರಗಡೆ ಕುಳಿತು ಪಾಠ ಕೇಳುತ್ತಿರುವುದು.

ಕುಳಿತು ಪಾಠ ಕೇಳುವಂತಾಗಿದೆ. ಎಂದಿನಂತೆ ವಿದ್ಯಾರ್ಥಿಗಳು ಬೆಳಗ್ಗೆ 10 ಗಂಟೆಗೆ ತರಗತಿಗೆ ಆಗಮಿಸಿದ್ದು, ವಿದ್ಯಾರ್ಥಿಗಳ ಹಿಂದೆಯೇ ಪ್ರಾಧ್ಯಾಪಕರಾದ ಪ್ರೊ.ಸಪ್ನ ಕೂಡ ಬಂದಿದ್ದಾರೆ. ಆದರೆ, ತರಗತಿ ಕೊಠಡಿಗಳ ಬಂದ್ ಆಗಿದ್ದರಿಂದ ಪ್ರೊ.ಸಪ್ನ, ಕಾರಿಡಾರ್‌ನಲ್ಲೇ ವಿದ್ಯಾರ್ಥಿಗಳಿಗೆ ಪಾಠ ಮಾಡಿದ್ದಾರೆ. ವಿದ್ಯಾರ್ಥಿಗಳು ತೀವ್ರ ಬೇಸರ ವ್ಯಕ್ತಪಡಿಸಿದ್ದು, ಇಲ್ಲಿ ಸಿಬ್ಬಂದಿ ಮನಸ್ಸೋ ಇಚ್ಛೆ ನಡೆದುಕೊಳ್ಳುತ್ತಿದ್ದಾರೆ ಎಂದು ಅಸಮಾದಾನ ಹೊರಹಾಕಿದ್ದಾರೆ. ವಿಭಾಗದಲ್ಲಿ ಇರುವುದೇ ಮೂವರು ಪ್ರಾಧ್ಯಾಪಕರು. ಇನ್ನೇನು ಪರೀಕ್ಷೆಗಳು ಹತ್ತಿರವಾಗುತ್ತಿದ್ದು, ಪಠ್ಯಕ್ರಮ ಮುಗಿಸಬೇಕಿದೆ. ಇದರ ನಡುವೆ ಒಬ್ಬೊಬ್ಬರು ಒಂದೊಂದು ಸಮಯಕ್ಕೆ ಬರುತ್ತಾರೆ. ಸಮಯ ಪಾಲನೆಯೇ ಇಲ್ಲದಂತಾಗಿದೆ. ಅಲ್ಲದೆ ಪಿಹೆಚ್‌ಡಿ ವಿದ್ಯಾರ್ಥಿಗಳಿಗೂ ತರಗತಿಗಳು ನಡೆಯುತ್ತಿಲ್ಲ ಎಂದು ಕೆಲ ವಿದ್ಯಾರ್ಥಿಗಳು ಆಕ್ಷೇಪಿಸಿದ್ದಾರೆ.

ಬೇರೆ ವಿಭಾಗಗಳಲ್ಲೂ ಇದೇ ಸಮಸ್ಯೆ: ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನ ವಿಭಾಗದಲ್ಲಿ ಮಾತ್ರವಲ್ಲದೆ ಇನ್ನಿತರೆ ಅಧ್ಯಯನ ವಿಭಾಗಗಳಲ್ಲಿಯೂ ಸಿಬ್ಬಂದಿ ಹಾಗೂ ಪ್ರಾಧ್ಯಾಪಕರ ನಡುವಿನ ಸಮನ್ವಯದ ಕೊರತೆಯಿಂದಾಗಿ ವಿದ್ಯಾರ್ಥಿಗಳು ಪರಿತಪಿಸುವಂತಾಗಿದೆ. ಈ ಬಗ್ಗೆ ಕೂಡಲೇ ವಿವಿ ಕುಲಪತಿಗಳ ಗಮನ ಹರಿಸಬೇಕು ಎಂದು ಹಿರಿಯ ವಿದ್ಯಾರ್ಥಿಗಳು ಆಗ್ರಹಿಸಿದ್ದಾರೆ.

ಎಂಸಿಡಿಸಿಸಿ ಬ್ಯಾಂಕ್ ನೂತನ ನಿರ್ದೇಶಕರಿಗೆ ಸನ್ಮಾನ...



ಮೈಸೂರು ತಾಲೂಕಿನಿಂದ ಮೈಸೂರು-ಚಾಮರಾಜನಗರ ಜಿಲ್ಲಾ ಸಹಕಾರ ಬ್ಯಾಂಕಿಗೆ ನಿರ್ದೇಶಕರಾಗಿ ಆಯ್ಕೆಯಾದ ಮೂಗನಹುಂಡಿ ಎಂ.ಕೆಂಚಪ್ಪ ಅವರನ್ನು ಕೇರ್ಗಳ್ಳಿ ಮಾಜಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಸಿ.ಬಸವೇಗೌಡರ ನೇತೃತ್ವದಲ್ಲಿ ಅಭಿನಂದಿಸಲಾಯಿತು. ಮುಖಂಡರಾದ ನಾಗಣ್ಣ, ಶಿವಪ್ಪ, ಶಿವಣ್ಣ, ಸಿದ್ದರಾಜು, ದೊಳ್ಳೇಗೌಡ, ಮಲ್ಲಯ್ಯ ಕುಮಾರ್, ಹುಚ್ಚಪ್ಪ, ವೀರಶೈವ ಮುಖಂಡರಾದ ಬಸವರಾಜು, ಚಿಕ್ಕಣ್ಣ, ಮಾದೇವಸ್ವಾಮಿ, ಸಿದ್ದಪ್ಪಾಜಿ, ರವಿಕುಮಾರ್ ಇನ್ನಿತರರಿದ್ದರು.

ಉಪನ್ಯಾಸಕರಿಗೆ ವೃತ್ತಿ ಗೌರವ ಇರಬೇಕು

ಮೈಸೂರು ವಿಶ್ವವಿದ್ಯಾನಿಲಯದ ಸಿಡಿಸಿ ನಿರ್ದೇಶಕ ಡಾ.ಕೆ.ಮಂಟೇಲಿಂಗು ಅಭಿಮತ

ಮೈಸೂರು, ಜೂ.29(ಎಸ್‌ಪಿಎನ್)- ಪ್ರತಿಯೊಬ್ಬ ಉಪನ್ಯಾಸಕ ಮತ್ತು ಶಿಕ್ಷಕ ವೃತ್ತಿಯಲ್ಲಿ ಪ್ರೀತಿ ಮತ್ತು ಗೌರವ ಹೊಂದಿರಬೇಕು ಎಂದು ಮೈಸೂರು ವಿವಿ ಕಾಲೇಜು ಅಭಿವೃದ್ಧಿ ಮಂಡಳಿ ನಿರ್ದೇಶಕ ಡಾ.ಕೆ.ಮಂಟೇಲಿಂಗು ಅಭಿಪ್ರಾಯಪಟ್ಟರು.



ಅಧ್ಯಾಪಕ ಕೌಶಲ ಅಭಿವೃದ್ಧಿ ಕೇಂದ್ರ ತರಬೇತಿ ಕಾರ್ಯಕ್ರಮ ಉದ್ಘಾಟಿಸಲಾಯಿತು

ಮೈಸೂರು-ಊಟಿ ರಸ್ತೆಯ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ಐಕ್ಯೂಎಸಿ ವತಿಯಿಂದ ಅಧ್ಯಾಪಕ ಕೌಶಲ್ಯ ಅಭಿವೃದ್ಧಿ ಕೇಂದ್ರ ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಕಾಯಕವೇ ಕೈಲಾಸ ಎಂಬ ಬಸವಣ್ಣನವರ ಹೇಳಿಕೆಗೆ ಬದ್ಧರಾಗಿ ಉಪನ್ಯಾಸಕರು ಮತ್ತು ಶಿಕ್ಷಕರು ಕೆಲಸ ಮಾಡಬೇಕು ಎಂದು ಕಿವಿಮಾತು ಹೇಳಿದರು.

ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳಾಗಿ ಬೆಳವಣಿಗೆ ಹೊಂದಲು ಅಲ್ಲಿನ ಬೋಧಕರ ಪಾತ್ರ ಪ್ರಮುಖವಾಗಿರುತ್ತದೆ. ಅಲ್ಲದೆ, ತಮ್ಮ ಕೆಲಸದಲ್ಲಿ ಶಿಸ್ತು, ಪ್ರಾಮಾಣಿಕತೆ ಮೈಗೂಡಿಸಿಕೊಳ್ಳಬೇಕು. ಇಲ್ಲದಿದ್ದರೆ, ವೃತ್ತಿಯಲ್ಲಿ ಹಿಡಿತ ಸಾಧಿಸಲು ಸಾಧ್ಯವಿಲ್ಲ. ಸಾಮಾಜಿಕ ಜಾಲತಾಣದಲ್ಲಿ ವ್ಯರ್ಥವಾಗಿ ಕಳೆಯದೆ ಸಮರ್ಪಕವಾಗಿ ಬಳಸಿಕೊಂಡು ಕೆಲಸ ನಿರ್ವಹಿಸುವಂತೆ ಸಲಹೆ ನೀಡಿದರು.

ಕಾಲೇಜು ಮುಖ್ಯ ಕಾರ್ಯನಿರ್ವಾಹಕ ಪ್ರೊ.ಬಿ.ವಿ.ಸಾಂಬಶಿವಯ್ಯ ಮಾತನಾಡಿ, ಅಧ್ಯಾಪಕರು ಬೋಧನಾ ನೈಪುಣ್ಯತೆ ಜೊತೆಗೆ ವಿಷಯ ಪ್ರಾವೀಣ್ಯತೆ ಪಡೆಯಬೇಕು. ಇದಕ್ಕಾಗಿ ಸಂಶೋಧನಾ ಸಾಮರ್ಥ್ಯ ಮತ್ತು ತಾಂತ್ರಿಕ ಕೌಶಲಗಳನ್ನು ಹೆಚ್ಚಿಸಿಕೊಳ್ಳಬೇಕು. ಹೊಸಹೊಸ ಪಠ್ಯಕ್ರಮಗಳನ್ನು ಅಳವಡಿಸಿಕೊಂಡು ಅಧ್ಯಾಪಕರ ಬೋಧನಾ ಸಾಮರ್ಥ್ಯ ಹೆಚ್ಚಿಸಿಕೊಳ್ಳುವಂತೆ ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಂಶುಪಾಲ ಡಾ.ಎಂ.ಪ್ರಭು, ಐಕ್ಯುಎಸಿ ಸಂಯೋಜಕ ಡಾ.ಎನ್.ರಾಜೇಂದ್ರ ಪ್ರಸಾದ್, ಇಂಗ್ಲಿಷ್ ವಿಭಾಗದ ಅಧ್ಯಾಪಕ ಕೆ.ಎನ್.ಮಂಜುಳಾ, ಸಸ್ಯಶಾಸ್ತ್ರ ವಿಭಾಗದ ಅಧ್ಯಾಪಕ ಡಾ.ಜಿ.ಎಂ.ಸಿಂಧೂ ಹಾಗೂ 190 ಮಂದಿ ಅಧ್ಯಾಪಕರಿದ್ದರು.

ಶ್ರೀ ಸದ್ಗುರು ಸೇವಾ ಟ್ರಸ್ಟ್‌ನಿಂದ ಸರ್ಕಾರಿ ಶಾಲೆ ವಿದ್ಯಾರ್ಥಿಗಳಿಗೆ ನೋಟ್‌ಬುಕ್ ವಿತರಣೆ



ಮೈಸೂರಿನ ಬೃಂದಾವನ ಬಡಾವಣೆಯ ಶ್ರೀ ಸದ್ಗುರು ಸೇವಾ ಟ್ರಸ್ಟ್ ವತಿಯಿಂದ ಎಚ್.ಡಿ.ಕೋಟೆ ತಾಲೂಕಿನ ಮಗ್ಗೆ ಗ್ರಾಮದ ಸರ್ಕಾರಿ ಶಾಲೆಯ ಬಡ ವಿದ್ಯಾರ್ಥಿಗಳಿಗೆ ನೋಟ್ ಬುಕ್‌ಗಳನ್ನು ಉಚಿತವಾಗಿ ವಿತರಿಸಲಾಯಿತು.

ಮೈಸೂರು, ಜೂ. 29- ಮೈಸೂರಿನ ಬೃಂದಾವನ ಬಡಾವಣೆಯ ಶ್ರೀ ಸದ್ಗುರು ಸೇವಾ ಟ್ರಸ್ಟ್ ವತಿಯಿಂದ ಎಚ್.ಡಿ.ಕೋಟೆ ತಾಲೂಕಿನ ಮಗ್ಗೆ ಗ್ರಾಮದ ಸರ್ಕಾರಿ ಶಾಲೆಯಲ್ಲಿ ಓದುತ್ತಿರುವ ಬಡ ವಿದ್ಯಾರ್ಥಿಗಳಿಗೆ ನೋಟ್‌ಬುಕ್ ಗಳನ್ನು ಉಚಿತವಾಗಿ ವಿತರಿಸಲಾಯಿತು.

ಟ್ರಸ್ಟ್‌ನ ಅಧ್ಯಕ್ಷ ರಾಘವೇಂದ್ರ ಶಾಸ್ತ್ರೀ ಮಾತನಾಡಿ, ಗ್ರಾಮೀಣ ಭಾಗದ ವಿದ್ಯಾರ್ಥಿಗಳು ನಿಜಕ್ಕೂ ಪ್ರತಿಭಾವಂತರು, ಅವರಿಗೆ ಗುಣಮಟ್ಟದ ಶಿಕ್ಷಣ ದೊರೆತರೆ ಉತ್ತಮ ಪ್ರಜೆಗಳಾಗಿ ವ್ಯಕ್ತಿತ್ವ ರೂಪಿಸಿಕೊಳ್ಳಬಹುದು ಎಂಬ ಉದ್ದೇಶದಿಂದ ಈ ಮಹತ್ಕಾರ್ಯವನ್ನು ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು.

ಕಳೆದ ಹಲವಾರು ವರ್ಷಗಳಿಂದ ಶ್ರೀ ಸದ್ಗುರು ಸೇವಾ ಟ್ರಸ್ಟ್ ಹಲವು ಉಪಯುಕ್ತ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಬರುತ್ತಿದ್ದು, ಪ್ರತಿವರ್ಷ ಜಿಲ್ಲೆಯ ವಿವಿಧ ತಾಲೂಕು ಹಾಗೂ ನಗರದ ಹಲವು ಸರ್ಕಾರಿ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಬಡ ವಿದ್ಯಾರ್ಥಿಗಳಿಗೆ ಉಚಿತವಾಗಿ ನೋಟ್ ಬುಕ್‌ಗಳನ್ನು ವಿತರಿಸುತ್ತಿದೆ ಎಂದರು.

ಜಿಲ್ಲಾ ಶಿಕ್ಷಣ ಉಪನಿರ್ದೇಶಕ ಜವರೇಗೌಡ ಮಾತನಾಡಿ, ಗ್ರಾಮೀಣ ಭಾಗದ ಬಡ ವಿದ್ಯಾರ್ಥಿಗಳಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಶ್ರೀ ಸದ್ಗುರು ಸೇವಾ ಟ್ರಸ್ಟ್ ನೋಟ್‌ಬುಕ್ ವಿತರಿಸುವ ಸಮಾಜಮುಖಿ ಕಾರ್ಯವನ್ನು ಶ್ಲಾಘಿಸಿದರು.

ಬಿಇಓ ಅನಂತರಾಜು ಮಾತನಾಡಿ, ಸರ್ಕಾರಿ ಶಾಲೆಯ ಪ್ರತಿಭಾವಂತ ವಿದ್ಯಾರ್ಥಿಗಳ ಕಲಿಕೆಗೆ ಪ್ರೋತ್ಸಾಹಿಸುವ ಉದ್ದೇಶದಿಂದ ಶ್ರೀ ಸದ್ಗುರು ಸೇವಾ ಟ್ರಸ್ಟ್ ಗ್ರಾಮೀಣ ಪ್ರದೇಶದಲ್ಲಿ ಉಚಿತ ನೋಟ್‌ಬುಕ್ ವಿತರಿಸುತ್ತಿದೆ ಎಂದರು.

ಟ್ರಸ್ಟ್ ಕಾರ್ಯದರ್ಶಿ ನಾಗರಾಜ್, ಖಜಾಂಚಿ ಸಚಿನ್ ಸವಿತ್ರ ಶರ್ಮ, ಪದಾಧಿಕಾರಿಗಳಾದ ಕೀರ್ತಿ ನಾರಾಯಣ, ಅಕ್ಷಯ್, ಮಂಜುನಾಥ್, ವಿವೇಕ್, ಉಷಾ, ಮಹೇಶ್ವರಿ, ಭಾಗ್ಯಲಕ್ಷ್ಮಿ, ಎಂ.ರಾಜು, ವರ್ಷ ಕುಲ್ಕರ್ಣಿ, ರೋಹಿಣಿ, ರಮೇಶ್, ಲಕ್ಷ್ಮೀಶ್, ಕಸ್ತೂರಿ ರಂಗನ್, ಶಿಕ್ಷಣ ಸಂಸ್ಥೆ ಅಧಿಕಾರಿಗಳು, ಮುಖ್ಯೋಪಾಧ್ಯಾಯರು, ಶಿಕ್ಷಕರು, ಸಿಬ್ಬಂದಿ ಇದ್ದರು.

ಜು.6, ಮೊಬೈಲ್ ಫೋಟೋಗ್ರಫಿ ವರ್ಕ್‌ಶಾಪ್


ಮೈಸೂರು, ಜೂ.29-'ಮೈಸೂರು ಮಿತ್ರ' ಪತ್ರಿಕೆಯಲ್ಲಿ ಅಂಕಣಕಾರರಾಗಿರುವ ಹವ್ಯಾಸಿ ಛಾಯಾಗ್ರಾಹಕರಾದ ಜಿ.ಎಲ್.ತ್ರಿಪುರಾಂತಕ ಅವರು ತಮ್ಮ ಮೀಡಿಯಾ ಸಂಸ್ಥೆ ಜಿ.ಎಲ್.ಟಿ.ವಿಷನ್ಸ್



ವತಿಯಿಂದ ಒಂದು ದಿನದ ಮೊಬೈಲ್ ಫೋಟೋಗ್ರಫಿ ಹಾಗೂ ವಿಡೀಯೋಗ್ರಫಿ ಕಾರ್ಯಾಗಾರವನ್ನು ಜು.6ರಂದು ಮೈಸೂರಿನ ಸರಸ್ವತಿಪುರಂನ ಜೆಎಸ್‌ಎಸ್ ಸಂಸ್ಥೆಯ ಸಭಾಂಗಣದಲ್ಲಿ ಏರ್ಪಡಿಸಿದ್ದಾರೆ.

ಮೈಸೂರಿನಲ್ಲಿ ಇದು 4ನೇ ಕಾರ್ಯಾಗಾರ. ಇವರೊಟ್ಟಿಗೆ ಹಿರಿಯ ಛಾಯಾಗ್ರಾಹಕ ಬಿ.ಎಸ್.ರಾಜಾರಾಂ ಕಾರ್ಯಾಗಾರದಲ್ಲಿ ತರಬೇತಿ ನೀಡಲಿದ್ದಾರೆ. ಸಾಧಾರಣ ಮೊಬೈಲ್ ಕ್ಯಾಮರಾದಲ್ಲಿಯೇ ಅಸಾಧಾರಣ ಚಿತ್ರ ಹಾಗೂ ವಿಡೀಯೋ ಮಾಡುವುದು ಹಾಗೂ ಮೊಬೈಲ್ ಆ್ಯಪ್‌ಗಳನ್ನು ಬಳಸಿ ಎಡಿಟಿಂಗ್ ಮಾಡುವ ವಿಧಾನಗಳನ್ನು ಪ್ರಾತ್ಯಕ್ಷಿಕೆ ಮೂಲಕ ತರಬೇತಿ ಕಾರ್ಯಾಗಾರದಲ್ಲಿ ತಿಳಿಸಿಕೊಡಲಿದ್ದಾರೆ. ಸಾಮಾಜಿಕ ಜಾಲ ತಾಣಗಳಲ್ಲಿ ಫೋಟೋ ಹಾಗೂ ವಿಡೀಯೋ ಗಳನ್ನು ಅಪ್‌ಲೋಡ್ ಮಾಡುವ ತರಬೇತಿ ನೀಡಲಿದ್ದಾರೆ. ಹೆಚ್ಚಿನ ಮಾಹಿತಿಗೆ ಮೊ. 9686677284 ಅನ್ನು ಸಂಪರ್ಕಿಸಬಹುದು.

ಕೆಂಪೇಗೌಡರ ಪ್ರತಿಮೆ ಬಳಿ ಸಂಭ್ರಮ



ಮೈಸೂರಿನ ಸಿದ್ಧಾರ್ಥನಗರದಲ್ಲಿ ಅನಾವರಣಗೊಂಡಿರುವ ನಾಡಪ್ರಭು ಕೆಂಪೇಗೌಡರ ಪ್ರತಿಮೆ ಮುಂಭಾಗ, ಇದಕ್ಕಾಗಿ ಶ್ರಮಿಸಿದ ಜಿಲ್ಲಾ ಪಂಚಾಯ್ತಿ ಮಾಜಿ ಸದಸ್ಯ ಮಾದೇಗೌಡ, ಒಕ್ಕಲಿಗರ ಸಂಘ ಸಿ.ಜಿ.ಪ್ರತಾಪ್, ಯರಗನಹಳ್ಳಿ ಕೆಂಪೇಗೌಡ ಯುವಕರ ಸಂಘದ ಪದಾಧಿಕಾರಿಗಳು ಹಾಗೂ ಕೆಂಪೇಗೌಡರ ಅಭಿಮಾನಿಗಳು ಕೆಂಪೇಗೌಡ ಜಯಂತಿ ಆಚರಿಸಿದರು.

ಸಿಎ ವಿದ್ಯಾರ್ಥಿಗಳಿಗೆ ಹಳೆ ಪುಸ್ತಕ ವಿತರಣೆ



ಭಾರತೀಯ ಜೈನ್ ಸಂಘಟನೆ (ಬಿಜೆಎಸ್), ಮೈಸೂರು ಸಂಘಟನೆಯಿಂದ ವಿದ್ಯಾಧಾನ್ ಯೋಜನೆಯಡಿ ಸಿಎ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಸುಮಾರು 250 ಹಳೇ ಪುಸ್ತಕಗಳನ್ನು ದಿ ಇನ್‌ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟ್ಸ್ ಆಫ್ ಇಂಡಿಯಾ, ಮೈಸೂರು ಶಾಖೆಗೆ ನೀಡಲಾಯಿತು. ಈ ವೇಳೆ ಶಾಖೆ ಆಡಳಿತಾಧಿಕಾರಿ ಮೇರಿ ಆನ್, ಪ್ರದೀಪ್, ಸಿಎ ಇನ್‌ಸ್ಟಿಟ್ಯೂಟ್ ಮೈಸೂರು ಶಾಖೆಯ ಸುರೇಶ್, ಬಿಜೆಎಸ್ ಅಧ್ಯಕ್ಷ ರಾಜನ್ ಬಾಗ್‌ಮಾರ್, ಪ್ರಾಜೆಕ್ಟ್ ಅಧ್ಯಕ್ಷ ಅಮಿತ್‌ಕುಮಾರ್ ಚೌಹಾನ್, ಮುಖ್ಯ ಕಾರ್ಯದರ್ಶಿ ಬಿ.ಕೆ.ದೀಪಕ್‌ಕುಮಾರ್ ಜೈನ್, ಖಜಾಂಚಿ ಪಿ.ಮನೋಹರ್ ಸಂಕ್ಲಾ, ಸಿಎ ಬಿ.ಉಮೇದ್‌ರಾಜ್‌ಜೈನ್ ಮತ್ತಿತರರು ಉಪಸ್ಥಿತರಿದ್ದರು.

ಜು.6, ಡಾ. ಬಾಬು ಜಗಜೀವನ್‌ರಾಂ ಪುಣ್ಯಸ್ಮರಣೆ


ಮೈಸೂರು, ಜೂ.29- 2025-26ನೇ ಸಾಲಿನಲ್ಲಿ ಜಿಲ್ಲಾಡಳಿತ, ಮೈಸೂರು ವತಿಯಿಂದ ರಾಷ್ಟ್ರ ನಾಯಕರಾದ ಹಸಿರು ಹರಿಕಾರ ಹಾಗೂ ಭಾರತದ ಮಾಜಿ ಉಪ ಪ್ರಧಾನಿ ಡಾ.ಬಾಬು ಜಗಜೀವನ್ ರಾಂ ಅವರ 39ನೇ ವರ್ಷದ ಪುಣ್ಯಸ್ಮರಣೆಯ ಅಂಗವಾಗಿ ಜುಲೈ 6 ರಂದು ಬೆಳಗ್ಗೆ 9.30 ಗಂಟೆಗೆ ಮೈಸೂರಿನ ರೈಲ್ವೆ ನಿಲ್ದಾಣದ ಮುಂಭಾಗದ ವೃತ್ತದಲ್ಲಿರುವ ಡಾ.ಬಾಬು ಜಗಜೀವನ್ ಪುತ್ಥಳಿಗೆ ಮಾಲಾರ್ಪಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ ರೆಡ್ಡಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶಿವಮ್ಮ ನಿಧನ



ಮೈಸೂರು,ಜೂ.29- ಇಲ್ಲಿನ ವಿದ್ಯಾನಗರದ ನಿವಾಸಿ, ದಿವಂಗತ ಬಸವರಾಜು ಅವರ ಪತ್ನಿ ಶಿವಮ್ಮ (74) ಭಾನುವಾರ ನಿಧನರಾದರು. ಮೃತರು ಮೈಸೂರು ದಕ್ಷಿಣ ಪೊಲೀಸ್ ಠಾಣೆ ಸಬ್ ಇನ್‌ಸ್ಪೆಕ್ಟರ್ ಬಿ.ಸುರೇಂದ್ರ ಆಡಿಟರ್ ಬಿ.ನಾಗರಾಜ್ ಸೇರಿದಂತೆ ಮೂವರು ಪುತ್ರರು, ಪುತ್ರಿ, ಮೂವರು ಸೊಸೆಯಂದಿರು, ಅಳಿಯ, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಭಾನುವಾರ ಸಂಜೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ


30.06.2025 ಸೋಮವಾರ, ಮಳೆ ನಕ್ಷತ್ರ: ಆರ್ದ್ರಾ, 22.06.2025ರಿಂದ 05.07.2025 ವಿಶ್ವವಸು ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಆಷಾಢ ಮಾಸ, ಶುಕ್ಲ ಪಕ್ಷ, ತಿಥಿ: ಪಂಚಮಿ, ನಕ್ಷತ್ರ: ಮಖ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 6.30ರಿಂದ ದೇಹ-ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9ರಿಂದ ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ, ಗರ್ಭಾಶಯ ಮುಖದಲ್ಲಿ ಹುಣ್ಣು (ಸರ್ವೈಕಲ್ ಎರೋಷನ್) ಶಿಬಿರ, ಕಾರ್ನಿಯಲ್ ಒಪೇಸಿಟಿ (ಕಾರ್ನಿಯಾದ ಅಪಾರದರ್ಶಕತೆ/ಕಣ್ಣಿನ ಹೂ)ಗೆ ಚಿಕಿತ್ಸಾ ಶಿಬಿರ, ಕುತ್ತಿಗೆ ಹಾಗೂ ಬೆನ್ನು ನೋವಿಗೆ ಆಕ್ಯೂಪಂಕ್ಚರ್ ಮತ್ತು ಯೋಗ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿ ರಸ್ತೆ, ಆಲನಹಳ್ಳಿ.
- **ಶ್ರೀ ಚಂದ್ರಮೌಳೀಶ್ವರ ಸ್ವಾಮಿ ದೇವಸ್ಥಾನಂ ಚಾರಿಟಬಲ್ ಟ್ರಸ್ಟ್ :** 83ನೇ ಜಯಂತ್ಯುತ್ಸವ-2025, ಬೆಳಗ್ಗೆ 9 ಗಂಟೆಯಿಂದ ಸಹಸ್ರನಾಮ ಹೋಮ, ಸ್ಥಳ: ಶ್ರೀ ಚಂದ್ರಮೌಳೀಶ್ವರ ಸ್ವಾಮಿ ದೇವಸ್ಥಾನ, ದೇವಸ್ಥಾನದ ರಸ್ತೆ, ವಾಣಿವಿಲಾಸ ಮೊಹಲ್ಲಾ.
- **ಕಾವೇರಿ ಆಯುರ್ವೇದ ಆಸ್ಪತ್ರೆ:** ಮುಟ್ಟಿನ ಸಮಯದಲ್ಲಿ ಅತಿಯಾದ ರಕ್ತಸ್ರಾವ, ಮುಖದಲ್ಲಿ ಮೊಡವೆಗೆ ಚಿಕಿತ್ಸಾ ಶಿಬಿರ, ಉತ್ತಮ ನಿದ್ರೆ ಅಭ್ಯಾಸ ಮತ್ತು ನಿದ್ರೆ ಸಮಸ್ಯೆ ನಿವಾರಣೆಯ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10ರಿಂದ.
- **ಮೈಸೂರು ವಿಶ್ವವಿದ್ಯಾನಿಲಯ:** ಶಿಕ್ಷಣ ಮಂಡಳಿ ಸಾಮಾನ್ಯ ಸಭೆ, ಸ್ಥಳ: ಶಿಕ್ಷಣ ಮಂಡಳಿ ಸಭಾಂಗಣ, ಕ್ರಾಫರ್ಡ್ ಭವನ, ಮೈಸೂರು ವಿವಿ, ಬೆಳಗ್ಗೆ 11.30ಕ್ಕೆ.
- **ಶ್ರೀ ರೇಣುಕಾ ಎಲ್ಲಮ್ಮ ಮತ್ತು ಶ್ರೀ ಕಬ್ಬಾಳಮ್ಮನವರ ದೇವಸ್ಥಾನ:** ಶ್ರೀ ರೇಣುಕಾ ಎಲ್ಲಮ್ಮ ಹಾಗೂ ಶ್ರೀ ಕಬ್ಬಾಳಮ್ಮನವರ 33ನೇ ವರ್ಷದ ಜಾತ್ರಾ ಮಹೋತ್ಸವ-2025, ಬೆಳಗ್ಗೆ 11 ಗಂಟೆಯಿಂದ ಅಮ್ಮನವರ ಹೂವಿನ ಕರಗ ಮೆರವಣಿಗೆ ಮೂಲಕ ಶ್ರೀರಂಗಪಟ್ಟಣದಲ್ಲಿ ವಿಸರ್ಜನೆ, ಸಂಜೆ 7 ಗಂಟೆಗೆ ಸಿದ್ಧಾರೂಢರ ಪೂಜೆ ಹಾಗೂ ಮಹಾಮಂಗಳಾರತಿ, ಪ್ರಸಾದ ವಿನಿಯೋಗ. ಸ್ಥಳ: ಶ್ರೀ ರೇಣುಕಾ ಎಲ್ಲಮ್ಮ ಮತ್ತು ಶ್ರೀ ಕಬ್ಬಾಳಮ್ಮನವರ ದೇವಸ್ಥಾನದ ಪ್ರಾಂಗಣ, ಕೊತ್ವಾಲ್ ರಾಮಯ್ಯ ರಸ್ತೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10-ಚಿಂತನ, 6.15-ಗೀತಾರಾಧನ, 6.35 ಮತ್ತು ಸಂಜೆ 6.10: ಸಸ್ಯ ಸಿರಿ, ಮನೆಯಂಗಳದಲ್ಲಿರುವ ಔಷಧೀಯ ಸಸ್ಯಗಳು, ಪ್ರಸ್ತುತಿ: ಡಾ.ಟಿ.ಶಿವಕುಮಾರ್, 6.40-ಅರಿವಿನ ಶಿಖರ, ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ-ಎಂ.ರಾಘವೇಂದ್ರ ಹಾಗೂ ಜಿ.ಪುಷ್ಪಲತಾ, ವ್ಯಾಖ್ಯಾನ-ಕೆ.ಎಲ್.ಪದ್ಮಿನಿ ಹೆಗಡೆ, 6.50-ರೈತರಿಗೆ ಸಲಹೆ, 7.15-ಭರವಸೆ ಹೊನಲು, ವೈದ್ಯರ ಕಿವಿಮಾತು, ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು-ಟ್ರಸ್ಟ್‌ವೆಲ್ ಆಸ್ಪತ್ರೆ, ಜೆ.ಸಿ.ರಸ್ತೆ, ಬೆಂಗಳೂರು, 8.30-ಕನ್ನಡ ಚಿತ್ರಗೀತೆಗಳು, 9.00-ನೆನಪಿನಂಗಳ (ಧ್ವನಿ ಭಂಡಾರದಿಂದ), 10.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಮೈಸೂರು ಎಸ್.ರಾಜಲಕ್ಷ್ಮೀ ಅವರ ನಿರ್ದೇಶನದಲ್ಲಿ ಸಪ್ತವೀಣಾ ವಾದನ, 10.30-ಹಿಂದಿ ಚಿತ್ರಗೀತೆಗಳು, 11.00-ಇಂದು ಸೇವಾ ನಿವೃತ್ತಿ ಹೊಂದುತ್ತಿರುವ ಮೈಸೂರು ಅಕಾಶವಾಣಿಯ ಸೀನಿಯರ್ ಟೆಕ್ನಿಷಿಯನ್ ಆರ್.ಪುಷ್ಪಲತಾ ಅವರೊಂದಿಗೆ ಸಂವಾದ. ಇವರೊಂದಿಗೆ ಭಾಗವಹಿಸುತ್ತಾರೆ, ಬಿ.ದಿಗ್ವಿಜಯ್, 11.30-ಇಂದು ಸೇವಾ ನಿವೃತ್ತಿ ಹೊಂದುತ್ತಿರುವ ಮೈಸೂರು ಆಕಾಶವಾಣಿಯ ಜಿ.ಮಂಜುನಾಥ್ ಗಿರಿ ಅವರೊಂದಿಗೆ ಸಂವಾದ. ಇವರೊಂದಿಗೆ ಭಾಗವಹಿಸುತ್ತಾರೆ -ಡಾ.ಮೈಸೂರು ಉಮೇಶ್, 12.05-ವನಿತಾ ವಿಹಾರ, 12.35-ದೇವರನಾಮ, 12.45-ನಮ್ಮ ಆರೋಗ್ಯ, ಭಾರತೀಯ ವೈದ್ಯರ ದಿನಾಚರಣೆ ಸಂದರ್ಭದಲ್ಲಿ ವೈದ್ಯರ ಕರ್ತವ್ಯ ಜವಾಬ್ದಾರಿ ಮತ್ತು ಕ್ಷೇಮಾಭಿವೃದ್ಧಿ ಕುರಿತು ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಮನೋವೈದ್ಯಕೀಯ ವಿಭಾಗದ ಪ್ರೊಫೆಸರ್ ಹಾಗೂ ಮುಖ್ಯಸ್ಥ ಡಾ.ಬಿ.ಎನ್.ರವೀಶ್ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ-ಬೇದ್ರೆ ಮಂಜುನಾಥ್, 1.00-ಪ್ರಗತಿ ಪಥ-ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳ ಸರಣಿ- ಅಲ್ಪಸಂಖ್ಯಾತರಿಗಾಗಿ ಇರುವ ಪ್ರಧಾನಮಂತ್ರಿಗಳ 15 ಅಂಶಗಳ ಕಾರ್ಯಕ್ರಮ, ಈ ಕುರಿತು ಮೈಸೂರಿನ ಪತ್ರಕರ್ತರಾದ ಬಿ.ಸತೀಶ್ ಆರಾಧ್ಯ ಅವರಿಂದ ಮಾಹಿತಿ, 1.20-ಭಾವಗೀತೆಗಳು-ಟಿ.ಎನ್.ಅಶ್ವಿನಿ, 2.30 ಪ್ರದೇಶ ಸಮಾಚಾರ, 2.40-ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಎಂ.ಕೆ.ಶಂಕರನ್ ನಂಬೂದರಿ-ಹಾಡುಗಾರಿಕೆ, 4.00-ಮಹಿಳಾರಂಗ, ಮಹಿಳಾ ಸಾಹಿತ್ಯರಂಗ ಕೇಳುಗರ ಪತ್ರಗಳನ್ನಾಧರಿಸಿದ ಕಾರ್ಯಕ್ರಮ, ಪ್ರಸ್ತುತಿ: ದಿಗ್ವಿಜಯ್ ಬಿ, ಕೀರ್ತನ.ವಿ ಹಾಗೂ ಸಹನ, 4.45-ಹಿಂದಿ ಪಾಠ, ಪ್ರಸ್ತುತಿ: ಸ್ಮಿತಾ ಚಿಪ್ಳೂಣ್ಕರ್, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ: ಭತ್ತದ ಬೇಸಾಯ ಕುರಿತ ನೇರಫೋನ್ ಇನ್ ಕಾರ್ಯಕ್ರಮ, ಭಾಗವಹಿಸುತ್ತಾರೆ: ಮಂಡ್ಯದ ವಿ.ಸಿ.ಫಾರಂ ವಲಯ ಕೃಷಿ ಸಂಶೋಧನ ಕೇಂದ್ರದ ಪ್ರಾಧ್ಯಾಪಕರಾದ ಡಾ.ದಿನೇಶ್ ಜಿ.ಆರ್. ಮತ್ತು ಸಹಾಯಕ ಪ್ರಾಧ್ಯಾಪಕರಾದ ಡಾ.ಸಿ.ಎ.ದೀಪಕ್, ಪ್ರಸ್ತುತಿ-ಎನ್.ಕೇಶವಮೂರ್ತಿ, 7.45-ಕನ್ನಡ ಚಿತ್ರಗೀತೆಗಳು, 8.00-ಯುವವಾಣಿ, ಯುವ ಪ್ರತಿಭೆ, ವರ್ಣಚಿತ್ರ, ಗಂಜೀಫಾ ಮತ್ತು ಟ್ಯಾಟೂ ಕಲಾವಿದೆ ಮೈಸೂರಿನ ಸಹನಾ.ಎಸ್.ವಿ. ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ-ಬೇದ್ರೆ ಮಂಜುನಾಥ, 8.30-ಹಿಂದಿ ಚಿತ್ರಗೀತೆ, 9.30-ಕರ್ನಾಟಕ ಶಾಸ್ತ್ರೀಯ ಸಂಗೀತ -ಡಾ.ಸಿ.ಎ.ಶ್ರೀಧರ್, ವೇಣುವಾದನ, 10.00-ಯಕ್ಷಸಂಪದ, ಬಡಗು ತಿಟ್ಟಿನ ಯಕ್ಷಗಾನ ಮಟ್ಟುಗಳ ರೇಡಿಯೋ ಪ್ರಾತ್ಯಕ್ಷಿಕೆ. ಪ್ರಸ್ತುತಿ: ದಿವಾಕರ ಹೆಗಡೆ, 10.30-ಸವಿನೆನಪು.



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 30 ಸೋಮವಾರ 2025

46

ಸಂಪುಟ: 46 | ಸಂಚಿಕೆ: 74 | ಪುಟಗಳು: 12


ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಇಂದು ಕೆಆರ್‌ಎಸ್ ಜಲಾಶಯಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಬಾಗಿನ ಅರ್ಪಣೆ


ಫೈಲ್ ಚಿತ್ರ



ಮೈಸೂರು, ಜೂ.29(ಬಿಎಲ್‌ಯು)– ಕೃಷ್ಣರಾಜಸಾಗರ (ಕೆಆರ್‌ಎಸ್)ಜಲಾಶಯದಲ್ಲಿ ತುಂಬಿ ತುಳುಕುತ್ತಿರುವ ಜೀವ ನದಿ ಕಾವೇರಿಗೆ ನಾಳೆ (ಜೂನ್ 30) ಮುಖ್ಯಮಂತ್ರಿ ಸಿದ್ದರಾಮಯ್ಯ ಬಾಗಿನ ಅರ್ಪಿಸಲಿದ್ದಾರೆ.

ನಾಳೆ ಬೆಳಿಗ್ಗೆ 9.30 ಗಂಟೆಗೆ ಬೆಂಗಳೂರಿನ ಹೆಚ್‌ಎಎಲ್ ವಿಮಾನ ನಿಲ್ದಾಣದಿಂದ ವಿಶೇಷ ವಿಮಾನದಲ್ಲಿ ಹೊರಡುವ ಸಿದ್ದರಾಮಯ್ಯ ಅವರು 9.55ಕ್ಕೆ ಮೈಸೂರು ವಿಮಾನ ನಿಲ್ದಾಣಕ್ಕೆ ಆಗಮಿಸುವರು. ತುವಾಯ ಮೈಸೂರಿನ ಸರ್ಕಾರಿ ಅತಿಥಿ ಗೃಹಕ್ಕೆ ಆಗಮಿಸುವ ಸಿದ್ದರಾಮಯ್ಯ ಅವರು ಅಲ್ಲಿಂದ ಸಚಿವರು, ಶಾಸಕರು ಹಾಗೂ ಅಧಿಕಾರಿಗಳ ಜೊತೆ ಕೆಎಸ್‌ಆರ್‌ಟಿಸಿ ಐರಾವತ ಬಸ್‌ನಲ್ಲಿ ಕೆಆರ್‌ಎಸ್‌ಗೆ ತೆರಳುವರು. ಬೆಳಿಗ್ಗೆ 11 ಗಂಟೆಗೆ ಕೃಷ್ಣರಾಜಸಾಗರ ಜಲಾಶಯದಲ್ಲಿ ಕಾವೇರಿ ಮಾತೆಗೆ ಪೂಜೆ ಸಲ್ಲಿಸುವ ಸಿದ್ದರಾಮಯ್ಯ ಅವರು ಸಂಪ್ರದಾಯದಂತೆ ಬಾಗಿನ ಅರ್ಪಿಸುವರು. ನಂತರ ಕಾವೇರಿ ಪ್ರತಿಮೆ ಬಳಿ ನಡೆಯುವ ಸಾರ್ವಜನಿಕ ಸಮಾರಂಭದಲ್ಲಿ ಪಾಲ್ಗೊಳ್ಳುವರು.

ಸಾಮಾನ್ಯವಾಗಿ ಆಗಸ್ಟ್ ತಿಂಗಳಲ್ಲಿ ಕೆಆರ್‌ಎಸ್ ಭರ್ತಿಯಾಗುತ್ತಿದ್ದ ಕಾರಣ ಆಗ ಮುಖ್ಯಮಂತ್ರಿಗಳು ಬಾಗಿನ ಅರ್ಪಿಸುತ್ತಿದ್ದರು. ಆದರೆ ಈ ಬಾರಿ ಜೂನ್ ತಿಂಗಳಲ್ಲೆ ಕೆಆರ್‌ಎಸ್ ಜಲಾಶಯ ತುಂಬಿ ತುಳುಕುತ್ತಿರುವುದು ದಾಖಲೆಯಾಗಿದೆ. ಕೊಡಗು ಜಿಲ್ಲೆಯಲ್ಲಿ ಎಡೆಬಿಡದೆ ಭಾರಿ ಮಳೆ ಸುರಿಯುತ್ತಿದ್ದು, ಕಾವೇರಿ ನದಿ ಭೋರ್ಗರೆಯುತ್ತಾ ಹರಿಯುತ್ತಿದೆ. ಇದರಿಂದ ಒಂದೊವರೆ ತಿಂಗಳ ಮೊದಲೇ ಕೆಆರ್‌ಎಸ್ ಜಲಾಶಯ ಭರ್ತಿಯಾಗಿದೆ.

ಕೆಆರ್‌ಎಸ್ ಜಲಾಶಯದ ಇಂದಿನ ಮಟ್ಟ

ಕೃಷ್ಣರಾಜಸಾಗರ ಜಲಾಶಯದ ಗರಿಷ್ಠ ಮಟ್ಟ 124.80 ಅಡಿಗಳಾಗಿದ್ದು, ಇಂದಿನ ಮಟ್ಟ ಕೂಡ 124.80 ಅಡಿಗಳಾಗಿದೆ. ಅಂದರೆ ಪೂರ್ಣ ಪ್ರಮಾಣದಲ್ಲಿ ಜಲಾಶಯ ತುಂಬಿ ತುಳುಕುತ್ತಿದೆ. ಜಲಾಶಯಕ್ಕೆ 46,501 ಕ್ಯುಸೆಕ್ ನೀರು ಹರಿದು ಬರುತ್ತಿದ್ದು, 21,463 ಕ್ಯುಸೆಕ್ ನೀರು ಜಲಾಶಯದಿಂದ ಹೊರಗೆ ಬಿಡಲಾಗುತ್ತಿದೆ. ಜಲಾಶಯದಲ್ಲಿ ಇಂದು 49 ಟಿಎಂಸಿ ನೀರು ಸಂಗ್ರಹವಾಗಿದೆ.

ಕಾಂಗ್ರೆಸ್‌ನಲ್ಲಿ ಅಸಮಾಧಾನ ಸ್ಫೋಟ ಹಿನ್ನೆಲೆ

ಇಂದು ಬೆಂಗಳೂರಿಗೆ ಸುರ್ಜೇವಾಲ

- ಕೆಪಿಸಿಸಿ ಕಚೇರಿಯಲ್ಲಿ ಶಾಸಕರೊಂದಿಗೆ ಒನ್ ಟು ಒನ್ ಚರ್ಚೆ
- 40ಕ್ಕೂ ಹೆಚ್ಚು ಶಾಸಕರನ್ನು ಸ್ವತಃ ಆಹ್ವಾನಿಸಿರುವ ಸುರ್ಜೇವಾಲ
- ಪ್ರತಿ ಶಾಸಕರಿಗೂ ಚರ್ಚೆಗೆ 10 ನಿಮಿಷ ನಿಗದಿ

ಬೆಂಗಳೂರು, ಜೂ. 29– ಆಡಳಿತಾರೂಢ ಕಾಂಗ್ರೆಸ್‌ನಲ್ಲಿ ಅಸಮಾಧಾನ ಸ್ಫೋಟಗೊಂಡಿದೆ. ಕೆಲವು ಶಾಸಕರೇ ಸರ್ಕಾರದ ಕಾರ್ಯವೈಖರಿ ವಿರುದ್ಧ ಬಹಿರಂಗ ಹೇಳಿಕೆಗಳನ್ನು ನೀಡುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಅಸಮಾಧಾನವನ್ನು ಶಮನಗೊಳಿಸುವ ನಿಟ್ಟಿನಲ್ಲಿ ಕರ್ನಾಟಕ ಕಾಂಗ್ರೆಸ್ ಉಸ್ತುವಾರಿ, ರಣದೀಪ್ ಸಿಂಗ್ ಸುರ್ಜೇವಾಲ ನಾಳೆ (ಸೋಮವಾರ) ಬೆಂಗಳೂರಿಗೆ ಆಗಮಿಸಲಿದ್ದಾರೆ.

ಸುರ್ಜೇವಾಲ ಅವರು ಕೆಪಿಸಿಸಿ ಕಚೇರಿಯಲ್ಲಿ ಶಾಸಕರೊಂದಿಗೆ ಪ್ರತ್ಯೇಕವಾಗಿ ಒನ್ ಟು ಒನ್ ಚರ್ಚೆ ನಡೆಸಲಿದ್ದು, ಅವರೇ ಸರಿಸುಮಾರು 40ಕ್ಕೂ ಹೆಚ್ಚು ಶಾಸಕರನ್ನು ಆಹ್ವಾನಿಸಿದ್ದಾರೆ ಎಂದು ಮೂಲಗಳು ತಿಳಿಸಿದ್ದು, ಪ್ರತಿ ಶಾಸಕರಿಗೂ ಚರ್ಚೆಗೆ 10 ನಿಮಿಷ ಸಮಯ ನಿಗದಿ ಮಾಡಿದ್ದಾರೆ ಎಂದು ಹೇಳಲಾಗಿದೆ. ಇದನ್ನು ಖಚಿತಪಡಿಸಿರುವ ಕೆಪಿಸಿಸಿ ಅಧ್ಯಕ್ಷರೂ ಆದ ಉಪ ಮುಖ್ಯಮಂತ್ರಿ



ಡಿ.ಕೆ. ಶಿವಕುಮಾರ್, ನಾಳೆ ಸುರ್ಜೇವಾಲ ಅವರು ಬೆಂಗಳೂರಿಗೆ ಬರುತ್ತಿದ್ದು, ಶಾಸಕರೊಂದಿಗೆ ಚರ್ಚೆ ನಡೆಸಲಿದ್ದಾರೆ. ಅವರೇ ಪ್ರತಿಯೊಬ್ಬರಿಗೂ ಮಾಹಿತಿ ನೀಡಿದ್ದಾರೆ. ನನಗೂ ಮಾಹಿತಿ ಬಂದಿದ್ದು, ಅದನ್ನು ನಮ್ಮ ಎಲ್ಲಾ ಶಾಸಕರಿಗೂ ತಿಳಿಸಿದ್ದೇನೆ ಎಂದರು.

ಸೆಪ್ಟೆಂಬರ್‌ನಲ್ಲಿ ಕ್ರಾಂತಿ ನಡೆಯಲಿದೆ ಎಂದು ಇತ್ತೀಚೆಗೆ ಸಹಕಾರ ಸಚಿವ ಕೆ.ಎನ್. ರಾಜಣ್ಣ ನೀಡಿದ ಹೇಳಿಕೆ ಕಾಂಗ್ರೆಸ್‌ನಲ್ಲಿ ಬಿರುಗಾಳಿ ಎಬ್ಬಿಸಿದೆ. ಅದೇ ವೇಳೆ ಮುಖ್ಯಮಂತ್ರಿ ಬದಲಾವಣೆಯಾಗುತ್ತಾರೆ, ಸಂಪುಟ ಪುನಾರಚನೆ ಆಗುತ್ತದೆ ಎಂದು ಕಾಂಗ್ರೆಸ್‌ನಲ್ಲಿ ಚರ್ಚೆಗಳು ನಡೆಯುತ್ತಿವೆ. ಇದನ್ನೇ ಬಿಜೆಪಿ ರಾಜಕೀಯ ಅಸ್ತ್ರ ಮಾಡಿಕೊಂಡಿದೆ.

ಮತ್ತೊಂದೆಡೆ ವಸತಿ ಇಲಾಖೆಯಲ್ಲಿ ಮನೆ ಮಂಜೂರಾತಿಗೆ ಲಂಚ ಪಡೆಯಲಾಗುತ್ತಿದೆ ಎಂದು ಆಳಂದ ಶಾಸಕ ಬಿ.ಆರ್. ಪಾಟೀಲ್ ಬಹಿರಂಗ ಹೇಳಿಕೆ ನೀಡಿದರೆ, ಅನುದಾನ ಬಿಡುಗಡೆಯಾಗದೆ ಯಾವುದೇ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿಲ್ಲ. ನಾನು ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡುವ ಬಗ್ಗೆ ಚಿಂತನೆ ನಡೆಸಿದ್ದೇನೆ ಎಂದು ಕಾಗವಾಡ ಶಾಸಕ ರಾಜುಕಾಗೆ ಹೇಳಿಕೆ ನೀಡಿದ್ದರು. ಬಿಜೆಪಿಯಂತೂ ವಸತಿ ಸಚಿವ ಜಮೀರ್ ಅಹಮ್ಮದ್ ಖಾನ್ ರಾಜೀನಾಮೆಗೆ ಆಗ್ರಹಿಸಿದೆ. ಶಾಸಕ ಇಕ್ಬಾಲ್ ಹುಸೇನ್ ಅವರು 2–3 ತಿಂಗಳಲ್ಲಿ ಡಿ.ಕೆ.ಶಿವಕುಮಾರ್ ▶ 6ನೇ ಪುಟಕ್ಕೆ

ದಸರಾ ಮಹೋತ್ಸವ: ಕ್ಯಾಪ್ಟನ್ ಅಭಿಮನ್ಯು ನೇತೃತ್ವದ ಗಜಪಡೆ ಆಯ್ಕೆ ಪ್ರಕ್ರಿಯೆ ಆರಂಭ

- ಆರು ಕ್ಯಾಂಪ್‌ಗಳಿಗೆ ಭೇಟಿ ನೀಡಿ ಆನೆಗಳ ಪರಿಶೀಲನೆ
- 25ಕ್ಕೂ ಹೆಚ್ಚು ಆನೆಗಳ ಆರೋಗ್ಯ ಪರಿಸ್ಥಿತಿ ಅವಲೋಕನ
- ಶೀಘ್ರದಲ್ಲಿಯೇ 15 ಆನೆಗಳ ಅಂತಿಮ ಪಟ್ಟಿ ತಯಾರು
- ಆ.4ರಂದು ಗಜಪಯಣ, ಆ.7ರಂದು ಅರಮನೆಗೆ ಆಗಮನ

● ಎಂ.ಟಿ.ಯೋಗೇಶ್ ಕುಮಾರ್


ಫೈಲ್ ಚಿತ್ರ

ಮೈಸೂರು, ಜೂ.29– ಈ ಸಾಲಿನ ನಾಡ ಹಬ್ಬ ದಸರಾ ಮಹೋತ್ಸವವನ್ನು ವಿಜೃಂಭಣೆಯಿಂದ ಆಚರಿಸಲು ಸರ್ಕಾರ ನಿರ್ಧರಿಸಿರುವ ಬೆನ್ನಲ್ಲೆ ಅಂಬಾರಿ ಆನೆ ಕ್ಯಾಪ್ಟನ್ ಅಭಿಮನ್ಯು ನೇತೃತ್ವದ ಗಜಪಡೆ ಆಯ್ಕೆ ಪ್ರಕ್ರಿಯೆಯನ್ನು ಅರಣ್ಯ ಇಲಾಖೆ ಬಿರುಸಾಗಿ ಆರಂಭಿಸಿದೆ.

ಹಲವು ವರ್ಷಗಳ ಬಳಿಕ ಈ ಬಾರಿ 11 ದಿನ ದಸರಾ ಮಹೋತ್ಸವದ ಆಚರಣೆಯಿದ್ದು, ಸೆ.22ರಂದು ಆರಂಭವಾಗಿ ಅಕ್ಟೋಬರ್ 2ರಂದು ಜಂಬೂಸವಾರಿ ಜರುಗಲಿದೆ. ಅದಕ್ಕಾಗಿ ದಸರಾ ಮಹೋತ್ಸವದಲ್ಲಿ ಪ್ರಮುಖ ಪಾತ್ರವಹಿಸುವ ಗಜಪಡೆ ಆಯ್ಕೆ ಪ್ರಕ್ರಿಯೆ ಪ್ರತಿವರ್ಷದಂತೆ ಈ ಬಾರಿಯೂ ಅರಣ್ಯ ಇಲಾಖೆಗೆ ಸವಾಲಾಗಿ ಪರಿಣಮಿಸಿದ್ದು, ಜಂಬೂಸವಾರಿಗೂ 45 ದಿನ ಮುನ್ನವೇ ತಾಲೀಮು ಆರಂಭಿಸಬೇಕಾಗಿರುವುದರಿಂದ ಅರಣ್ಯ ಇಲಾಖೆ ಆನೆಗಳ ಆಯ್ಕೆ ಪ್ರಕ್ರಿಯೆ ಪ್ರಾರಂಭಿಸಿದೆ.

ಈ ಬಾರಿಯೂ ಕ್ಯಾಪ್ಟನ್ ಅಭಿಮನ್ಯು ನಾಯಕತ್ವ ವಹಿಸುವುದರಿಂದ ಪರ್ಯಾಯ ಆನೆ ಸೇರಿದಂತೆ ವಿವಿಧ ಜವಾಬ್ದಾರಿ ▶ 6ನೇ ಪುಟಕ್ಕೆ

ಆಯ್ಕೆ ಪ್ರಕ್ರಿಯೆ ಆರಂಭಿಸಲಾಗಿದೆ

ದಸರಾ ಗಜಪಡೆ ಆಯ್ಕೆಗೆ ಪ್ರಕ್ರಿಯೆ ಆರಂಭಿಸಲಾಗಿದೆ. ಕ್ಯಾಂಪ್‌ಗಳಿಗೆ ತೆರಳಿ ಆನೆಗಳನ್ನು ಪರಿಶೀಲಿಸಲಾಗಿದೆ. ಅಂತಿಮ ಆಯ್ಕೆ ಪಟ್ಟಿ ತಯಾರಿಸಿದ ಬಳಿಕ ಅದನ್ನು ಬೆಂಗಳೂರಿನ ಅರಣ್ಯ ಇಲಾಖೆಯ ಮುಖ್ಯ ಕಚೇರಿಗೆ ಕಳುಹಿಸಲಾಗುತ್ತದೆ. ಅದನ್ನು ಅರಣ್ಯ ಸಚಿವರು ಬಿಡುಗಡೆ ಮಾಡಲಿದ್ದಾರೆ.

-ಡಾ.ಐ.ಬಿ.ಪ್ರಭುಗೌಡ, ಡಿಸಿಎಫ್, ಮೈಸೂರು ವನ್ಯಜೀವಿ ವಿಭಾಗ

CIVIL ENGINEER
EXP : 8+ YEARS STRONG
FOUNDATION IN CONSTRUCTION
MANAGEMENT. KNOWLEDGE IN BOM,
BOQ AND BBS CALCULATIONS
LOCATION : BANGALORE & MYSORE
9606031376 | 7619272225

2026ರ ಏಪ್ರಿಲ್ 1ರಿಂದ ಜನಗಣತಿ ಆರಂಭ

ನವದೆಹಲಿ, ಜೂ. 29– ಮುಂಬರುವ ಜನಗಣತಿಗಾಗಿ ಮನೆಗಳ ಪಟ್ಟಿ ಮಾಡುವ ಕಾರ್ಯಾಚರಣೆ (ಎಚ್‌ಎಲ್‌ಒ) 2026ರ ಏ.1ರಂದು ಪ್ರಾರಂಭವಾಗಲಿದೆ. ಮನೆ ಪಟ್ಟಿ ಕಾರ್ಯಾಚರಣೆಯೊಂದಿಗೆ ಜನಗಣತಿಯ ಮೊದಲ ಹಂತಕ್ಕೆ ಚಾಲನೆ ದೊರೆಯಲಿದೆ ಎಂದು ರಿಜಿಸ್ಟ್ರಾರ್ ಜನರಲ್ ಮತ್ತು ಭಾರತದ ಜನಗಣತಿ ಆಯುಕ್ತ ಮೃತ್ಯುಂಜಯ್ ಕುಮಾರ್ ನಾರಾಯಣ್ ತಿಳಿಸಿದ್ದಾರೆ.

ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಮುಖ್ಯ ಕಾರ್ಯದರ್ಶಿಗಳಿಗೆ ಈ ಬಗ್ಗೆ

ಭಾರತದ ಜನಗಣತಿ ಆಯುಕ್ತ ಮೃತ್ಯುಂಜಯಕುಮಾರ್



ಪತ್ರ ಬರೆದಿದ್ದು, ಮೊದಲ ಹಂತದ ಆರಂಭಕ್ಕೂ ಮುನ್ನ ಗಣತಿದಾರರು ಮತ್ತು ಮೇಲ್ವಿಚಾರಕರ ನೇಮಕಾತಿ ಹಾಗೂ ಅವರಿಗೆ ಕೆಲಸದ ಹಂಚಿಕೆಯನ್ನು ರಾಜ್ಯ ಸರ್ಕಾರಗಳು ಮತ್ತು ಜಿಲ್ಲಾಡಳಿತದ ಸಹಕಾರದೊಂದಿಗೆ ಮಾಡಲಾಗುತ್ತದೆ ಎಂದಿದ್ದಾರೆ.

ಜನಗಣತಿ ಎರಡು ಹಂತಗಳಲ್ಲಿ ನಡೆಯಲಿದ್ದು, ಮೊದಲ ಹಂತದಲ್ಲಿ ಮನೆ ಪಟ್ಟಿ ಕಾರ್ಯಾಚರಣೆ ಕೈಗೊಳ್ಳಲಾಗುತ್ತದೆ. ಇಲ್ಲಿ ದೇಶದ ಪ್ರತಿಯೊಂದು ಕಟ್ಟಡಕ್ಕೆ ಭೇಟಿ ನೀಡಿ ಕಟ್ಟಡಗಳು ಮತ್ತು ಮನೆಗಳ ಗುಣಲಕ್ಷಣಗಳನ್ನು ದಾಖಲಿಸಲಾಗುತ್ತದೆ. ಪ್ರತಿ ಮನೆಯಲ್ಲಿರುವ ಸ್ವತ್ತುಗಳ ▶ 6ನೇ ಪುಟಕ್ಕೆ

ಬೇಕಾಗಿದ್ದಾರೆ
ಚಿನ್ನ, ಬೆಳ್ಳಿ ಕೆಲಸ ಮಾಡಲು ಆಚಾರಿಗಳು ಬೇಕಾಗಿದ್ದಾರೆ
9164946160
8548089469

ಬಳ್ಳಾರಿಯಲ್ಲಿ 88ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ: ಅಧ್ಯಕ್ಷರಾಗಿ ಬಾನು ಮುಷ್ತಾಕ್ ಆಯ್ಕೆ



ಬಳ್ಳಾರಿ. ಜೂ.29– ಡಿಸೆಂಬರ್‌ನಲ್ಲಿ ಬಳ್ಳಾರಿಯಲ್ಲಿ ನಡೆಯಲಿರುವ 88ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಹಿರಿಯ ಲೇಖಕಿ ಹಾಗೂ ಬೂಕರ್ ಪ್ರಶಸ್ತಿ ವಿಜೇತೆ ಬಾನು ಮುಷ್ತಾಕ್ ಅವರನ್ನು ಆಯ್ಕೆ ಮಾಡಲಾಗಿದೆ.

ಬಳ್ಳಾರಿಯಲ್ಲಿನ ಖಾಸಗಿ ಹೋಟೆಲ್‌ನಲ್ಲಿ ಭಾನುವಾರ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ ಸಮಿತಿ ಸಭೆ ನಡೆಯಿತು. ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಷಿ, ಬಳ್ಳಾರಿಯಲ್ಲಿ ಡಿಸೆಂಬರ್‌ನಲ್ಲಿ ನಡೆಯಲಿರುವ 88ನೇ ಅಖಿಲ ಭಾರತ ಕನ್ನಡ ಸಾಹಿತ್ಯ ▶ 6ನೇ ಪುಟಕ್ಕೆ

ಬೇಕಾಗಿದ್ದಾರೆ
ಮೈಸೂರಿನ ಖಾಸಗಿ ಕಂಪನಿಗೆ,
Fortuner ಮತ್ತು Automatic
ಕಾರು ಓಡಿಸುವ ಡ್ರೈವರ್ಸ್‌ಗಳು ಬೇಕಾಗಿದ್ದಾರೆ.
ಸಂಬಳ: 25,000
ಮತ್ತು ಟೆಲಿಕಾಲಿಂಗ್ ಕಛೇರಿಯ ಕೆಲಸ ಮಾಡಲು ಹುಡುಗಿಯರು ಬೇಕಾಗಿದ್ದಾರೆ.
8548089469/9164946160

ಪುರಿಯ ಗುಂಡಿಚಾ ದೇವಸ್ಥಾನ ಹೊರಗೆ ಕಾಲ್ತುಳಿತದಲ್ಲಿ ಮೂವರು ಸಾವು

50ಕ್ಕೂ ಹೆಚ್ಚು ಮಂದಿಗೆ ಗಾಯ, 6 ಮಂದಿ ಚಿಂತಾಜನಕ




ಭುವನೇಶ್ವರ/ಪುರಿ, ಜೂ.29– ಭಾನುವಾರ ಬೆಳಗಿನ ಜಾವ ಪುರಿಯ ಗುಂಡಿಚಾ ದೇವಸ್ಥಾನದ ಮುಂದೆ ಸಂಭವಿಸಿದ ಕಾಲ್ತುಳಿತದಲ್ಲಿ ಇಬ್ಬರು ಮಹಿಳೆಯರು ಸೇರಿದಂತೆ ಮೂವರು ಭಕ್ತರು ಮೃತಪಟ್ಟಿದ್ದು, 50ಕ್ಕೂ ಹೆಚ್ಚು ಮಂದಿಗೆ ಗಾಯಗಳಾಗಿದ್ದು, 6 ಮಂದಿಯ ಸ್ಥಿತಿ ಗಂಭೀರವಾಗಿದೆ.

ರಥಯಾತ್ರೆಯ ರಥ ಎಳೆಯುವ ಆಚರಣೆ ಮುಗಿದು ಗುಂಡಿಚಾ ದೇವಸ್ಥಾನದ ಮುಂದೆ ಮೂರು ರಥಗಳನ್ನು ನಿಲ್ಲಿಸಿದ ನಂತರ ನಸುಕಿನ ಜಾವ 3.30 ರಿಂದ 4.30ರ ನಡುವೆ ಈ ಘಟನೆ ಸಂಭವಿಸಿದೆ. ಅಧಿಕಾರಿಗಳ ಪ್ರಕಾರ, ಇಬ್ಬರು ಸ್ಥಳದಲ್ಲೇ ಸಾವನ್ನಪ್ಪಿದರೆ, ಮೂರನೆಯವರು ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ.

ಪುರಿ ಜಿಲ್ಲಾಧಿಕಾರಿ ಸಿದ್ಧಾರ್ಥ್ ಶಂಕರ್ ಸ್ವೈನ್ ಮಾಧ್ಯಮಗಳಿಗೆ ಈ ಸಾವನ್ನು ದೃಢಪಡಿಸಿದರು, ಇತರ ಆರು ಜನರನ್ನು ಪುರಿ ಜಿಲ್ಲಾ ಕೇಂದ್ರ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಹೇಳಿದರು. ಮೃತರನ್ನು ಬೋಲಗಢದ ಬಸಂತಿ ಸಾಹು (36), ಬಲಿಪಟ್ಣದ ಪ್ರವತಿ ದಾಸ್ (45) ಮತ್ತು ಖುರ್ದಾದ ಪ್ರೇಮಕಾಂತ್ ಮೊಹಂತಿ (78) ಎಂದು ಗುರುತಿಸಲಾಗಿದೆ.

ಕಾಲ್ತುಳಿತ ಹೇಗೆ ಸಂಭವಿಸಿತು: ಪಹಾಡ ಭಂಗ ಎಂದು ಕರೆಯಲ್ಪಡುವ ಬೆಳಗಿನ ಆಚರಣೆಗಳು ಪ್ರಾರಂಭವಾದಾಗ ದುರಂತವು ನಡೆದುಹೋಯಿತು. ರಥಗಳ ಮೇಲಿರುವ ದೇವರನ್ನು ನೋಡಲು ಉತ್ಸುಕರಾಗಿ ಭಕ್ತರು ಹಠಾತ್ ಜಮಾಯಿಸಿದರು. ಜಗನ್ನಾಥನ ರಥವಾದ ನಂದಿಘೋಷದ ಮುಂದೆ ಜನ ಸಮೂಹವು ನೆರೆದಿತ್ತು ಇದರ ಪರಿಣಾಮವಾಗಿ ಜನರು ಗೊಂದಲದಲ್ಲಿ ಪರಸ್ಪರ ಮೇಲೆ ಬಿದ್ದರು. ಪಹಾಡ ಭಂಗ ಆಚರಣೆ ಪ್ರಾರಂಭವಾದಾಗ ▶ 6ನೇ ಪುಟಕ್ಕೆ





ನಕ್ಕರೆ ಅದೇ ಸ್ವರ್ಗ

ಗುಂಡ : ಯಾಕೋ ಅಳ್ತಾ ಇದ್ದೀಯಾ...?
ಮರಿ ಗುಂಡ : 100 ರೂ. ಕೊಟ್ರೆ ಹೇಳ್ತೀನಿ.
ಗುಂಡ : ತಗೋ 100 ರೂ. ಏನಾಯ್ತು ಹೇಳು?
ಮರಿ ಗುಂಡ : ಇದೇ 100 ರೂ.ಗೆ ಅಳ್ತಾ ಇದ್ದಿದ್ದು!

ಮೈಸೂರು ಮಿತ್ರ

ಸೋಮವಾರ, 30 ಜೂನ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

'ಭೂಮಿಯು ಪ್ರತಿಯೊಬ್ಬ ಮನುಷ್ಯನ ಅಗತ್ಯವನ್ನು ಪೂರೈಸಲು ಸಾಕಷ್ಟು ಸಂಪತ್ತು ಹೊಂದಿದೆ. ಆದರೆ ಪ್ರತಿಯೊಬ್ಬ ಮನುಷ್ಯನ ದುರಾಸೆಯನ್ನಲ್ಲ'

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { 'ಬೆಲ್ಲ ಇದ್ದಲ್ಲಿ ನೊಣ ತಿರುಗಾಡಿದಂತೆ'

ನಿಮ್ಮ ಪತ್ರಗಳು

■ ಜಾತಿ ಗಣತಿಗಿಂತ ಜಾತ್ಯಾತೀತ ಆರ್ಥಿಕತೆಗೆ ಆದ್ಯತೆ ನೀಡಬೇಕಿದೆ

ಮಾನ್ಯರೆ,

ಕೇಂದ್ರ ಸರ್ಕಾರ ಬಹು ನಿರೀಕ್ಷಿತ ಜನ ಗಣತಿಯ ಜೊತೆಗೆ ಜಾತಿ ಗಣತಿಯನ್ನು ಮಾಡುವುದಾಗಿ ಹೇಳಿದೆ. ಇತ್ತ ನಮ್ಮ ರಾಜ್ಯ ಸರ್ಕಾರ ಕೂಡ ಕಳೆದ ಹತ್ತು ವರ್ಷಗಳ ಹಿಂದೆ ನಡೆಸಿದ್ದ ಸಾಮಾಜಿಕ ಮತ್ತು ಶೈಕ್ಷಣಿಕ ಜಾತಿಗಣತಿಯ ವರದಿಯ ಅಂಗೀಕಾರಕ್ಕೆ ತಡೆ ನೀಡಿ, ಹೊಸದಾಗಿ ಮರು ಸಮೀಕ್ಷೆ ಮಾಡುವ ಸೂಚನೆ ನೀಡಿದೆ.

ಈ ಹಿಂದೆ ಮಹಾತ್ಮಗಾಂಧಿ ಹಾಗೂ ಬಸವಣ್ಣನಂತಹ ಮಹಾನ್ ನಾಯಕರು ಈ ಜಾತೀಯತೆಯನ್ನು ವಿರೋಧಿಸಿದ್ದರು. ಅಷ್ಟೇ ಯಾಕೆ? ಈಗಿನ ಬಹುತೇಕ ಸಂದರ್ಭಗಳಲ್ಲಿ ವೇದಿಕೆ ಸಿಕ್ಕಾಗ ನಮ್ಮ ಜನನಾಯಕರು ಕೂಡ ಜಾತೀಯತೆಯ ವಿರುದ್ಧ ಉದ್ದುದ್ದ ಭಾಷಣ ಮಾಡುತ್ತಲೇ ಬಂದಿದ್ದಾರೆ. ಶಾಲೆಗಳಲ್ಲಿ ಶಿಕ್ಷಕರು ಕೂಡ ಜಾತೀಯತೆಯ ಬಗ್ಗೆ ಪ್ರಬಂಧ ಬರೆಸುವಾಗ ಅದರ ವಿರುದ್ಧ ಹೋರಾಡಲು ಮಕ್ಕಳಿಗೆ ಕರೆ ನೀಡುತ್ತಲೇ ಬಂದಿದ್ದಾರೆ. ಅಲ್ಲದೇ ಇತ್ತೀಚೆಗಂತೂ ಸ್ವಜಾತಿಯಲ್ಲಿ ಹೆಣ್ಣು ಸಿಗದ ಪರಿಣಾಮ ಅಂತರ್ಜಾತಿಯ ಹಾಗೂ ಪ್ರೇಮ ವಿವಾಹಗಳು ಹೆಚ್ಚಾಗಿ ಯುವ ಪೀಳಿಗೆಯಲ್ಲಿ ಜಾತೀಯತೆ ಗಮನಾರ್ಹವಾಗಿ ಕಡಿಮೆಯಾಗಿದೆ ಎನ್ನಬಹುದು. ಇದರ ಜೊತೆಗೆ ಹಬ್ಬ ಹರಿದಿನಗಳು ಕೂಡ ಕೇವಲ ಜಾತಿ ಒಂದಕ್ಕೆ ಸೀಮಿತವಾಗದೆ ಸಾರ್ವಜನಿಕವಾಗಿ ನಡೆಯುತ್ತಿವೆ. ಹೀಗಿದ್ದರೂ ಸಮಾಜಕ್ಕೆ ಬೇಡವಾದ ಜಾತಿ ಸರ್ಕಾರಕ್ಕೆ ಬೇಕಾಗಿದೆ!

ನಮ್ಮ ಸಂವಿಧಾನ ಸಾಮಾಜಿಕವಾಗಿ ಹಿಂದುಳಿದ ಜಾತಿ ಸಮುದಾಯಗಳನ್ನು ಮುಂದೆ ತರುವ ಸಲುವಾಗಿ ಮೀಸಲಾತಿ ವ್ಯವಸ್ಥೆ ಕಲ್ಪಿಸಿದೆ ಎಂಬುದೇನೋ ನಿಜ. ಆದರೆ ಈ ಮೀಸಲಾತಿ ಬಂದು ಇದೀಗ 75 ವರ್ಷಗಳೇ ಕಳೆದರೂ ನಮ್ಮಲ್ಲಿ ಮೀಸಲಾತಿಗಾಗಿ ಪೈಪೋಟಿ ನಡೆಯುತ್ತಿರುವುದು ದುರಂತ. ಸರ್ಕಾರದ ಉದ್ದೇಶ ಏನೇ ಇರಲಿ, ಪ್ರಸ್ತುತ ಜಾತಿಗಣತಿ ಹಾಗೂ ಮೀಸಲಾತಿ ಬಗ್ಗೆ ಸ್ವಲ್ಪ ಮರು ಪರಿಶೀಲನೆ ಅಗತ್ಯವಿದೆ. ಏಕೆಂದರೆ ಬಡತನ ಎಂಬುದು ಜಾತಿ ಕೇಳಿ ಬರುವುದಿಲ್ಲ. ಸರ್ಕಾರ ಮೀಸಲಾತಿ ರದ್ದುಪಡಿಸದಿದ್ದರೂ ಜಾತ್ಯಾಧಾರಿತ ಮೀಸಲಾತಿ ಬದಲು, ಆರ್ಥಿಕತೆ ಆಧಾರಿತ ಮೀಸಲಾತಿಗೆ ಹೆಚ್ಚು ಆದ್ಯತೆ ನೀಡುವುದು ಅಗತ್ಯವಾಗಿದೆ. **–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.**

■ ಹೃದಯಾಘಾತ ತಡೆಯಲು ವೈದ್ಯಕೀಯ ಸಲಹೆ ಅಗತ್ಯ

ಮಾನ್ಯರೆ,

ರಾಜ್ಯದ ಹಾಸನ ಜಿಲ್ಲೆಯಲ್ಲಿ ಕಳೆದ ಒಂದು ತಿಂಗಳಲ್ಲಿ 18ಕ್ಕೂ ಹೆಚ್ಚು ಮಂದಿ ಯುವ ಜನತೆ ಹೃದಯಾಘಾತದಿಂದ ಸಾವಿಗೀಡಾಗಿರುವ ಘಟನೆ ದುಃಖಕರವಾದ ವಿಷಯವಾಗಿದ್ದು, ರಾಜ್ಯದ ಜನತೆ ಭಯಭೀತರಾಗಿದ್ದಾರೆ. ಕಳೆದೆರಡು ದಿನಗಳ ಹಿಂದೆ ಹೊಳೆನರಸೀಪುರ ತಾಲೂಕಿನ 22 ವರ್ಷದ ಯುವತಿಯೊಬ್ಬರು ಸಾವನ್ನಪ್ಪಿರುವುದು ಕೂಡ ಯುವಜನತೆಯಲ್ಲಿ ಆತಂಕ ಮೂಡಿಸಿದೆ. ಆದ್ದರಿಂದ ರಾಜ್ಯದ ಹಿರಿಯ ವೈದ್ಯರು, ಮತ್ತು ಪ್ರತಿ ಜಿಲ್ಲೆಯಲ್ಲಿರುವ ಸರ್ಕಾರಿ ಮತ್ತು ಖಾಸಗಿ ವೈದ್ಯರು ಹೃದಯಾಘಾತದಿಂದ ಪಾರಾಗುವ ಬಗ್ಗೆ ಶಾಲಾ–ಕಾಲೇಜಿನ ಯುವಜನತೆ ಸೇರಿ ಸಮಾಜದ ಪ್ರಜೆಗಳಿಗೂ ಸಲಹೆ, ಸೂಚನೆಗಳನ್ನು ಸಾರ್ವಜನಿಕ ವಲಯ ಮಟ್ಟದಲ್ಲಿ ವಾರಕ್ಕೊಂದು ಕಾರ್ಯಕ್ರಮಗಳನ್ನು ನಡೆಸುವುದರ ಮೂಲಕ ನೀಡಬೇಕು. ಆರೋಗ್ಯ ಸಚಿವರು ಈ ವಿಷಯವನ್ನು ಗಂಭೀರವಾಗಿ ಪರಿಗಣಿಸುವ ಮೂಲಕ ಆರೋಗ್ಯ ಇಲಾಖೆ ಸಂಬಂಧಪಟ್ಟ ಅಧಿಕಾರಿಗಳ ಸಭೆ ಕರೆದು ಚರ್ಚಿಸಲು ಈ ಮೂಲಕ ಮನವಿ. **–ನಾಗೇಶ್, ಮಾನಸಗಂಗೋತ್ರಿ, ಮೈಸೂರು**

■ ಆಡಳಿತದಲ್ಲಿ ಕನ್ನಡ ಕಡ್ಡಾಯ ಸ್ವಾಗತಾರ್ಹ

ಮಾನ್ಯರೆ,

ರಾಜ್ಯ ಸರ್ಕಾರ ಎಲ್ಲಾ ಇಲಾಖೆಯಲ್ಲಿ ಕನ್ನಡ ಕಡ್ಡಾಯವಾಗಿ ಆಡಳಿತದಲ್ಲಿ ಬಳಕೆ ಮಾಡಬೇಕೆಂದಿರುವುದು ಸ್ವಾಗತಾರ್ಹ. ಸ್ವತಂತ್ರದ ನಂತರ ಭಾಷಾ ಪ್ರಾಂತ್ಯವಾರು ರಚನೆಗೊಂಡ ನಂತರವೂ ಕರ್ನಾಟಕದಲ್ಲಿ ಕನ್ನಡ ಭಾಷೆಯನ್ನು ಆಡಳಿತ ಭಾಷೆಯಾಗಿ ಮಾಡಲು ಬಂದ ಸರ್ಕಾರಗಳು ಹೆಣಗಾಡುತ್ತಿರುವುದು ನಮ್ಮ ಇಚ್ಛಾಶಕ್ತಿ ಎಷ್ಟರ ಮಟ್ಟಿಗೆ ಇದೆ ಎಂಬುದನ್ನು ಅರಿಯಬೇಕಾಗಿದೆ.

ಕನ್ನಡ ಭಾಷೆಯಲ್ಲೇ ಆಡಳಿತ ನಡೆಸುವ ಬಗ್ಗೆ ಈಗಾಗಲೇ ಹಲವು ಬಾರಿ ಸೂಚನೆಗಳನ್ನು ನೀಡಿ ಸುತ್ತೋಲೆ ಹೊರಡಿಸಿದರೂ ಪಾಲನೆ ಆಗುತ್ತಿಲ್ಲ ಎನ್ನುವುದನ್ನು ಕೇಳಿದ್ದೇವೆ. ಸರ್ಕಾರಿ ಪತ್ರ ವ್ಯವಹಾರಗಳಲ್ಲಿ ಕಡಿತದ ಟಿಪ್ಪಣಿಗಳು ಕನ್ನಡದಲ್ಲಿ ಮಾಡುವಂತೆ ಸೂಚಿಸಿದರು ಸರಿಯಾಗಿ ಅನುಷ್ಠಾನಗೊಳ್ಳದಿರುವುದನ್ನು ಗಮನಿಸಿ ಮುಖ್ಯಮಂತ್ರಿಗಳು ಕನ್ನಡದಲ್ಲಿ ಇಲ್ಲದಿದ್ದರೆ ಅಂತಹ ಕಡತಗಳನ್ನು ಹಿಂದಿರುಗಿಸಿ ಸೂಕ್ತ ಸಮಜಾಯಿಷಿ ಪಡೆಯಲು ನಿರ್ದೇಶನ ನೀಡಿದ್ದಾರೆ. ಇನ್ನು ಮುಂದಾದರು ಕನ್ನಡವನ್ನು ಕಡ್ಡಾಯವಾಗಿ ಪಾಲನೆ ಮಾಡಲಿ. ಮಾಡದಿಲ್ಲದವರ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಿ. **–ಪಿ.ಸಿ.ಕಂಗಾಣಿಸೋಮು, ಕ್ಯಾತಮಾರನಹಳ್ಳಿ ಮೈಸೂರು.**

■ ಕೇಂದ್ರ ಸಾಹಿತ್ಯ ಅಕಾಡೆಮಿ ಯುವ ಪ್ರಶಸ್ತಿ ಪುರಸ್ಕೃತರ ನಡೆ ಶ್ಲಾಘನೀಯ

ಮಾನ್ಯರೆ,

ಈ ಸಾಲಿನ ಕೇಂದ್ರ ಸಾಹಿತ್ಯ ಅಕಾಡೆಮಿಯ 'ಯುವ ಪ್ರಶಸ್ತಿ' ಘೋಷಣೆಯಾಗಿದ್ದು, ಚಾಮರಾಜನಗರದ ಉದಯೋನ್ಮುಖ ಸಾಹಿತಿ ಮತ್ತು ವಿಮರ್ಶಕ ದಿಲೀಪ್‌ಕುಮಾರ್ ಅವರಿಗೆ ಲಭಿಸಿದೆ. ಅವರಿಗೆ ಹೃತ್ಪೂರ್ವಕ ಅಭಿನಂದನೆಗಳು. ಅದೂ ಕೂಡ ಅವರಿಗೆ ವಿಮರ್ಶೆ ಕೆಲಸಕ್ಕಾಗಿ ಪ್ರಶಸ್ತಿ ಸಂದಿರುವುದು ಅವರ ಪ್ರತಿಭೆಗೆ ಸಾಕ್ಷಿ. ಹಾಗೆಯೇ ಅವರು ಪ್ರಶಸ್ತಿಯನ್ನು ತಂದೆ–ತಾಯಿ ಮತ್ತು ತಮ್ಮನಿಗೆ ಅರ್ಪಿಸಿರುವುದು; ಹೆತ್ತು ಹೊತ್ತು ಸಾಕಿದವರು ಹಾಗೂ ಹುಟ್ಟಿದಾಗಿನಿಂದ ಜೊತೆಯಲ್ಲಿರುವ ತಮ್ಮನ ಮೇಲೆ ಇಟ್ಟಿರುವ ಪ್ರೀತಿ, ವಾತ್ಸಲ್ಯ, ಅಂತಃಕರಣ, ಗೌರವ, ಕೃತಜ್ಞತೆಗಳಿಗೆ ಅತ್ಯುತ್ತಮ ಉದಾಹರಣೆಯೇ ಸರಿ. ಈ ಮೂಲಕ ಅವರು ಸಮಾಜಕ್ಕೆ ಒಂದು ಉತ್ತಮ ಸಂದೇಶ ನೀಡಿದ್ದಾರೆ. ಇದಲ್ಲದೆ ಪಾಠ ಮಾಡಿದವರನ್ನೂ ನೆನಸಿಕೊಂಡು ತಮ್ಮ ಸಾಧನೆಗೆ ಇವರೆಲ್ಲರೂ ಕಾರಣರೆಂದು ಅಂದುಕೊಂಡು ಗೌರವ ಸಲ್ಲಿಸಿದ್ದಾರೆ. ಇದು ಬೆಳೆಯುವ ಸಾಹಿತಿ,ಬರಹಗಾರನೊಬ್ಬನ ಪ್ರಮುಖ ಲಕ್ಷಣ. ಮುಂದೆ ಅವರು ಸಾಹಿತ್ಯ ಕ್ಷೇತ್ರದಲ್ಲಿ ಮತ್ತಷ್ಟು ಸಾಧನೆಗಳನ್ನು ಮಾಡಲೆಂದು ಆಶಿಸುವುದುರೊಂದಿಗೆ ಮುಂದಿನ ದಿನಗಳಲ್ಲಿ ನೂರಾರು ಸಂಖ್ಯೆಯಲ್ಲಿ ಇಂತಹವರು ಬೆಳೆದು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಪ್ರಜ್ವಲಿಸಲಿ.

–ರಾಜಶೇಖರಮೂರ್ತಿ, ಬೆಳಗನಹಳ್ಳಿ, ಹೆಚ್.ಡಿ.ಕೋಟೆ ತಾ.

ಅರಿವು



ಜಿ. ಎಲ್. ತ್ರಿಪುರಾಂತಕ
ಮೊ: 96866–77284

ಈ ಸಾವು ಧರ್ಮವೇ?

ಬೆಳಗೆದ್ದು ಲೋಕದ ವಿಚಾರ ತಿಳಿಯುವ ಉದ್ದೇಶದಿಂದ ದಿನಪತ್ರಿಕೆಗಳನ್ನು ತೆರೆದರೆ ಒಂದು ಕಾಲಂ ರೀತಿಯಲ್ಲಿಯೇ ಅಕಾಲಿಕ ಸಾವುಗಳ ಸುದ್ದಿ ಹಾಗೂ ಅಮಾಯಕರ ಫೋಟೋಗಳು ಕಣ್ಣಿಗೆ ರಾಚುತ್ತವೆ. ಅಪಘಾತ, ನೀರಿನಲ್ಲಿ ಈಜಲು ಹೋಗಿ ಮುಳುಗಡೆ, ಗೋಡೆ ಕುಸಿತ, ಲೈಂಗಿಕ ದೌರ್ಜನ್ಯಕ್ಕೆ ಬಲಿಯಾಗಿ ಕೊಲೆಯಾದ ಹೆಣ್ಣು ಮಗು, ಚಿಕ್ಕವಯಸ್ಸಿಗೆ ಹೃದಯಾಘಾತ..... ಹೀಗೆ ಸಾವಿನ ಸುದ್ದಿಗಳ ಮೆರವಣಿಗೆಯೇ ಕಾಣುತ್ತದೆ. ಇವುಗಳನ್ನು ಓದಿದಾಗ ಕಣ್ಣಾಲಿಗಳು ತೇವವಾಗುತ್ತವೆ, ಕರುಳು ಹಿಂಡಿದಂತಹ ಅನುಭವವಾಗುತ್ತದೆ. ನಿಧನ ಹೊಂದಿದವರು ನಮ್ಮ ಸಂಬಂಧಿಗಳು, ಬಂಧುಗಳಲ್ಲದೇ ಇರಬಹುದು, ಆದರೆ ಅವರು ನಮ್ಮಂತೆ ಮನುಷ್ಯರೇ ಅಲ್ಲವೇ? ಯಮಧರ್ಮನಿಗೆ ಕರುಣೆಯೇ ಇಲ್ಲವೇ? ಅನಿಸದೆ ಇರದು.

ಇತ್ತೀಚೆಗೆ ನಮ್ಮ ದೇಶದಲ್ಲಿ ಆದ ದೊಡ್ಡ ದುರಂತವೆಂದರೆ ಗುಜರಾತ್‌ನ ಅಹಮದಬಾದ್‌ನಲ್ಲಿ ನಡೆದ ಏರ್ ಇಂಡಿಯಾ ವಿಮಾನ ಅಪಘಾತ. ವಿಮಾನದಲ್ಲಿದ್ದ ಒಬ್ಬ ಪ್ರಯಾಣಿಕನನ್ನು ಹೊರತು ಪಡಿಸಿ ಉಳಿದ ಎಲ್ಲಾ ಪ್ರಯಾಣಿಕರು ಕ್ಷಣಮಾತ್ರದಲ್ಲಿ ಬೆಂಕಿಯ ಕೆನ್ನಾಲಿಗೆಗೆ ಬಲಿಯಾದರು. ಅವರಷ್ಟೇ ಅಲ್ಲದೆ ಅಪಘಾತ ನಡೆದ ಸ್ಥಳದಲ್ಲಿನ ಶಿಕ್ಷಣ ಸಂಸ್ಥೆಯ ವಿದ್ಯಾರ್ಥಿಗಳು ಹಾಗು ಸಿಬ್ಬಂದಿಯೂ ಸಹ ಪ್ರಾಣ ತೆತ್ತರು. ಈ ಘಟನೆಯನ್ನು ಕೇಳಿ, ನೋಡಿ ನಿಜಕ್ಕೂ ಅನೇಕರಿಗೆ ಆಘಾತವಾದಂತೆ ನನಗೂ ಆಯಿತು. ಅದರಿಂದ ಹೊರ ಬರಲು ಸ್ವಲ್ಪ ದಿನಗಳೇ ಹಿಡಿಯಿತು. ಒಂದೇ ಕುಟುಂಬದ ಐದು ಮಂದಿ, ಅದರಲ್ಲೂ ಮಕ್ಕಳೂ ಸೇರಿದಂತೆ ಗುರುತು ಹಿಡಿಯಲಾಗದಷ್ಟು ಸುಟ್ಟು ಕರಕಲಾಗಿದ್ದು ಮಾತ್ರ ಅಸಹನೀಯ ಎನಿಸಿತು. ಹಾಲುಗಲ್ಲದ ಮಕ್ಕಳು ಏನೂ ತಪ್ಪಿಲ್ಲದೆ ಬೆಂಕಿಯ ಕೆನ್ನಾಲಿಗೆಗೆ ಸಿಲುಕಿ ನರಳಿ ಸತ್ತರು ಎಂದರೆ ಆ ನೋವು, ಸಂಕಟ ಶತೃವಿಗೂ ಬೇಡ ಎಂದು ಭಗವಂತನನ್ನು ಬೇಡುವಂತಾಯಿತು. ಈ ಘಟನೆ ಆದ ನಂತರ ಅನಿಸಿದ್ದು, ಈ ಸಾವು ಧರ್ಮವೇ?? ಎಂದು.

ಹುಟ್ಟು ಹಾಗೂ ಸಾವು ಪ್ರತಿಯೊಂದು ಜೀವಿಗೂ ಅನ್ವಯಿಸುವಂತಹ ಪ್ರಕೃತಿಯ ಸಹಜ ಸಂಗತಿಯೇನೋ ಸರಿ. ಆದರೆ ಅಕಾಲಿಕವಾಗಿ, ಅಮಾಯಕರು ಬಲಿಯಾದಾಗ ಮಾತ್ರ ಮನಸ್ಸು ವಿಹ್ವಲಗೊಳ್ಳುತ್ತದೆ. ಏನೋ ಅಂದು ರೀತಿಯ ವಿಲಕ್ಷಣ ಸಂಕಟವನ್ನು ಅನುಭವಿಸುತ್ತದೆ. ಕೆಲವರು ಅಮಾನುಷ ಕೃತ್ಯಗಳಿಂದ ಸಾವಿಗೀಡಾದಾಗ ಮನಸ್ಸು ಜರ್ಜರಿತಗೊಂಡು ಹೇಳಿಕೊಳ್ಳಲಾಗದ ದುಃಖ ಮಡುಗಟ್ಟುತ್ತದೆ. ಮಾನವ ಕುಲದಲ್ಲಿ ದಾನವರೂ ಜನಿಸುತ್ತಾರೆಯೇ ಎನಿಸುತ್ತದೆ. ವಯೋಸಹಜ ಸಾವುಗಳು ಅಷ್ಟೇನೂ ನೋವು ತರುವುದಿಲ್ಲ. ಮನೆಯಲ್ಲಿನ ಹಿರಿಯರು ಸಾರ್ಥಕ ಬದುಕನ್ನು ಸವೆಸಿ ಅಂತಿಮ ಯಾತ್ರೆ ಹೊರಟಾಗ ದುಃಖ ಉಂಟಾಗುತ್ತದೆಯಾದರೂ ಅಕಾಲಿಕ ಮರಣಕ್ಕೆ ಈಡಾದವರ ಸಾವಿನ ಸುದ್ದಿಯಷ್ಟು ಅಲ್ಲ.

ಬೆಂಗಳೂರಿನ ವೃದ್ಧಾಶ್ರಮವೊಂದರಲ್ಲಿ ಜುಲೈ 24ರಂದು ಹಿರಿಯ ಜೀವಗಳೆರಡು ಸಾವಿನ ಕುಣಿಕೆಗೆ ಕೊರಳೊಡ್ಡಿದ್ದು ನಿಜಕ್ಕೂ ಮನಸ್ಸನ್ನು ಕಲಕಿಬಿಟ್ಟಿತು. 81 ವಯೋಮಾನದ ಪತಿ ಹಾಗೂ 74 ವರ್ಷದ ಪತ್ನಿ ಜೀವನದ ಜಿಗುಪ್ಸೆಯೊಂದಕ್ಕೆ ಜೀವ ಬಿಟ್ಟರು ಎಂಬ ಸುದ್ದಿಯನ್ನು ತುಂಬಾ ನೋವಿನಿಂದಲೇ ಓದುವಂತಾಯಿತು. ತಮ್ಮ ಜೀವವನ್ನು ತಾವೇ ತೆಗೆದುಕೊಳ್ಳುವ ತೀರ್ಮಾನ ಮಾಡುತ್ತಾರೆ ಎಂದರೆ ಅವರ ಕೊನೆಯ ಕ್ಷಣಗಳು ಎಷ್ಟು ನೋವು, ಹತಾಶೆ, ವ್ಯಥೆ, ಹೀನಾಯ ಸ್ಥಿತಿಯಿಂದ ಕೂಡಿರಬೇಡ ಎಂಬುದನ್ನು ಊಹಿಸಿಕೊಳ್ಳಲು ಸಹ ಮನಸ್ಸಾಗುವುದಿಲ್ಲ. ಭೂಮಿಯ ಮೇಲೆ ಬದುಕುವ ಎಲ್ಲಾ ಅರ್ಹತೆ, ಹಕ್ಕು, ಅನುಕೂಲ ಇದ್ದರೂ ಕೂಡ ಬದುಕು ಅಸಹನೀಯ ಎನಿಸಬೇಕಾದರೆ ಬಲವಾದ ಕಾರಣವೇ ಇರಬೇಕು ಎನಿಸುತ್ತದೆ. ಈ ಸುದ್ದಿ ಓದಿದ, ಕೇಳಿದ, ಟಿ.ವಿ.ಯಲ್ಲಿ ನೋಡಿದ ಅನೇಕರು ಆ ವೃದ್ಧರ ಮಗ ಹಾಗೂ ಸೊಸೆಗೆ ಹಿಡಿಶಾಪ ಹಾಕದೇ ಬಿಟ್ಟಿರುವುದಿಲ್ಲ. ಅವರ ಮಗ ಅವರನ್ನು ವೃದ್ಧಾಶ್ರಮಕ್ಕೆ ಸೇರಿಸಿದ ಕಾರಣಕ್ಕೆ ಮನನೊಂದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಸುದ್ದಿ ಪ್ರಕಟ/ಪ್ರಸಾರವಾಗಿದೆ.

ಈ ಸುದ್ದಿಯ ಕುರಿತಾಗಿ ಅನೇಕರು ಅನೇಕ ರೀತಿಯ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಮಗ ಹೆತ್ತವರನ್ನು ಇಳಿವಯಸ್ಸಿನಲ್ಲಿ ವೃದ್ಧಾಶ್ರಮಕ್ಕೆ ಸೇರಿಸಿದ್ದೇ ತಪ್ಪು ಎಂದು ಕೆಲವರು ಅಭಿಪ್ರಾಯಪಟ್ಟರೆ, ಮತ್ತೆ ಕೆಲವರು ಆ ಹಿರಿಯರು ಮಗ ಹಾಗೂ ಸೊಸೆಯೊಂದಿಗೆ ಹೊಂದಾಣಿಕೆ ಮಾಡಿಕೊಂಡು ಹೋಗಿದ್ದರೆ ಈ ಪರಿಸ್ಥಿತಿ ಬರುತ್ತಿರಲಿಲ್ಲ ಎಂದು ಅಭಿಪ್ರಾಯಪಡುತ್ತಾರೆ. ಕೋರ್ಟಿನ ತೀರ್ಪು ಸತ್ಯಾಂಶಗಳಿಂದ ಕೂಡಿದ್ದರೂ ಸಮಾಜದ ತೀರ್ಪು ಬೇರೆಯದ್ದೇ ಆಗಿರುತ್ತದೆ. ಕೋರ್ಟಿನ ದೃಷ್ಟಿಯಲ್ಲಿನ ಅಪರಾಧಿ/ತಪ್ಪಿತಸ್ಥರೇ ಬೇರೆ, ಸಮಾಜದ ಕಣ್ಣಿನಲ್ಲಿ ತಪ್ಪಿತಸ್ಥರೇ ಬೇರೆಯಾಗಿರುತ್ತದೆ. ತಪ್ಪು ಎರಡೂ ಕಡೆಯಿಂದ ಆಗಿದ್ದರೂ, ಒಬ್ಬರದು ತಪ್ಪು ಎಂದು ಬೊಟ್ಟು ಮಾಡಿ ತೋರಿಸುವವರು ಇದ್ದಾರೆ. ಈ ಪ್ರಕರಣ ಅವರವರ ಭಾವಕ್ಕೆ, ಅವರವರ ಅನುಭವಕ್ಕೆ ಎನ್ನುವಂತಾಗಿದೆ.



66

ಇಂದಿನ ಕಾಲಘಟ್ಟದಲ್ಲಿ ಹೊಂದಾಣಿಕೆ ಎಂಬುದು ಮರೀಚಿಕೆಯಾಗುತ್ತಿದೆ. ಬಹುಪಾಲು ಜನ ಅಹಂ ಎಂಬ ಖಾಯಿಲೆಯಿಂದ ನರಳುತ್ತಿರುತ್ತಾರೆ. ಸಾಯುವವರೆವಿಗೂ ತಮ್ಮದೇ ಮಾತು ನಡೆಯಬೇಕೆಂಬ ಹಠದಿಂದ ತಮ್ಮ ಸಮಾಧಿಯನ್ನು ತಾವೇ ತೋಡಿಕೊಳ್ಳುತ್ತಿದ್ದಾರೆ. ಚಟದಿಂದ ಅಕಾಲಿಕವಾಗಿ ಚಟ್ಟ ಹತ್ತುವವರು ಕೆಲವರಾದರೆ, ಹಠದಿಂದಲೂ ಅನೇಕರು ಅಕಾಲಿಕವಾಗಿ ಚಟ್ಟ ಹತ್ತಿ ಮನೆಯ ಗೋಡೆಯಲ್ಲಿ ಫೋಟೋ ಆಗಿಬಿಡುತ್ತಾರೆ. ಶಿಕ್ಷಣವು ಕೇವಲ ಉದ್ಯೋಗ ಗಿಟ್ಟಿಸುವ ಡಿಗ್ರಿಯನ್ನು ನೀಡುವುದಿಲ್ಲ, ಸಹಿಷ್ಣುತೆ, ಸಹಕಾರ, ಸೋತು ಗೆಲ್ಲುವ ಮನೋಭಾವವನ್ನು ಸಹ ನೀಡುತ್ತದೆ. ಇಂದಿನ ದಿನಮಾನದಲ್ಲಿ ಅನೇಕರು ಹಣ, ಅಂತಸ್ತಿನ ಮದದಲ್ಲಿ ತಮ್ಮ ಮಾತೇ ನಡೆಯಬೇಕೆಂಬ ಉಮೇದಿನಲ್ಲಿರುತ್ತಾರೆ. ಅದರಿಂದ ಅನೇಕ ತೊಂದರೆಗಳನ್ನು ತಾವೇ ತಂದುಕೊಳ್ಳುತ್ತಾರೆ.

ನಾಗರಿಕ ಪ್ರಪಂಚದಲ್ಲಿ ಮನುಷ್ಯ ಬೇರೆಲ್ಲಾ ಜೀವಿಗಳಿಗಿಂತ ಭಿನ್ನವಾಗಿರುವುದು ಅವನ ಬುದ್ಧಿಶಕ್ತಿ ಹಾಗೂ ಕರ್ತೃತ್ವ ಶಕ್ತಿಯಿಂದ. ಕಾಡು ಮನುಷ್ಯ ನಾಡುಮನುಷ್ಯನಾಗಿ ರೂಪುಗೊಂಡಿದ್ದು ಶಿಕ್ಷಣ, ಸಂಸ್ಕಾರ, ಸಂಸ್ಕೃತಿಯಿಂದ. ಪ್ರಾಣಿಗಳಿಗಿಂತ ಭಿನ್ನ ಜೀವನಕ್ರಮವನ್ನು ರೂಪಿಸಿಕೊಂಡು, ಮಾನವಂತನಾಗಿ, ಗುಣವಂತನಾಗಿ ಬದುಕಲು ಕಾನೂನು, ಕಟ್ಟಲೆಗಳನ್ನು ವಿಧಿಸಿಕೊಂಡಿರುತ್ತಾನೆ. ಮಾನವ ಎನಿಸಿಕೊಳ್ಳಲು ಮಾನವ ಆಕೃತಿ ಇದ್ದರೆ ಮಾತ್ರ ಸಲ್ಲದು ಮಾನವ ಪ್ರಕೃತಿಯೂ ಇರಬೇಕು. ಅಂದರೆ ಸಹಜೀವನ, ದಯೆ, ಕರುಣೆ, ತ್ಯಾಗ, ನಿಸ್ವಾರ್ಥ ಇವುಗಳಿಂದ ಮಾತ್ರ ಪ್ರಾಣಿಯೊಂದು ಮನುಷ್ಯ ಎನಿಸಿಕೊಳ್ಳಲು ಸಾಧ್ಯ. ದುರಾದೃಷ್ಟಿ, ದುರಾಲೋಚನೆ, ದುರಾಚಾರಗಳಿಂದ ಬದುಕಿದಲ್ಲಿ ಮನುಷ್ಯ ಅನಾಗರೀಕನಾಗಿಬಿಡುತ್ತಾನೆ. ಎಷ್ಟೋ ಜನ ವಿದ್ಯಾವಂತರೆನಿಸಿಕೊಂಡವರು ಸಹ ಅವಿದ್ಯಾವಂತರಿಗಿಂತ ಕನಿಷ್ಠ ದರ್ಜೆಯ ಮನೋಭಾವ ಹೊಂದಿರುತ್ತಾರೆ. ಸಜ್ಜನ ಸಮಾಜದಿಂದ ಎಷ್ಟೇ ಒಳ್ಳೆಯದನ್ನು ಪಡೆದಿದ್ದರೂ, ಸಮಾಜಕ್ಕೆ ಮಾತ್ರ ಕೆಟ್ಟದ್ದನ್ನು ನೀಡಿ ದುರ್ಜನರೆನಸಿಕೊಳ್ಳುತ್ತಾರೆ. ಒಳ್ಳೆಯತನ ಎಂದರೆ ಒಳ್ಳೆಯ ನಡವಳಿಕೆ. ಅಷ್ಟೇ ಅಲ್ಲ ಸಹಬಾಳ್ವೆಗೆ ಅಗತ್ಯವಿರುವ ಹೊಂದಾಣಿಕೆ ಮನೋಭಾವವನ್ನು ಹೊಂದುವುದೇ ಆಗಿದೆ.

ಇಂದಿನ ಕಾಲಘಟ್ಟದಲ್ಲಿ ಹೊಂದಾಣಿಕೆ ಎಂಬುದು ಮರೀಚಿಕೆಯಾಗುತ್ತದೆ. ಬಹುಪಾಲು ಜನ ಅಹಂ ಎಂಬ ಖಾಯಿಲೆಯಿಂದ ನರಳುತ್ತಿರುತ್ತಾರೆ. ಸಾಯುವವರೆವಿಗೂ ತಮ್ಮದೇ ಮಾತು ನಡೆಯಬೇಕೆಂಬ ಹಠದಿಂದ ತಮ್ಮ ಸಮಾಧಿಯನ್ನು ತಾವೇ ತೋಡಿಕೊಳ್ಳುತ್ತಿದ್ದಾರೆ. ಚಟದಿಂದ ಅಕಾಲಿಕವಾಗಿ ಚಟ್ಟ ಹತ್ತುವವರು ಕೆಲವರಾದರೆ, ಹಠದಿಂದಲೂ ಅನೇಕರು ಅಕಾಲಿಕವಾಗಿ ಚಟ್ಟ ಹತ್ತಿ, ಮನೆಯ ಗೋಡೆಯಲ್ಲಿ ಫೋಟೋ ಆಗಿಬಿಡುತ್ತಾರೆ. ಶಿಕ್ಷಣವು ಕೇವಲ ಉದ್ಯೋಗ ಗಿಟ್ಟಿಸುವ ಡಿಗ್ರಿಯನ್ನು ನೀಡುವುದಿಲ್ಲ. ಸಹಿಷ್ಣುತೆ, ಸಹಕಾರ, ಸೋತು ಗೆಲ್ಲುವ ಮನೋಭಾವವನ್ನು ಸಹ ನೀಡುತ್ತದೆ. ಇಂದಿನ ದಿನಮಾನದಲ್ಲಿ ಅನೇಕರು ಹಣ, ಅಂತಸ್ತಿನ ಮದದಲ್ಲಿ ತಮ್ಮ ಮಾತೇ ನಡೆಯಬೇಕೆಂಬ ಉಮೇದಿನಲ್ಲಿರುತ್ತಾರೆ. ಅದರಿಂದ ಅನೇಕ ತೊಂದರೆಗಳನ್ನು ತಾವೇ ತಂದುಕೊಳ್ಳುತ್ತಾರೆ.

ಸಮಾಜದ ಸ್ವಾಸ್ಥ್ಯವನ್ನು ಶಾಲೆಗಳು, ಜೈಲುಗಳು ಹಾಗೂ ವೃದ್ಧಾಶ್ರಮಗಳ ಶೇಕಡವಾರು ಸಂಖ್ಯೆಗಳು ನಿರ್ಧರಿಸುತ್ತವೆ. ಇಂದು ಶಾಲೆಗಳಂತೆ ವೃದ್ಧಾಶ್ರಮಗಳು ಸಹ ತಲೆ ಎತ್ತುತ್ತಿವೆ. ಭಾರತದಂತಹ ಸಂಸ್ಕಾರಯುತ ರಾಷ್ಟ್ರದಲ್ಲಿ ಪುರಾಣದ ಕಥೆಗಳಲ್ಲಿ ಶ್ರವಣಕುಮಾರ ತನ್ನ ಹೆತ್ತವರ ಸೇವೆ ಮಾಡಿದ ದೃಷ್ಟಾಂತವನ್ನು ತಿಳಿದು ನಡೆಯುವ ಸಮಾಜದಲ್ಲಿ, ಹೆತ್ತವರನ್ನು ಇಳಿವಯಸ್ಸಿನಲ್ಲಿ ಕಾಳಜಿಯಿಂದ ನೋಡಿಕೊಳ್ಳದೆ ವೃದ್ಧಾಶ್ರಮ ಸೇರಿಸುತ್ತಿರುವುದು ಒಂದು ಅನಾರೋಗ್ಯಕರ ಬೆಳವಣಿಗೆ ಎನ್ನಲಾಗುತ್ತಿದೆ. ಇಲ್ಲಿ ಮನೆಯಲ್ಲಿನ ಕಿರಿಯರನ್ನೇ ಅಪರಾಧಿಗಳಂತೆ ಬಿಂಬಿಸಲಾಗುತ್ತದೆ. ವೃದ್ಧಾಶ್ರಮಕ್ಕೆ ಹೆತ್ತವರನ್ನು ಸೇರಿಸಿದ ಮಗ ಸಮಾಜದ ದೃಷ್ಟಿಯಲ್ಲಿ ಖಳನಂತೆ ಕಾಣುತ್ತಾನೆ. ಆದರೆ ವಾಸ್ತವ ಸಂಗತಿಗಳು ಸಮಾಜ ಎಣಿಸಿದ ರೀತಿಯಲ್ಲಿಯೇ ಇರುವುದಿಲ್ಲ.

ಕಾಡಿನ ರಾಜ ಸಿಂಹ ವಯಸ್ಸಿನಲ್ಲಿ ಘರ್ಜಿಸಿದಾಗ ಇಡೀ ಕಾಡಿನ ಇತರೆ ಪ್ರಾಣಿಗಳು ನಡುಗುತ್ತವೆ. ಆದರೆ ವಯಸ್ಸಾದ ಸಿಂಹ ಘರ್ಜಿಸಿದರೆ ಪಕ್ಕದಲ್ಲಿನ ಒಂದು ಹುಲ್ಲೆಯು ಸಹ ಹೆದರುವುದಿಲ್ಲ. ಕಾರಣ ಅದು ನಿಶ್ಯಕ್ತಿಯಿಂದ ಕೂಡಿದೆ ಎಂದು. ಅದು ಪ್ರಕೃತಿ ನಿಯಮ ಅಲ್ಲವೇ? ಹಾಗೂ ಮನೆಯಲ್ಲಿನ ಹಿರಿಯರು ಸಹ ವಯಸ್ಸಾದ ಮೇಲೆ ತಮ್ಮ ಹಠವನ್ನು ಬಿಟ್ಟು, ತಮ್ಮ ಮುಂದಿನ ಪೀಳಿಗೆಯವರೊಂದಿಗೆ ಹೊಂದಿಕೊಂಡು ಹೋಗುವಂತಹ ಮನೋಭಾವ ವೃದ್ಧಿಸಿಕೊಳ್ಳಬೇಕು. ತಮಗೆ ವಯಸ್ಸಿದ್ದಾಗ ಆಡಳಿತ ನಡೆಸಿದ್ದಾಗಿದೆ, ಈಗ ಕಿರಿಯರು ನಡೆಸಲಿ ಎಂದು ಅಧಿಕಾರ ಹಸ್ತಾಂತರ ಮಾಡಿ, ಧ್ಯಾನ ಮಾಡುತ್ತಾ, ಕೈಲಾದಷ್ಟು ಕೆಲಸ ಮಾಡುತ್ತಾ, ಆರೋಗ್ಯದ ಕಡೆ ಲಕ್ಷ್ಯಕೊಟ್ಟು ಲವಲವಿಕೆಯ ಜೀವನ ಕಂಡುಕೊಳ್ಳುವುದು ಜಾಣತನ.

ಅದಬಿಟ್ಟು, ಮನೆಯ ಕಿರಿಯರೊಂದಿಗೆ ನಿತ್ಯವೂ ಕಿರಿಕಿರಿ ಮಾಡಿಕೊಳ್ಳುತ್ತಾ, ಸಣ್ಣಪುಟ್ಟ ಸಂಗತಿಗಳಿಗೆ ರಾಜಿಯಾಗದೇ ಘರ್ಷಣೆ ಮಾಡಿಕೊಳ್ಳುತ್ತಾ, ಇರುವ ಬಿ.ಪಿ., ಹಾಗೂ ಶುಗರ್ ಹೆಚ್ಚಿಸಿಕೊಂಡು ಪರಿತಪಿಸುವುದು ಎಷ್ಟು ಸರಿ ಅಲ್ಲವೇ? ಎಷ್ಟೋ ದೈಹಿಕ ಖಾಯಿಲೆಗಳಿಗೆ ಮಾನಸಿಕ ಸಮಸ್ಯೆಗಳು ಕಾರಣವಾಗಿರುತ್ತವೆ. ಹಾಗೆಯೇ ಈ ಪೀಳಿಗೆಯ ಕಿರಿಯರು ಸಹ ಹಿರಿಯರ ವಯೋಮಾನದ ಅಭಿಲಾಷೆಗಳನ್ನು ಅರಿತುಕೊಂಡು ಅವರೊಂದಿಗೆ ಸಂಯಮದಿಂದ ವರ್ತಿಸುವುದು ಒಳಿತು. ಹೊಂದಾಣಿಕೆ ಕೊರತೆಯಾದಾಕ್ಷಣ ವೃದ್ಧಾಶ್ರಮವೇ ಪರಿಹಾರವಲ್ಲ. ಪೂರ್ವಗ್ರಹಪೀಡನೆ ಬಿಟ್ಟು ಕುಳಿತು ಮಾತನಾಡಿಕೊಂಡರೆ ಎಷ್ಟೋ ಸಮಸ್ಯೆಗಳು ಕೆಲವೇ ನಿಮಿಷಗಳಲ್ಲಿ ಬಗೆಹರಿಯುತ್ತವೆ. ಸಣ್ಣ ವಿಚಾರವನ್ನೇ ಬೆಟ್ಟ ಮಾಡಿದರೆ, ಅದು ಅಷ್ಟು ಸುಲಭವಾಗಿ ಕರಗುವ ಸಮಸ್ಯೆಯಾಗಿರುವುದಿಲ್ಲ. ಮನೆಯಲ್ಲಿ ಆಹ್ಲಾದಕರ ವಾತಾವರಣವಿದ್ದಲ್ಲಿ ಬದುಕು ಸಹನೀಯವಾಗಿರುತ್ತದೆ, ಇಲ್ಲವಾದಲ್ಲಿ ಅಸಹನೀಯವಾಗುತ್ತದೆ. ಮೇಲೆ ಹೇಳಿದಂತೆ ಅನೇಕ ಹಿರಿಯರಿಗೆ ಬದುಕು ಸಾಕು, ಜೀವ ಹೋದರೆ ಸಾಕು ಎನಿಸುತ್ತಿರುತ್ತದೆ.

ಪ್ರತಿಯೊಂದು ಪ್ರಾಣಿಯೂ ಬದುಕಲು ಹೋರಾಟ ಮಾಡುತ್ತದೆಯೇ ಹೊರತು, ಸಾಯಲು ಹೋರಾಟ ಮಾಡುವುದಿಲ್ಲ. ಬಹುಶಃ ಮನುಷ್ಯ ಪ್ರಾಣಿಯೊಂದೆ ಸಾಯಲು ಹೋರಾಟ ಮಾಡುವುದು. ಬದುಕು ನಾವು ಎಣಿಸಿದಂತೆ ಇರುವುದಿಲ್ಲ. ಯಾವ ಜೀವ ಭದ್ರತೆಯೂ ಇಲ್ಲದ ಪ್ರಾಣಿಗಳು ಲವಲವಿಕೆಯಿಂದ ಇರುವಾಗ, ಎಲ್ಲಾ ಭದ್ರತೆ ಇರುವ ಮನುಷ್ಯ ಸಾವಿನ ಚಿಂತನೆ ಮಾಡಬಾರದು. ಶರಣರ ಬಾಳನ್ನು ಮರಣದಲ್ಲಿ ಕಾಣು ಎಂದು ವಚನಕಾರರು ಹೇಳಿದ್ದಾರೆ. ಆತ್ಮಹತ್ಯೆಗೆ ಏನೇ ಸಕಾರಣವಿದ್ದರೂ ಹೋದ ಜೀವ ಮರುಕಳಿಸುವುದಿಲ್ಲ. ಮನುಷ್ಯ ಜನ್ಮ ದೊಡ್ಡದು ಅದನ್ನು ಸಾರ್ಥಕ ಮಾಡಿಕೊಳ್ಳುವ ಚಿಂತನೆ ಮಾಡೋಣ.

ಹೂರಣ: ಸುಖವಾದ ಬದುಕನ್ನು ಬಯಸಿದರೆ ಸಾಲದು, ಸುಖವಾದ ಸಾವನ್ನೂ ಬಯಸಬೇಕು..

ಶಿಕ್ಷಣಕ್ಕೆ ಆದ್ಯತೆ ನೀಡಿದ ಕೀರ್ತಿ ಲಿಂಗಾಯತ ಮಠಗಳಿಗೆ ಸಲ್ಲುತ್ತದೆ

ಶಿವಾನುಭವ ದಾಸೋಹ ಕಾರ್ಯಕ್ರಮ ಉದ್ಘಾಟಿಸಿದ ಹಿರಿಯ ಸಾಹಿತಿ ಪ್ರೊ.ಎಂ.ಕೃಷ್ಣೇಗೌಡ ಅಭಿಮತ

ಮೈಸೂರು, ಜೂ.29(ಎಸ್‌ಪಿಎನ್)– ದೇಶಕ್ಕೆ ಸ್ವಾತಂತ್ರ್ಯ ಬಂದ ಹೊಸದರಲ್ಲಿ ಶೇ.10ರಷ್ಟು ಸಾಕ್ಷರತೆ ಇತ್ತು ಇದನ್ನು ಮೊದಲು ಗ್ರಹಿಸಿ, ಯುವ ಸಮೂಹಕ್ಕೆ ಶಿಕ್ಷಣ ನೀಡಿದ ಕೀರ್ತಿ ಲಿಂಗಾಯತ ಪರಂಪರೆ ಮಠಗಳಿಗೆ ಸಲ್ಲುತ್ತದೆ ಎಂದು ಹಿರಿಯ ಸಾಹಿತಿ ಪ್ರೊ.ಎಂ.ಕೃಷ್ಣೇಗೌಡ ಅಭಿಪ್ರಾಯಪಟ್ಟರು.

ಮೈಸೂರು ಅಗ್ರಹಾರದ ಜೆಎಸ್‌ಎಸ್ ಆಸ್ಪತ್ರೆ ಆವರಣ ರಾಜೇಂದ್ರ ಸಭಾ ಭವನದಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠ, ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ, ವೀರಶೈವ ಸ್ನೇಹ ಬಳಗ ಹಾಗೂ ಅನಿಕೇತನ ಟ್ರಸ್ಟ್ ಸಹಯೋಗದಲ್ಲಿ ದಿ.ಸರ್ವಮಂಗಳಮ್ಮ ಮತ್ತು ಕೆ.ಎಸ್.ವೀರಭದ್ರಪ್ಪ ಅವರ ಸ್ಮರಣಾರ್ಥ ಏರ್ಪಡಿಸಿದ್ದ ಶಿವಾನುಭವ ದಾಸೋಹ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ದಾನಕ್ಕೂ, ದಾಸೋಹಕ್ಕೆ ಸಾಕಷ್ಟು ವ್ಯತ್ಯಾಸವಿದೆ. ಅನ್ನ–ಅಕ್ಷರದ ದಾಸೋಹದ ಪರಿಕಲ್ಪನೆ ವೀರಶೈವ–ಲಿಂಗಾಯತ ಮಠಗಳದ್ದು. ದಾನಕ್ಕಿಂತಲೂ ಮಹತ್ತರವಾದ ಧ್ಯೇಯ ದಾಸೋಹಕ್ಕಿದೆ. ಹಾಗಾಗಿ ನಾಡಿನ ಸ್ವಾಮೀಜಿಗಳು, ಸ್ವಾತಂತ್ರ್ಯ ಬಂದ ಹೊಸದರದಲ್ಲಿ ಜೋಳಿಗೆ ಹಿಡಿದು ಉಳ್ಳವರಿಂದ ಪಡಿತರ–ದೇಣಿಗೆ ಸಂಗ್ರಹಿಸಿ ಎಲ್ಲಾ ಸಮುದಾಯದ ಮಕ್ಕಳಿಗೂ ಶಿಕ್ಷಣ ನೀಡಲು ಮೊದಲ ಆದ್ಯತೆ ನೀಡಿದ ಕೀರ್ತಿ ಲಿಂಗಾಯತ ಪರಂಪರೆ ಮಠಗಳಿಗೆ ಸಲ್ಲುತ್ತದೆ ಎಂದರು.

ಜೆಎಸ್‌ಎಸ್ ಶಿವರುದ್ರಪ್ಪ ರಚಿತ ಪದ್ಯದ ಸಾಲು ಉಲ್ಲೇಖಿಸಿ 'ಕಂಡ–ಕಂಡ ಕಡೆ ಮದಿಸಿದ ಆನೆಗಳು ಎಲ್ಲೆಡೆ ಸೊಂಡಿಲು ಹಾಕುತ್ತವೆ'. ಅದೇ ರೀತಿ ಯಾವ್ಯಾವುದೋ ರೂಪದಲ್ಲಿ ಹಣ ಗಳಿಸಿದವರು, ಅಧಿಕಾರ ಪಡೆದವರು ಎಲ್ಲಾ ಕಡೆ ಪ್ರಭಾವ ಬೀರುತ್ತಾರೆ. ಆದರೆ, ಅವರಿಗೆ ಅಂಕುಶ ಹಾಕುವವರು ಯಾರು?. ಇಲ್ಲಿ ಸಮಾಜ ಆನೆಯಿದ್ದಂತೆ. ಮಠ–ಮಾನ್ಯಗಳು ಅಕುಂಶವಿದ್ದಂತೆ ಎಂದರು.

ಒಮ್ಮೆ ಪ್ರತಿಷ್ಠಿತ ಮಠವೊಂದರ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ಹೋಗಿದ್ದೆ. ಆ ಕಾರ್ಯಕ್ರಮದಲ್ಲಿ ವಿಚಾರವಾದಿ, ಮಹಿಳೆಯೊಬ್ಬರು ಆ ಕಾರ್ಯಕ್ರಮಕ್ಕೆ ಅತಿಥಿಗಳಾಗಿ ಬಂದಿದ್ದರು. ಅವರನ್ನು ಆ ವೇದಿಕೆಯಲ್ಲೇ ಮಾತಿಗೆಳೆದು, ಈ ಕಾರ್ಯಕ್ರಮಕ್ಕೆ ಬರುವ ಉದ್ದೇಶವೇನು ಎಂದು ಪ್ರಶ್ನಿಸಿದೆ. ಅದಕ್ಕೆ ಆ ಮಹಿಳೆ ಕೊಟ್ಟ ಉತ್ತರದಿಂದ ನಾನೇ ವಿಮರ್ಶೆ ಮಾಡುವಂತಾಗಿದ್ದ ಪ್ರಸಂಗವನ್ನು ವಿವರಿಸಿದರು.

ದೇಶಕ್ಕೆ ಸ್ವಾತಂತ್ರ್ಯ ಬಂದ ಸಂದರ್ಭದಲ್ಲಿ ನಮ್ಮಲ್ಲಿ ಸಾಕ್ಷರತೆ ಪ್ರಮಾಣ ಶೇ.10 ರಷ್ಟಿತು. ಇದನ್ನು ಮನಗಂಡ ಬ್ರಿಟಿಷರು, ಗಾಂಧೀಜಿ ಜೊತೆಗೆ ಮಾತುಕತೆ ಸಂದರ್ಭದಲ್ಲಿ ನಮ್ಮ ಜನ, ನಮ್ಮ ದೇಶವನ್ನು ಹೀಯಾಳಿಸಿ ಮಾತನಾಡುತ್ತಿದ್ದ ಪ್ರಸಂಗವನ್ನು ಉಲ್ಲೇಖಿಸಿದರು. ಈ ಅವಮಾನವನ್ನು ಮೊದಲು ಗಂಭೀರವಾಗಿ ಪರಿಗಣಿಸಿದವರು ಮಠ–ಮಾನ್ಯಗಳು. ಈ ಮಾತನ್ನು ಮಹಿಳೆ ಅವರಿಂದ ಕೇಳಿದಾಗ ನನ್ನಲ್ಲಿ ರೋಮಾಂಚನವಾಯಿತು ಎಂದರು.

ಕೆಂಗಲ್ ಹನುಮಂತಯ್ಯ ಅವರು ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಮಂಡ್ಯದ ಗ್ರಾಮವೊಂದರ ಸರ್ಕಾರಿ ಶಾಲೆಯ ಬಳಿ ಅವರ ಕಾರು ಬಂದು ನಿಲ್ಲುತ್ತದೆ. ಕಾರಿನಿಂದ ಇಳಿದ ಕೆಂಗಲ್ ಹನುಮಂತಯ್ಯ ಅವರು, ಆ ಶಾಲೆಯ ಶಿಕ್ಷಕರ ಬಳಿ ಬಂದು, ನಾನು ಈ ನಾಡಿನ ಮುಖ್ಯಮಂತ್ರಿಯಾಗಿ ನಿಮ್ಮ ಬಳಿ ಬಂದಿಲ್ಲ. ಓರ್ವ ಹೆಣ್ಣು ಮಗಳ ತಂದೆಯಾಗಿ ನಿಮ್ಮ ಬಳಿ ಬಂದಿದ್ದೇನೆ. ನನ್ನ ಮಗಳಿಗೆ ಮದುವೆ ಪ್ರಸ್ತಾಪ ಬಂದಿದೆ. ಆ ಹುಡುಗ ನಿಮ್ಮ ಶಿಷ್ಯನಂತೆ. ಆತನ ಪೂರ್ವಪರ ತಿಳಿಸಿ ಎಂದು ಕೇಳಿಕೊಂಡಿದ್ದ ಪ್ರಸಂಗವನ್ನು ವಿವರಿಸಿದರು. ಆ ಶಿಕ್ಷಕರು ಬೇರೆ ಯಾರು ಅಲ್ಲ. ಅವರು ನಗರಪಾಲಿಕೆ ಮಾಜಿ ಸದಸ್ಯ ಕೆ.ವಿ.ಮಲ್ಲೇಶ್ ಅವರ ತಂದೆ, ನಿವೃತ್ತ ಶಿಕ್ಷಕ ದಿ.ಕೆ.ಎನ್.ವೀರಭದ್ರಪ್ಪನವರು.

ದಿ.ಕೆ.ಎನ್.ವೀರಭದ್ರಪ್ಪ ಅವರು, ಮಂಡ್ಯ ಜಿಲ್ಲೆಯ ಅಂದಿನ ತಲೆಮಾರಿನ ರಾಜಕಾರಣಿಗಳಾದ ಶಂಕರೇಗೌಡ, ಕೆಂಗಲ್ ಹನುಮಂತಯ್ಯ ಸೇರಿದಂತೆ ಇನ್ನು ಅನೇಕರಿಗೆ ಆಪ್ತರಾಗಿದ್ದರು. ಅಂದರೆ ವೀರಭದ್ರಪ್ಪನವರು ಎಲ್ಲರೊಂದಿಗೆ ವಿಶ್ವಾಸವಿಟ್ಟುಕೊಂಡಿದ್ದ ಪ್ರಸಂಗವನ್ನು ಎಳೆಎಳೆಯಾಗಿ ಬಿಡಿಸಿದರು. ಅವರ ತಾಯಿ ಸರ್ವಮಂಗಳಮ್ಮ ಅವರೂ ಕೂಡ ಅದೇ ವಿನಯವಂತಿಕೆ ಅಳವಡಿಸಿಕೊಂಡಿದ್ದರು. ಆ ಸಂಸ್ಕಾರ ಕೆ.ವಿ.ಮಲ್ಲೇಶ್ ಅವರಿಗೂ ಬಂದಿದೆ. ಆದರೆ, ಈ ಸಂಸ್ಕಾರ ಈಗಿನ ರಾಜಕಾರಣಕ್ಕೆ ಒಗ್ಗುವುದಿಲ್ಲ ಎಂದರು.

ಕಾರ್ಯಕ್ರಮದಲ್ಲಿ ಮುಡಿಗುಂಡ ವಿರಕ್ತ ಮಠದ ಶ್ರೀ ಶ್ರೀಕಂಠ ಸ್ವಾಮೀಜಿ, ವಿಶ್ರಾಂತ ಪ್ರಾಂಶುಪಾಲ ಪ್ರೊ.ಚಂದ್ರಶೇಖರ್, ಕನ್ನಡ ಸಾಹಿತ್ಯ ಕಲಾ ಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್, ನಗರಪಾಲಿಕೆ ಮಾಜಿ ಸದಸ್ಯ ಕೆ.ವಿ.ಶ್ರೀಧರ್, ರೊ.ಆಯರಹಳ್ಳಿ ಪಿ.ವಿರೂಪಾಕ್ಷ, ಮರಿಮಲ್ಲಪ್ಪ ಪ್ರೌಢಶಾಲೆಯ ಶಿಕ್ಷಕ ಬಿ.ಆರ್. ಶಿವಕುಮಾರ್, ಮುಖಂಡರಾದ ಕಾನ್ಯ ಎಸ್.ಶಿವಮೂರ್ತಿ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು. ವಿದ್ವಾನ್ ಆನಂದಕುಮಾರ್ ಮತ್ತು ತಂಡದವರು ವಚನ ಗಾಯನ ನಡೆಸಿಕೊಟ್ಟರು.



ದಿ.ಸರ್ವಮಂಗಳಮ್ಮ ಮತ್ತು ದಿ.ಕೆ.ಎಸ್. ವೀರಭದ್ರಪ್ಪ ಅವರ ಸ್ಮರಣಾರ್ಥ ಏರ್ಪಡಿಸಿದ್ದ ಶಿವಾನುಭವ ದಾಸೋಹ ಕಾರ್ಯಕ್ರಮವನ್ನು ಹಿರಿಯ ಸಾಹಿತಿ ಪ್ರೊ.ಎಂ.ಕೃಷ್ಣೇಗೌಡ ಉದ್ಘಾಟಿಸಿದರು.

ಸ್ವಾತಂತ್ರ್ಯ ಬಂದ ವೇಳೆ ಮೈಸೂರು ಭಾಗದಲ್ಲಿ ಸುತ್ತೂರು ಮಠ ಶಿಕ್ಷಣ ಕ್ಷೇತ್ರದಲ್ಲಿ ಕೈಗೊಂಡ ಕಾರ್ಯ ಶ್ಲಾಘನೀಯ. ಈ ಭಾಗದಲ್ಲಿ ಸುತ್ತೂರು ಮಠ ಶಿಕ್ಷಣ ಕ್ಷೇತ್ರದಲ್ಲಿ ತೊಡಗಿಸಿಕೊಳ್ಳದಿದ್ದರೆ, ಇಂದು ಈ ಭಾಗದ ಯುವಕರು ಕತ್ತಲ್ಲಲ್ಲಿ ಇರಬೇಕಿತ್ತು. ಸುತ್ತೂರು ಮಠ ಶಿಕ್ಷಣ ಕ್ಷೇತ್ರದಲ್ಲಿ ಸಾಕಷ್ಟು ಹೆಸರುವಾಸಿಯಾಗಿದೆ. ಒಂದು ಸರ್ಕಾರ ಮಾಡದ ಕೆಲಸವನ್ನು ಸುತ್ತೂರು ಪರಂಪರೆ ಕೈಗೊಂಡು ಈ ಭಾಗದ ಯುವಕರಿಗೆ ಶಿಕ್ಷಣ ನೀಡುತ್ತಿದೆ. ಅಂತೆಯೇ ಕುದೇರು ಮಠದ ಶ್ರೀ ಗುರುಶಾಂತ ಸ್ವಾಮೀಜಿಗಳು ನಾನು ಯಾವುದೇ ಸಂದರ್ಭದಲ್ಲಿ ಭೇಟಿಯಾದಾಗಲೂ ನನ್ನ ಕೈಯನ್ನು ಮುಟ್ಟಿ ಯೋಗಕ್ಷೇಮ ವಿಚಾರಿಸುತ್ತಾರೆ. ಇದು ಲಿಂಗಾಯತ ಮಠ–ಮಾನ್ಯಗಳು ಸಮಾಜದಲ್ಲಿ ಸಮಾನತೆ ಅನುಷ್ಠಾನಗೊಳಿಸುವ ಕುರುಹುಗಳು. **–ಪ್ರೊ.ಎಂ.ಕೃಷ್ಣೇಗೌಡ, ಹಿರಿಯ ಸಾಹಿತಿ**

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಕೊಡವ ಹಾಕಿ ಪ್ರೀಮಿಯರ್ ಲೀಗ್

ಪಳೆ ತಾಲೂಕ್ ತಂಡ ಚಾಂಪಿಯನ್





'ಕೊಡವ ಹಾಕಿ ಪ್ರೀಮಿಯರ್ ಲೀಗ್-2025' ನಲ್ಲಿ 'ಪಳೆ ತಾಲೂಕ್ ತಂಡ' ಚಾಂಪಿಯನ್ ಆಗಿ ಹೊರಹೊಮ್ಮಿತು. ಮತ್ತೊಂದು ಚಿತ್ರದಲ್ಲಿ ಶಾಸಕ ಅಜ್ಜಿಕುಟ್ಟೀರ ಎಸ್.ಪೊನ್ನಣ್ಣ, ಹಾಕಿ ಪಟುಗಳನ್ನು ಅಭಿನಂದಿಸಿ ಫೈನಲ್ ಪಂದ್ಯಕ್ಕೆ ಚಾಲನೆ ನೀಡಿದ ಸಂದರ್ಭ.

ಮೈಸೂರು, ಜೂ.29(ಎಂಕೆ)- ಮೈಸೂರಿನ ಚಾಮುಂಡಿವಿಹಾರ ಹಾಕಿ ಮೈದಾನದಲ್ಲಿ ನಡೆದ 'ಕೊಡವ ಹಾಕಿ ಪ್ರೀಮಿಯರ್ ಲೀಗ್-2025'(ಕೆಹೆಚ್‌ಪಿಎಲ್)ನಲ್ಲಿ 'ಪಳೆ ತಾಲೂಕ್ ತಂಡ ಚಾಂಪಿಯನ್ ಆಗಿ ಹೊರಹೊಮ್ಮಿತು.

ಕೊಡವ ಸಮಾಜ ಮೈಸೂರು, ಹಾಕಿ ಮೈಸೂರು ಸಹಯೋಗದೊಂದಿಗೆ ಕೊಡವ ಸಮಾಜ ಯೂತ್ ವಿಂಗ್ ಮೈಸೂರು ವತಿಯಿಂದ ಆಯೋಜಿಸಿದ್ದ ಪಂದ್ಯಾವಳಿಯ ಫೈನಲ್ ಪಂದ್ಯದಲ್ಲಿ ಕೂರ್ಗ್ ಟೈಟನ್ಸ್ ವಿರುದ್ಧ ಪಳೆ ತಾಲೂಕ್ ತಂಡ 1-3 ಗೋಲ್‌ಗಳ ಮೂಲಕ ಭರ್ಜರಿ ಜಯದೊಂದಿಗೆ ಚಾಂಪಿಯನ್ ಆಯಿತು.

ಪಂದ್ಯದ ಮೊದಲಾರ್ಧದಲ್ಲಿ ಪೆನಾಲ್ಟಿ ಶೂಟೌಟ್‌ನಲ್ಲಿ 1 ಗೋಲ್ ಗಳಿಸಿದ ಕೂರ್ಗ್ ಟೈಟನ್ಸ್ ಮುನ್ನಡೆ ಸಾಧಿಸಿತು. ಆದರೆ, ಪಂದ್ಯದ ದ್ವಿತೀಯಾರ್ಧದಲ್ಲಿ ಅಕ್ಷರಶಃ ಆಕ್ರಮಣಕಾರಿ ಆಟವಾಡಿದ ಪಳೆ ತಾಲೂಕ್ ತಂಡ, ಸತತವಾಗಿ 3 ಗೋಲ್ ಬಾರಿಸುವ ಮೂಲಕ ಪ್ರಾಬಲ್ಯ ಸಾಧಿಸಿ. ಅಮೋಘ ಗೆಲುವು ದಾಖಲಿಸಿತು. ಗೆಲುವಿಗಾಗಿ ತೀವ್ರ ಪೈಪೋಟಿ ನೀಡಿದ ಕೂರ್ಗ್ ಟೈಟನ್ಸ್ ಮೊದಲ ರನ್ನರ್ ಅಪ್ ಸ್ಥಾನ ಪಡೆದರೆ, ಕೊಡವ ವಾರಿಯರ್ಸ್ 2ನೇ ರನ್ನರ್ ಅಪ್ ಆಯಿತು. ಕೊನೆಯಲ್ಲಿ ವಿಜೇತ ತಂಡಗಳಿಗೆ ಆಕರ್ಷಕ ಬೃಹತ್ ಟ್ರೋಫಿ ಸಹಿತ ನಗದು ಬಹುಮಾನ ನೀಡಿ ಅಭಿನಂದಿಸಲಾಯಿತು.

ಅಭಿನಂದನಾರ್ಹ: ಇದಕ್ಕೂ ಮುನ್ನ ನಡೆದ ಸಮಾರೋಪ ಕಾರ್ಯಕ್ರಮದಲ್ಲಿ ಮಾತನಾಡಿದ ಶಾಸಕ ಅಜ್ಜಿಕುಟ್ಟೀರ ಎಸ್.ಪೊನ್ನಣ್ಣ, ಮೊದಲ ಬಾರಿಗೆ ಮೈಸೂರಿನ ಕೊಡವರನ್ನು ಒಂದೆಡೆ ಸೇರಿಸಿ, ಹಾಕಿ ಪಂದ್ಯಾವಳಿ ಆಯೋಜನೆ ಮಾಡಿರುವುದು ಅತ್ಯಂತ ಸಂತಸದ ವಿಚಾರವಾಗಿದ್ದು, ಆಯೋಜನೆ ಮಾಡಿರುವ ಕೊಡವ ಯೂತ್ ವಿಂಗ್‌ಗೆ ಅಭಿನಂದನೆ ಸಲ್ಲಿಸುತ್ತೇನೆ. ಇಂತಹ ಪಂದ್ಯಾವಳಿಯನ್ನು ಆಯೋಜನೆ ಮಾಡುವುದು ಅಷ್ಟು ಸುಲಭವಲ್ಲ. ಇದಕ್ಕಾಗಿ ಮೈಸೂರು ಕೊಡವ ಸಮಾಜ, ಹಾಕಿ ಮೈಸೂರಿನ ಸಹಕಾರವೂ ಅತ್ಯಮೂಲ್ಯವಾಗಿದೆ. ನಿಮ್ಮೆಲ್ಲರ ಕ್ರೀಡಾ ಉತ್ಸಾಹ, ಸಾಹಸ ಕಂಡು ಹೆಮ್ಮೆಯಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕ್ರೀಡೆಗೆ ಪ್ರೋತ್ಸಾಹಿಸಿ: ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಆಯುಕ್ತ ಆರ್.ಚೇತನ್ ಮಾತನಾಡಿ, ಉನ್ನತ ವಿದ್ಯಾಭ್ಯಾಸ ಮಾಡಿದವರು, ಶೇ.99 ಅಂಕಗಳನ್ನು ಪಡೆದವರು ಸಹ ಸಣ್ಣ ಸೋಲಿಗೆ ಆತ್ಮಹತ್ಯೆ ಮಾಡಿಕೊಳ್ಳುವುದನ್ನು ನೋಡಿದ್ದೇವೆ ಆದರೆ, ಸೋಲು -ಗೆಲುವು ಎರಡನ್ನು ನೋಡಿರುವ ಕ್ರೀಡಾಪಟುಗಳು ಕಷ್ಟಗಳನ್ನು ಎದುರಿಸಿ ಮತ್ತೆ ಗೆಲುವಿನತ್ತ ಸಾಗುವ ಮನೋಸಾಮರ್ಥ್ಯ ಹೊಂದಿರುತ್ತಾರೆ. ದೈಹಿಕವಾಗಿ ಮಾತ್ರವಲ್ಲದೆ, ಮಾನಸಿಕವಾಗಿಯೂ ಸದೃಢರಾಗುತ್ತಾರೆ. ಆದ್ದರಿಂದ ಪೋಷಕರು ತಮ್ಮ ಮಕ್ಕಳನ್ನು ಯಾವುದಾದರೂ ಒಂದು ಕ್ರೀಡೆಗೆ ಸೇರಿಸಿ, ಪ್ರೋತ್ಸಾಹಿಸಿ ಎಂದು ತಿಳಿಸಿದರು.

ಹಾಕಿ ಜನಪ್ರಿಯತೆ ಹೆಚ್ಚಲಿ: ಹಾಕಿ ಕ್ರೀಡೆಯನ್ನು ಇನ್ನಷ್ಟು ಜನಪ್ರಿಯಗೊಳಿಸುವ ನಿಟ್ಟಿನಲ್ಲಿ ಕೊಡವ ಸಮಾಜ ಯೂತ್ ವಿಂಗ್ ಕೊಡವ ಹಾಕಿ ಪ್ರೀಮಿಯರ್ ಲೀಗ್ ಆಯೋಜನೆ ಮಾಡಿರುವುದು ಶ್ಲಾಘನೀಯ. ಮೊದಲೆಲ್ಲಾ ರಾಜ್ಯ, ರಾಷ್ಟ್ರಮಟ್ಟದಲ್ಲಿ ಕ್ರೀಡಾಕೂಟಗಳು ನಡೆಯುತ್ತಿದ್ದವು. ತದ ನಂತರ ಫುಟ್ ಬಾಲ್ ಪ್ರೀಮಿಯರ್ ಲೀಗ್ ಮಾದರಿಯಲ್ಲೇ ಭಾರತದಲ್ಲಿಯೂ ಕ್ರಿಕೆಟ್ ಮತ್ತು ಇನ್ನಿತರೆ ಕ್ರೀಡೆಗಳ ಲೀಗ್‌ಗಳನ್ನು ಯಶಸ್ವಿಗೊಳಿಸಲಾಯಿತು. ಅದೇ ಲೀಗ್ ಮಾದರಿಯಲ್ಲಿ ಎರಡು ಜಿಲ್ಲೆಗಳ ಕ್ರೀಡಾಪಟುಗಳನ್ನು ಸೇರಿಸಿಕೊಂಡು ಹಾಕಿ ಪಂದ್ಯಾವಳಿ ಆಯೋಜನೆ ಮಾಡಿರುವುದು ಅಭಿನಂದನಾರ್ಹ ಎಂದರು.

ಯುನೈಟೆಡ್ ಕೊಡವ ಆರ್ಗನೈಜೇಷನ್ ಅಧ್ಯಕ್ಷ ಮಂಜು ಚಿಣ್ಣಪ್ಪ ಕೊಕ್ಕಲೆಮಾಡ, ವಂಸಿ ಮೆರ್ಲಾ ಗ್ರೂಪ್‌ನ ಪ್ರದೀಪ್ ಅರಸ್, ಹಾಕಿ ಮೈಸೂರು ಅಧ್ಯಕ್ಷ ಕೊಂಗಂಡ ದಿಲೀಪ್, ಮೈಸೂರು ಕೊಡವ ಸಮಾಜ ಅಧ್ಯಕ್ಷ ಪೊಂಜಂಡ ಗಣಪತಿ, ಗ್ರಾಫಿಕ್ ಡಿಸೈನರ್ ಸುರಭಿ, ಸ್ತ್ರೀರೋಗ ತಜ್ಞರಾದ ಡಾ.ಅಪ್ಪನೆರವಂಡ ಸೋನಿಯಾ ಮಂದಪ್ಪ, ನಟಿ ಶ್ವೇತಾ ಚಂಗಪ್ಪ ವಕೀಲರಾದ ಸ್ಮಿತಾ ದೇವಯ್ಯ, ಭಾರತೀಯ ಹಾಕಿ ಪಟು ಸಿ.ಬಿ.ಪೂವಣ್ಣ, ತಂತ್ರಜ್ಞೆ ಪುಳ್ಳಂಗಡ ಸೌಮ್ಯ ರೋಹಿಣಿ ಬೋಪ್ಪಣ್ಣ, ಮೋಟಾರ್ ಸ್ಪೋರ್ಟ್ ಉತ್ಸಾಹಿ ವಂಸಿ ಮೆರ್ಲಾ, ಕೊಡವ ಸಮಾಜ ಯೂತ್ ವಿಂಗ್ ಮೈಸೂರು ಅಧ್ಯಕ್ಷ ಕೊಟೆರಾ ವೇದಿತ್ ಉತ್ತಯ್ಯ, ವಿಹಾರಿಕಾ ಮತ್ತಿತರರು ಉಪಸ್ಥಿತರಿದ್ದರು.

ಕ್ರೀಡೆ ನಮ್ಮ ಸಂಸ್ಕೃತಿ...

ನಮ್ಮ ಸಂಸ್ಕೃತಿ ನಮ್ಮ ಕ್ರೀಡೆಯಾಗಿದ್ದು, ಕೊಡಗಿನಲ್ಲಿ ಹಾಕಿ ಸೇರಿದಂತೆ ಎಲ್ಲಾ ಕ್ರೀಡೆಗೂ ಪ್ರೋತ್ಸಾಹ ನೀಡಲಾಗುತ್ತದೆ. ರಾಜ್ಯ ಸರ್ಕಾರ ಕ್ರೀಡೆಗೆ ಹೆಚ್ಚಿನ ಪ್ರೋತ್ಸಾಹ ನೀಡುತ್ತಿದ್ದು, ಅನುದಾನವನ್ನು ಸದ್ಬಳಕೆ ಮಾಡಿಕೊಳ್ಳಬೇಕು. ಕ್ರೀಡಾ ಪಂದ್ಯಾವಳಿ ಆಯೋಜನೆಗಾಗಿ ವಿರಾಜಪೇಟೆಯಲ್ಲಿ 11 ಎಕರೆ ಜಾಗವನ್ನು ಗುರ್ತಿಸಲಾಗಿದ್ದು, ಮುಂದಿನ ದಿನಗಳಲ್ಲಿ ಅಭಿವೃದ್ಧಿ ಮಾಡಲಾಗುವುದು.

-ಅಜ್ಜಿಕುಟ್ಟೀರ ಎಸ್.ಪೊನ್ನಣ್ಣ, ಶಾಸಕ

ಭಾರತ ತಂಡದಲ್ಲಿ ರಾಜ್ಯದ ಹಾಕಿ ಪಟುಗಳಿಲ್ಲ...!

ಒಂದು ಕಾಲದಲ್ಲಿ ಭಾರತೀಯ ಹಾಕಿ ತಂಡದಲ್ಲಿ ರಾಜ್ಯದ ನಾಲ್ಕೈದು ಕ್ರೀಡಾಪಟುಗಳು ಇರುತ್ತಿದ್ದರು. ಅವರಲ್ಲಿ ಕೊಡಗಿನವರೇ ಹೆಚ್ಚಾಗಿ ಭಾರತವನ್ನು ಪ್ರತಿನಿಧಿಸುವ ವಾತಾವರಣ ಇತ್ತು. ಆದರೆ, ಕಳೆದ ಒಲಂಪಿಕ್‌ನಲ್ಲಿ ಕಂಚು ಗೆದ್ದ ಭಾರತದ ಹಾಕಿ ತಂಡದಲ್ಲಿ ರಾಜ್ಯದ ಹಾಕಿಪಟುಗಳು ಇಲ್ಲದಿರುವುದು ಅತ್ಯಂತ ಬೇಸರದ ಸಂಗತಿಯಾಗಿದೆ. ಈ ನಿಟ್ಟಿನಲ್ಲಿ ಹಾಕಿ ಕರ್ನಾಟಕದೊಂದಿಗೆ ಚರ್ಚಿಸಲಾಗಿದ್ದು, ಹಾಕಿ ಪಟುಗಳನ್ನು ಗುರ್ತಿಸಿ, ಪ್ರೋತ್ಸಾಹಿಸಲು ಎಲ್ಲಾ ರೀತಿಯ ನೆರವು ನೀಸಲು ಕ್ರೀಡಾ ಇಲಾಖೆ ಸಿದ್ದವಾಗಿದೆ.

- ಆರ್.ಚೇತನ್, ಆಯುಕ್ತ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ಮೊದಲ ಆಷಾಢ ಶುಕ್ರವಾರದಂದು ಚಾಮುಂಡಿಬೆಟ್ಟದಲ್ಲಿ ಅವ್ಯವಸ್ಥೆಗಳ ಆಗರ

ಸಾಮಾಜಿಕ ಜಾಲತಾಣದಲ್ಲಿ ಬೇಸರ, ಜಿಲ್ಲಾಡಳಿತಕ್ಕೆ ಸಲಹೆ ಸೂಚನೆ



ಮೈಸೂರು, ಜೂ.29- ಆಷಾಢ ಮಾಸದ ಮೊದಲ ಶುಕ್ರವಾರ ತಾಯಿ ಚಾಮುಂಡೇಶ್ವರಿ ದರ್ಶನಕ್ಕೆ ತೆರಳಿದ್ದ ಭಕ್ತರು, ಚಾಮುಂಡಿಬೆಟ್ಟದಲ್ಲಿನ ಅವ್ಯವಸ್ಥೆ ಬಗ್ಗೆ ಸಾಮಾಜಿಕ ಜಾಲತಾಣಗಳ ಮೂಲಕ ಬೇಸರ ವ್ಯಕ್ತಪಡಿಸುತ್ತಿದ್ದಾರೆ.

ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ತಿಳಿಸಿದಂತೆ ಭಕ್ತರಿಗೆ ಅನುಕೂಲವಾಗುವ ರೀತಿಯಲ್ಲಿ ವ್ಯವಸ್ಥೆ ಮಾಡಿರಲಿಲ್ಲ. ಇತ್ತೀಚೆಗೆ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ನಡೆದ ಕಾಲ್ತುಳಿತ ದುರಂತ ಕಣ್ಮುಂದೆ ಇದ್ದರೂ ಸೂಕ್ತ ಸುರಕ್ಷತಾ ಕ್ರಮಗಳನ್ನು ಕೈಗೊಂಡಿರಲಿಲ್ಲ. ಪರಿಣಾಮ ರಾಜ್ಯದ ವಿವಿಧೆಡೆ ಹಾಗೂ ಹೊರ ರಾಜ್ಯಗಳಿಂದ ಆಗಮಿಸಿದ್ದ ಭಕ್ತರು ತುಂಬಾ ತೊಂದರೆ ಅನುಭವಿಸಿದರು. ಇದು ಸರ್ಕಾರ ಹಾಗೂ ಜಿಲ್ಲಾಡಳಿತದ ಜೊತೆಗೆ ಮೈಸೂರಿಗರಿಗೂ ಮುಜುಗರ ತರುವ ಸಂಗತಿಯಾಗಿದೆ. ಇನ್ನಾದರೂ ಭಕ್ತರು ಸುರಕ್ಷಿತ ಹಾಗೂ ತ್ವರಿತಗತಿಯಲ್ಲಿ ದೇವಿಯ ದರ್ಶನ ಮಾಡಲು ಅನುವು ಮಾಡಿಕೊಡಬೇಕು ಎಂದು ನೊಂದ ನಾಗರಿಕರು, ಬಹಿರಂಗ ಪತ್ರದ ಮೂಲಕ ಜಿಲ್ಲಾಧಿಕಾರಿಗಳನ್ನು ಆಗ್ರಹಿಸಿದ್ದಾರೆ.

ಆಷಾಢ ಶುಕ್ರವಾರಗಳಂದು ಚಾಮುಂಡಿಬೆಟ್ಟಕ್ಕೆ ಲಕ್ಷಾಂತರ ಭಕ್ತರು ಆಗಮಿಸುವುದರಿಂದ ಸುರಕ್ಷತಾ ಕ್ರಮಗಳಲ್ಲಿ ವ್ಯತ್ಯಾಸವಾಗಬಾರದು. ಹಿಂದೆ ಸ್ಥಳೀಯ ಸಂಘ-ಸಂಸ್ಥೆಗಳೊಂದಿಗೆ ಸಭೆ ನಡೆಸಿ ಅಭಿಪ್ರಾಯ, ಸಲಹೆಗಳನ್ನು ಸಂಗ್ರಹಿಸಲಾಗುತ್ತಿತ್ತು. ಅನ್ನ ದಾಸೋಹ, ಪ್ರಸಾದ, ಕುಡಿಯುವ ನೀರು ಸೇರಿದಂತೆ ಭಕ್ತರಿಗೆ ಅಗತ್ಯವಾದ ಎಲ್ಲಾ ವ್ಯವಸ್ಥೆಗಳ ಬಗ್ಗೆ ಚರ್ಚಿಸಿ, ಸೂಕ್ತ ಯೋಜನೆ ರೂಪಿಸಿಕೊಳ್ಳಲಾಗುತ್ತಿತ್ತು. ಸಂಘ-ಸಂಸ್ಥೆಗಳ ಸದಸ್ಯರು ಸ್ವಯಂಪ್ರೇರಿತರಾಗಿ ವ್ಯವಸ್ಥೆ ನಿರ್ವಹಿಸುತ್ತಿದ್ದರು. ಆದರೆ ಈ ಬಾರಿ ಮೊದಲ ಶುಕ್ರವಾರ ಸೂಕ್ತ ವ್ಯವಸ್ಥೆಯಿಲ್ಲದೆ ಭಕ್ತರ ನೂಕುನುಗ್ಗಲು ಉಂಟಾಗಿದ್ದು, ಆತಂಕ ಸೃಷ್ಟಿಸಿತ್ತು.

ಮೆಟ್ಟಿಲು ಮೂಲಕ ಬರುವವರಿಗೆ 30 ನಿಮಿಷದಲ್ಲಿ ದೇವಿಯ ದರ್ಶನಕ್ಕೆ ಕ್ರಮ ವಹಿಸಲಾಗುವುದು. ಬಾದಾಮಿ ಹಾಲು ಹಾಗೂ ಡ್ರೈಫ್ರೂಟ್ಸ್ ನೀಡಲಾಗುವುದು. ಕುಡಿಯುವ ನೀರು, ಆಂಬುಲೆನ್ಸ್, ಶೌಚಾಲಯ ಸೇರಿದಂತೆ ಎಲ್ಲಾ ರೀತಿಯ ವ್ಯವಸ್ಥೆ ಮಾಡಿಕೊಳ್ಳಲಾಗಿದೆ ಎಂದು ತಿಳಿಸಲಾಗಿತ್ತು. ಆದರೆ ಇವೆಲ್ಲವನ್ನೂ ಸರಿಯಾದ ರೀತಿಯಲ್ಲಿ ವ್ಯವಸ್ಥೆ ಮಾಡಿರಲಿಲ್ಲ. ಅನನುಭವ, ಅವೈಜ್ಞಾನಿಕ ಕ್ರಮ, ನಿರ್ವಹಣೆಯಲ್ಲಿನ ವೈಫಲ್ಯ ಗೋಚರಿಸುತ್ತಿತ್ತು. ಇನ್ನಾದರೂ ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರೂ ಆದ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಅನುಭವಿ ರಾಜಕಾರಣಿಯಾದ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಅವರಿಗೆ ಕಳಂಕ ಬರದಂತೆ ನಿರ್ವಹಿಸುವ ನಿಟ್ಟಿನಲ್ಲಿ ಜಿಲ್ಲಾಡಳಿತ ನಿಗಾ ವಹಿಸಬೇಕಿದೆ.

ಸೂಕ್ತ ನಿರ್ವಹಣೆಗೆ ಹಿರಿಯ, ನುರಿತ ಅಧಿಕಾರಿ ಹಾಗೂ ಸಿಬ್ಬಂದಿಯನ್ನು ನಿಯೋಜಿಸಬೇಕು. ಸೂಕ್ತ ಸ್ಥಳಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು. ಈಗಾಗಲೇ ವಿ-ಗಾರ್ಡ್ ಸಿಎಸ್‌ಆರ್ ನಿಧಿಯಿಂದ ದಾಸೋಹ ಭವನಕ್ಕೆ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಮಾಡಿರುವಂತೆ, ವಿಶೇಷ ದಿನಗಳಲ್ಲಿ ಸಂಘ-ಸಂಸ್ಥೆಗಳ ಸಹಕಾರ ಪಡೆದು ಭಕ್ತರಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು. ಬೆಟ್ಟದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸ್ಥಾಪಿಸಬೇಕು. ತುರ್ತಾಗಿ ಆಂಬುಲೆನ್ಸ್ ವ್ಯವಸ್ಥೆಯೊಂದಿಗೆ ವೈದ್ಯಾಧಿಕಾರಿ ಹಾಗೂ ಸಿಬ್ಬಂದಿಯನ್ನು ನಿಯೋಜಿಸಬೇಕು.

ಮೈಸೂರು ದಸರಾ, ಅಂತಾರಾಷ್ಟ್ರೀಯ ಯೋಗ ದಿನ, ಪ್ರವಾಸೋದ್ಯಮ ಕಾರ್ಯಕ್ರಮ ಸೇರಿದಂತೆ ಜಿಲ್ಲಾ ಪಂಚಾಯಿತಿ ಹಾಗೂ ನಗರಪಾಲಿಕೆ ಯೋಜನೆಗಳ ಅನುಷ್ಠಾನದಲ್ಲಿ ಜೊತೆಯಾಗಿರುವ ಸಂಘ-ಸಂಸ್ಥೆಗಳ ಸಹಕಾರ ಪಡೆದು, ಬೆಟ್ಟದ ತಪ್ಪಲು, ಮೆಟ್ಟಿಲು ಮಾರ್ಗ, ನಂದಿ ಬಳಿ ಸೇರಿದಂತೆ ಜನ ಸಂಚಾರವಿರುವ ಎಲ್ಲಾ ಸ್ಥಳಗಳಲ್ಲೂ ಸ್ವಯಂ ಸೇವಕರನ್ನು ಸಾವಿರಾರು ಸಂಖ್ಯೆಯಲ್ಲಿ ನಿಯೋಜಿಸಬೇಕು. ಅಧಿಕಾರಿಗಳು ಮನೆಮಂದಿಯನ್ನೆಲ್ಲಾ ಕರೆತಂದು ವಿಐಪಿ ದರ್ಶನಕ್ಕೆ ಅವಕಾಶ ಮಾಡಿಕೊಡುವುದಕ್ಕೆ ಕಡಿವಾಣ ಹಾಕಬೇಕು. ಮೆಟ್ಟಿಲು ಮೂಲಕ ಬಂದವರಿಗೆ ತಿಳಿಸಿರುವಂತೆ 30 ನಿಮಿಷದಲ್ಲಿ ದರ್ಶನಕ್ಕೆ ಅನುವು ಮಾಡಿಕೊಡಬೇಕು. 2 ಸಾವಿರ ರೂ. ವಿಶೇಷ ದರ್ಶನದ ಟಿಕೆಟ್ ಪಡೆದವರಿಗೆ ತಿರುಪತಿ ಮಾದರಿಯಲ್ಲಿ ಟೈಂ ಸ್ಲಾಟ್ ನೀಡಬೇಕು. ಯಾವುದೇ ಶಿಫಾರಸ್ಸು ಪತ್ರಗಳಿಗೆ ವಿಐಪಿ ಪ್ರವೇಶ ಸರದಿಯಲ್ಲಿ ಅವಕಾಶವಿಲ್ಲ, ರೀಲ್ಸ್ ಮಾಡುವಂತಿಲ್ಲ ಎಂಬ ನಿರ್ಬಂಧವನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಪೊಲೀಸರು, ಸ್ವಯಂ ಸೇವಕರು ಭಕ್ತರೊಂದಿಗೆ ಸೌಜನ್ಯದಿಂದ ವರ್ತಿಸುವಂತೆ ಸೂಚಿಸಬೇಕು ಎಂದು ಮನವಿ ಮಾಡಿದ್ದಾರೆ.

ಸಂಶೋಧನೆಗಳು ಸಮುದಾಯದಲ್ಲಿ ಅನುಷ್ಠಾನಗೊಂಡಾಗ ಮಾತ್ರ ಜನಮುಖಿಯಾಗುತ್ತವೆ



ಬಸವ ಜಯಂತಿ, ಕಾಯಕ ದಿನಾಚರಣೆ ಹಾಗೂ ಕಾಯಕಶ್ರೀ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಗಾವಡೆಗೆರೆ ಶ್ರೀ ಗುರುಲಿಂಗ ಜಂಗಮ ದೇವರ ಮಠದ ಶ್ರೀ ನಟರಾಜ ಸ್ವಾಮೀಜಿ ಮಾತನಾಡಿದರು.

ಮೈಸೂರು, ಜೂ.29(ಎಸ್‌ಪಿಎನ್)- ಉತ್ತಮ ಸಂಶೋಧನೆಗಳು ಸಮುದಾಯದಲ್ಲಿ ಅನುಷ್ಠಾನಗೊಂಡಾಗ ಮಾತ್ರ ಅಂತಹ ಸಂಶೋಧನೆಗಳು ಜನಮುಖಿಯಾಗಿರುತ್ತವೆ ಎಂಬುದನ್ನು ಹನ್ನೆರಡನೇ ಶತಮಾನದ ವಚನಕಾರರ ತಮ್ಮ ವಚನಗಳ ಮೂಲಕ ತೋರಿಸಿಕೊಟ್ಟಿದ್ದಾರೆ ಎಂದು ಗಾವಡೆಗೆರೆ ಶ್ರೀ ಗುರುಲಿಂಗ ಜಂಗಮ ದೇವರ ಮಠದ ಶ್ರೀ ನಟರಾಜ ಸ್ವಾಮೀಜಿ ಅಭಿಪ್ರಾಯಪಟ್ಟರು.

ಮೈಸೂರು ಜೆಎಸ್‌ಎಸ್ ಆಸ್ಪತ್ರೆ ಆವರಣದ ಶ್ರೀ ಶಿವರಾತ್ರಿ ರಾಜೇಂದ್ರ ಭವನದಲ್ಲಿ ಶರಣ ಸಾಹಿತ್ಯ ಪರಿಷತ್ ಮೈಸೂರು ನಗರ ಘಟಕ, ಕದಳಿ ಮಹಿಳಾ ವೇದಿಕೆ ಸಹಯೋಗದೊಂದಿಗೆ ಬಸವ ಜಯಂತಿ, ಕಾಯಕ ದಿನಾಚರಣೆ ಹಾಗೂ 'ಕಾಯಕ ಶ್ರೀ' ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಸಾಧಕರನ್ನು ಸನ್ಮಾನಿಸಿ ಮಾತನಾಡಿದರು.

ವಚನಕಾರರು ತಮ್ಮ ಅನುಭವವನ್ನೇ ವಚನಗಳಾಗಿ ರಚಿಸಿದರು. ಅವು ಇಂದಿಗೂ ಪ್ರಸ್ತುತ ಎಂಬುದನ್ನು ಬಸವಣ್ಣ ರಚಿತ ವಚನಗಳು ತೋರಿಸಿಕೊಟ್ಟಿವೆ. ಹಾಗಾಗಿ ವಚನಕಾರರು ತೋರಿಸಿಕೊಟ್ಟ ದಾರಿಯಲ್ಲಿ ನಾವೆಲ್ಲರೂ ಜೀವನ ರೂಪಿಸಿಕೊಳ್ಳುವಂಥ ಹೆಜ್ಜೆ ಹಾಕಬೇಕು ಎಂದರಲ್ಲದೆ, ಹನ್ನೆರಡನೇ ಶತಮಾನದ ವಚನ ಚಳವಳಿ ಸಮಗ್ರ ಕ್ರಾಂತಿಯ ಮೂಲ. ಇದನ್ನು ಸಮಗ್ರವಾಗಿ ಅಧ್ಯಯನ ಮಾಡಬೇಕು ಎಂದು ಕಿವಿಮಾತು ಹೇಳಿದರು.

ಕಾಯಕ ಸಿದ್ಧಾಂತವನ್ನು ಜಗತ್ತಿಗೆ ಪರಿಚಯಿಸಿದವರು ವಚನಕಾರರು. ಕಾಯಕದಲ್ಲಿ ದೇವರನ್ನು ಕಾಣಬಹುದು ಎಂಬ ಆಧ್ಯಾತ್ಮ ಸಿದ್ಧಾಂತವನ್ನು ಪ್ರತಿಪಾದಿಸಿದವರು ಶರಣರು. ಹಾಗಾಗಿ ಸಮಗ್ರ ವಚನಗಳು ಒಂದು ವಿಶ್ವವಿದ್ಯಾನಿಲಯಕ್ಕೆ ಸಮ ಎಂದು ಪ್ರತಿಪಾದಿಸಿದರು. ಇಂದು ಅವಿಭಕ್ತ ಕುಟುಂಬದ ಬಗ್ಗೆ ಎಲ್ಲರೂ ಮಾತನಾಡುತ್ತಾರೆ. ಆದರೆ ಮನೆಯಲ್ಲಿ ವಿಭಕ್ತ ಕುಟುಂಬ ರೀತಿ ನಡೆದುಕೊಳ್ಳುತ್ತಾರೆ. ಸಮಾಜದ ನಡುವೆ ಹೇಳುವ ಮಾತಿಗೂ, ನಡೆದುಕೊಳ್ಳುವ ನಡವಳಿಕೆಗೂ ಎಷ್ಟು ವ್ಯತ್ಯಾಸ ಇರುತ್ತದೆ ಎಂಬುದನ್ನು ಎಲ್ಲರೂ ಅರ್ಥ ಮಾಡಿಕೊಳ್ಳಬೇಕು. ಶರಣರ ಜೀವನ-ಕಾಯಕ ಎಲ್ಲವೂ ಒಂದೇ ಎಂಬುದನ್ನು ಅವರು ರಚಿಸಿರುವ ವಚನಗಳೇ ಸಾಕ್ಷಿಯಾಗಿವೆ ಎಂದರು.

'ಕಾಯಕ ಶ್ರೀ' ಪ್ರಶಸ್ತಿ ಪ್ರದಾನ: ಅಲ್ಲಮ ಪ್ರಭುಗಳ ವಚನಗಳು ಇಂದಿಗೂ ಅರಿವಿನ ಕಿಡಿಗಳಾಗಿ ಪ್ರಜ್ವಲಿಸುತ್ತಿವೆ. ಅವರ ಒಂದೊಂದು ವಚನಗಳು ಬೆರಗು ಮೂಡಿಸುತ್ತವೆ. ಅಲ್ಲಮ ಪ್ರಭುವಿನ ಆದರ್ಶ, ತತ್ತ್ವಗಳನ್ನು ಯುವ ಸಮೂಹ ಪಾಲಿಸಲು ಮುಂದಾಗಬೇಕು ಎಂದರಲ್ಲದೆ, ಕಾಯಕ ಜೀವಿಗಳಾದ ಎಸ್.ಐ. ಮಂಜುನಾಥ್, ಎನ್.ರಾಮಚಂದ್ರ ರಾವ್ ಅವರಿಗೆ 'ಕಾಯಕ ಶ್ರೀ' ಪ್ರಶಸ್ತಿ ನೀಡಿ, ಗೌರವಿಸಿರುವುದು ಸಂತೋಷದ ವಿಷಯ ಎಂದರು.


ಲಿಂ.ಶಿವಲಿಂಗಮ್ಮ ದತ್ತಿ ಲಿಂ ಗೊ.ರು. ಪರಮೇಶ್ವರಪ್ಪ ದತ್ತಿ, ಗೊರುಚ ದತ್ತಿ, ಗೊಂಡೇದಹಳ್ಳಿ ಪಾರ್ವತಮ್ಮ ರೇವಣ್ಣ ದತ್ತಿ ಹೆಸರಿಗೆ ಜಿ.ಪಿ.ಚಂದ್ರಧರ, ಜಿ.ಪಿ.ಸತೀಶ್, ಡಾ.ಮನೋಜ್ ಕುಮಾರ್, ದಿ.ಜಿ.ಆರ್.ರಾಜಶೇಖರಪ್ಪ, ಜಿ.ಆರ್.ರವಿರಾಜ್ ದತ್ತಿದಾಸೋಹಿಗಳಾಗಿದ್ದಾರೆ. ಈ ವೇಳೆ ಮೈಸೂರು ವಿವಿ ಕುವೆಂಪು ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕಿ ಡಾ.ಕೆ.ಎನ್.ಲೋಲಾಕ್ಷಿ, ಶರಣ ಸಾಹಿತ್ಯ ಪರಿಷತ್ ನಗರ ಘಟಕದ ಉಪಾಧ್ಯಕ್ಷ ಎಂ.ಚಿನ್ನಸ್ವಾಮಿ, ಕದಳಿ ಮಹಿಳಾ ವೇದಿಕೆಯ ಶಾರದಾ ಶಿವಲಿಂಗಸ್ವಾಮಿ, ಮಾಜಿ ಶಾಸಕ ತೋಂಟದಾರ್ಯ, ನಗರ ಪಾಲಿಕೆ ಮಾಜಿ ಸದಸ್ಯ ಕೆ.ವಿ.ಮಲ್ಲೇಶ್, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾ ಘಟಕದ ನಿರ್ದೇಶಕ ರೊ.ಆಯರಹಳ್ಳಿ ಪಿ.ವಿರೂಪಾಕ್ಷ, ಮರಿಮಲ್ಲಪ್ಪ ಪ್ರೌಢಶಾಲೆಯ ಹಿರಿಯ ಶಿಕ್ಷಕ ಬಿ.ಆರ್. ಶಿವಕುಮಾರ್, ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಎಂ.ಚಂದ್ರಶೇಖರ್ ಉಪಸ್ಥಿತರಿದ್ದರು. ರಾಜರಾಜೇಶ್ವರಿ ನಗರದ ರಾಜೇಶ್ವರಿ ಭಜನಾ ಮಂಡಳಿ ಮಹಿಳೆಯರಿಂದ ವಚನ ಗಾಯನ ನಡೆಸಿಕೊಟ್ಟರು.

ಸಿಜಿಕೆ ನೆನಪಿನ ಗ್ರೀಷ್ಮ ರಂಗೋತ್ಸವಕ್ಕೆ ಚಾಲನೆ

ರಂಗಭೂಮಿಯಿಂದ ಮನುಷ್ಯ-ಮನುಷ್ಯರ ನಡುವೆ ಅನುಸಂಧಾನ ಸಾಧ್ಯ

ರಂಗಾಯಣ ಮಾಜಿ ನಿರ್ದೇಶಕ ಹೆಚ್.ಜನಾರ್ಧನ್





ರಂಗಾಯಣದ ಭೂಮಿಗೀತದಲ್ಲಿ ಭಾನುವಾರ ಸಿಜಿಕೆ ನೆನಪಿನ ಗ್ರೀಷ್ಮ ರಂಗೋತ್ಸವಕ್ಕೆ ಸಿಜಿಕೆ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸುವ ಮೂಲಕ ಚಾಲನೆ ನೀಡಲಾಯಿತು. ಮತ್ತೊಂದು ಚಿತ್ರದಲ್ಲಿ 'ಸ್ಮಶಾನ ಕುರುಕ್ಷೇತ್ರ' ನಾಟಕ ಪ್ರದರ್ಶನದ ದೃಶ್ಯವೊಂದನ್ನು ಕಾಣಬಹುದು.

ಮೈಸೂರು,ಜೂ.29(ಪಿಎಂ)- ರಂಗಭೂಮಿ ಯಾವುದೇ ಅಡ್ಡಗೋಡೆ ಇಲ್ಲದೇ ಮನುಷ್ಯ-ಮನುಷ್ಯರ ನಡುವೆ ನೇರವಾದ ಅನುಸಂಧಾನ ನಡೆಸುತ್ತದೆ ಎಂದು ಮೈಸೂರು ರಂಗಾಯಣ ಮಾಜಿ ನಿರ್ದೇಶಕ ಹೆಚ್.ಜನಾರ್ಧನ್ (ಜನ್ನಿ) ಹೇಳಿದರು.

ಮೈಸೂರಿನ ರಂಗಾಯಣದ ಭೂಮಿಗೀತದಲ್ಲಿ ರಂಗಾಯಣದ ವತಿಯಿಂದ ಹಮ್ಮಿಕೊಂಡಿರುವ ಸಿಜಿಕೆ ನೆನಪಿನ ಗ್ರೀಷ್ಮ ರಂಗೋತ್ಸವ-2025 ಅನ್ನು ಸಿಜಿಕೆ (ಸಿ.ಜಿ.ಕೃಷ್ಣಸ್ವಾಮಿ) ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸುವ ಮೂಲಕ ಭಾನುವಾರ ಉದ್ಘಾಟಿಸಿ ಅವರು ಮಾತನಾಡಿದರು.

ಸಿನಿಮಾ ದೊಡ್ಡ ಪರದೆಯಲ್ಲಿ ಸಣ್ಣ ಮನುಷ್ಯರನ್ನು ದೊಡ್ಡದಾಗಿ ತೋರಿಸಿದರೆ, ಟಿವಿ ಸಣ್ಣ ಪರದೆಯಲ್ಲಿ ಮನುಷ್ಯನನ್ನು ಇರುವುದಕ್ಕಿಂತ ಚಿಕ್ಕದಾಗಿ ತೋರಿಸುತ್ತದೆ. ಆದರೆ ರಂಗಭೂಮಿ ಮನುಷ್ಯನನ್ನು ಇರುವಂತೆಯೇ ತೋರಿಸುತ್ತದೆ ಎಂದು ರಂಗಾಯಣ ಸ್ಥಾಪಿಸಿದ ಬಿ.ವಿ.ಕಾರಂತರು ಹೇಳುತ್ತಿದ್ದರು. ಈ ನಿಟ್ಟಿನಲ್ಲಿ ರಂಗಭೂಮಿ ಪ್ರಾಮುಖ್ಯತೆ ಅರಿಯಬೇಕು. ಸಿನಿಮಾ ಉಳಿಯದಿದ್ದರೂ ನಮಗೆ ಚಿಂತೆ ಇಲ್ಲ. ಆದರೆ ರಂಗಭೂಮಿ ಉಳಿಯುವುದು ಮುಖ್ಯ ಎಂದರು.

ಸಿಜಿಕೆ ಹೆಸರು ಕೈಬಿಡಲು ಬೌದ್ಧಿಕತೆ ಅಭಾವ ಕಾರಣ: ನಾನಿದ್ದೇನೆ ಎಂಬುದಕ್ಕಿಂತ ನಾವಿದ್ದೇವೆ ಎಂಬುದೇ ಜೀವನ. ಅದನ್ನು ರಂಗಭೂಮಿ ಕಲಿಸುತ್ತದೆ. ಈ ಸಿದ್ಧಾಂತವನ್ನು ನಮಗೆ ಕಲಿಸಿದ ಗುರು ಸಿಜಿಕೆ. ಅವರದು ಬಹಳ ದೊಡ್ಡ ವ್ಯಕ್ತಿತ್ವ. ನಾನು ರಂಗಾಯಣದಲ್ಲಿ ನಿರ್ದೇಶಕನಾಗಿದ್ದ ಸಂದರ್ಭದಲ್ಲಿ ಸಿಜಿಕೆ ನೆನಪಿನಲ್ಲಿ ಗ್ರೀಷ್ಮ ರಂಗೋತ್ಸವ ನಡೆಸಲು ಚಾಲನೆ ನೀಡಲಾಯಿತು. ನಂತರದಲ್ಲೂ ಗ್ರೀಷ್ಮ ರಂಗೋತ್ಸವ ನಡೆದರೂ ಸಿಜಿಕೆ ಹೆಸರು ಕೈಬಿಡಲಾಯಿತು. ಅಂದರೆ ಯಾರೋ ವಿಳಾಸ ಇಲ್ಲದೇ ಇರುವವರು ಮಾಡಿರುವ ಕೆಲಸ ಇದು. ಬೌದ್ಧಿಕತೆ ಹಾಗೂ ಆಲೋಚನೆಗಳಿಗೆ ಅಭಾವ ಬಂದಾಗ ಇಂತವು ನಡೆಯುತ್ತವೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಇದನ್ನೇ ಕೇಳಿಸಿಕೊ, ನೋಡು ಎನ್ನುವ ದಾರಿದ್ರ್ಯ: ನನಗೆ ಸಿಜಿಕೆ ಗುರುಗಳು. ಅವರು ನಮ್ಮಂತವರನ್ನು ಬೆಳೆಸಿದ್ದು ಅದ್ಭುತ. ಅವರು ಪಾಠ ಮಾಡಲಿಲ್ಲ. ಸುಮ್ಮನೆ ಹೇಳುತ್ತಾ ಹೋಗುತ್ತಿದ್ದರು. ಆಗ ಆಲಿಸುವುದು, ನೋಡುವುದು ನಮ್ಮ ಕೆಲಸವಾಗುತ್ತಿತ್ತು. ಆಲಿಸುವುದು ಹಾಗೂ ನೋಡುವ ಪ್ರಕ್ರಿಯೆ ಮುಖ್ಯವೇ ತಾನೆ. ಅದನ್ನು ಹೇಳಿಕೊಡ ಬೇಕೇ? ಆದರೆ ಇಂದು ಅದಕ್ಕೂ ದಾರಿದ್ರ್ಯ ಬಂದಿದೆ. ಇದನ್ನೇ ಕೇಳಿಸಿಕೊಳ್ಳಬೇಕು, ಇದನ್ನೇ ನೋಡಬೇಕೆಂದು ಹೇಳುವ ಸನ್ನಿವೇಶ ನಿರ್ಮಾಣವಾಗಿದೆ ಆದರೆ ನಮಗೆ ಇಂತಹ ದಾರಿದ್ರ್ಯ ಬಾರದಂತೆ ಸಿಜಿಕೆ ನೋಡಿಕೊಂಡರು. ಸಾವಿರಾರು ಹಳ್ಳಿಗಳ ಲಕ್ಷಾಂತರ ಜನರನ್ನು ನಮಗೆ ಮುಖಾಮುಖಿ ಮಾಡಿಸುತ್ತಿದ್ದರು ಎಂದು ತಿಳಿಸಿದರು.

ಸಿಜಿಕೆ 'ಸಮುದಾಯ' ಎಂಬ ದೊಡ್ಡ ರಂಗ ಸಂಸ್ಥೆಯಲ್ಲಿದ್ದರು. ಈ ರಂಗಚಳವಳಿಗೆ ಈಗ 50 ವರ್ಷಗಳು ತುಂಬಿವೆ. ಇದರ ಸಂಭ್ರಮವನ್ನು ವರ್ಷಗಳವರೆಗೆ ಆಚರಿಸಲು ಮುಂದಾಗಿದ್ದೇವೆ. ಸಮುದಾಯ ರಂಗ ಸಂಘಟನೆ ಮೂಲಕ ಜನರು ಇರುವೆಡೆಗೇ ರಂಗಭೂಮಿ ಕೊಂಡೊಯ್ದಿದ್ದು ಸಿಜಿಕೆ ಅವರ ವಿಶೇಷ. ಬೀದಿ ನಾಟಕಗಳ ಮೂಲಕ ಸಾವಿರಾರು ಹಳ್ಳಿಗಳಲ್ಲಿ ನಮ್ಮನ್ನು ಪರಿಚಯಿಸಿದರು. ಸಿಜಿಕೆ ಅವರು ಕಲಾಕ್ಷೇತ್ರದಲ್ಲಿ ಹವ್ಯಾಸಿ ತಂಡಗಳ ಮೂಲಕ 50 ವಾರಗಳ-50 ನಾಟಕಗಳ ರಂಗೋತ್ಸವ ನಡೆಸಿದ್ದರು. ಇದರ ಮೂಲಕ ಪ್ರಕಾಶ್ ರಾಜ್, ಸೇತುರಾಮ್ ಮೊದಲಾದವರು ಮುನ್ನಲೆಗೆ ಬಂದರು.

ಆ.10ರವರೆಗೆ ಪ್ರದರ್ಶನ: ಬಳಿಕ ಕುವೆಂಪು ಅವರ ರಚನೆಯ 'ಸ್ಮಶಾನ ಕುರುಕ್ಷೇತ್ರ' ನಾಟಕವನ್ನು ನೇಪಥ್ಯ ರಂಗತಂಡ ಪ್ರದರ್ಶಿಸಿತು. ಆಗಸ್ಟ್ 10ರವರೆಗೆ ಪ್ರತಿ ಭಾನುವಾರ ರಂಗಾಯಣದ ಭೂಮಿಗೀತದಲ್ಲಿ ಸಂಜೆ 6.30ಕ್ಕೆ ಒಂದೊಂದು ನಾಟಕಗಳ ಪ್ರದರ್ಶನ ರಂಗೋತ್ಸವದ ಪ್ರಯುಕ್ತ ನಡೆಯಲಿವೆ. ರಂಗಸಮಾಜದ ಸದಸ್ಯ ಹೆಚ್.ಎಸ್.ಸುರೇಶ್‌ಬಾಬು, ದಾವಣಗೆರೆಯ ವೃತ್ತಿ ರಂಗಭೂಮಿ ರಂಗಾಯಣದ ನಿರ್ದೇಶಕ ಮಲ್ಲಿಕಾರ್ಜುನ್ ಕಡಕೋಳ, ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು ಮತ್ತಿತರರು ಹಾಜರಿದ್ದರು.


ಸಿಜಿಕೆ ಹೆಸರಿನಲ್ಲೇ ಗ್ರೀಷ್ಮ ರಂಗೋತ್ಸವ ಮುಂದುವರಿಕೆ...

ಈ ಹಿಂದೆ ಹೆಚ್.ಜನಾರ್ಧನ್ ಅವರು ನಿರ್ದೇಶಕರಾಗಿದ್ದಾಗ ಗ್ರೀಷ್ಮ ರಂಗೋತ್ಸವನ್ನು ಸಿಜಿಕೆ ನಾಟಕೋತ್ಸವವಾಗಿ ಆಯೋಜಿಸಿದ್ದರು. ನಂತರದಲ್ಲಿ ಕೇವಲ ಗ್ರೀಷ್ಮ ರಂಗೋತ್ಸವವಾಗಿ ಮುಂದುವರೆಯಿತು. ಹೀಗೆ ಏಕಾಯಿತೋ ಗೊತ್ತಿಲ್ಲ. ಗ್ರೀಷ್ಮ ನಾಟಕೋತ್ಸವ ಇನ್ನು ಮುಂದೆ ನಿರಂತರವಾಗಿ ಸಿಜಿಕೆ ಅವರ ಹೆಸರಿನಲ್ಲೇ ನಡೆಯಲಿದೆ. ಸಿಜಿಕೆ ವ್ಯಕ್ತಿಯಲ್ಲ. ಎಲ್ಲರೊಳಗೆ ಇರುವ ರಂಗ ಪ್ರಜ್ಞೆಯ ಬೆಳಕು. ಅವರು ಕರ್ನಾಟಕದ ಮೂಲೆ ಮೂಲೆಯಲ್ಲಿ ಇದ್ದಂತಹ ರಂಗಕರ್ಮಿಗಳನ್ನು ಗುರುತಿಸಿ ಮುನ್ನಲೆಗೆ ತಂದವರು. ಸಿಜಿಕೆ ಕನ್ನಡ ರಂಗಭೂಮಿಗೆ ದೊರೆಕಿಸಿಕೊಟ್ಟ ಆಯಾಮ ದೊಡ್ಡದು.

-ಸತೀಶ್ ತಿಪಟೂರು, ನಿರ್ದೇಶಕರು, ರಂಗಾಯಣ, ಮೈಸೂರು.

ಕೈಲಾಸ ಗಣಾರಾಧನಾ ಆಹ್ವಾನ ಪತ್ರಿಕೆ

ಚಾಮರಾಜನಗರ ಜಿಲ್ಲೆ, ಗುಂಡ್ಲುಪೇಟೆ ತಾಲ್ಲೂಕು, ಕಬ್ಬಹಳ್ಳಿ ಗ್ರಾಮದಲ್ಲಿ
ವಾಸವಾಗಿರುವ ಕ.ಶಿ. ಸುಬ್ಬಣ್ಣ ರವರ ಧರ್ಮಪತ್ನಿ
ಶ್ರೀಮತಿ ದೇವಮ್ಮಣ್ಣಿ ಮಾಡುವ ಶರಣು ಶರಣಾರ್ಥಿಗಳು
ದಿನಾಂಕ: 20-06-2025ನೇ ಶುಕ್ರವಾರ ನನ್ನ ಪೂಜ್ಯ ಪತಿಯವರಾದ



ಶ್ರೀಯುತ ಕ.ಶಿ. ಸುಬ್ಬಣ್ಣರವರು

ಲಿಂಗೈಕ್ಯರಾದರೆಂದು ತಿಳಸಲು ವಿಷಾಧಿಸುತ್ತೇನೆ. ತತ್ಸಂಬಂಧವಾಗಿ ತಾ|| 01-07-2025ನೇ ಮಂಗಳವಾರ ಬೆಳಗ್ಗೆ 7-00 ಗಂಟೆಗೆ
ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶಿವರಾತ್ರಿದೇಶಿಕೇಂದ್ರ ಮಹಾಸ್ವಾಮಿಗಳವರು
ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಶ್ರೀಕ್ಷೇತ್ರ ಸುತ್ತೂರು
ಇವರ ದಿವ್ಯ ಪಾದಪೂಜೆಯನ್ನು ಹಾಗೂ ಮಧ್ಯಾಹ್ನ 12-00 ಗಂಟೆಗೆ ಶಿವೈಕ್ಯರ ಕೈಲಾಸ ಗಣಾರಾಧನೆಯನ್ನು ನಮ್ಮ ಸ್ವಗೃಹದಲ್ಲಿ ಏರ್ಪಡಿಸಿರುವುದರಿಂದ ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ಆಹ್ವಾನವೆಂದು ತಿಳಿದು ಆಗಮಿಸಿ ಲಿಂಗೈಕ್ಯರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ದುಃಖತಪ್ತರು :
ಶ್ರೀಮತಿ ದೇವಮ್ಮಣ್ಣಿ ಲೇ|| ಕ.ಶಿ. ಸುಬ್ಬಣ್ಣ ಮತ್ತು
ಧರ್ಮಪ್ರಕಾಶ ಸಾಹುಕಾರ ಶಿರಿಯಪ್ಪರವರ ಕುಟುಂಬವರ್ಗ ಹಾಗೂ ಕಬ್ಬಹಳ್ಳಿ ಗ್ರಾಮಸ್ಥರು.

94 ವರ್ಷದ ಬಳಿಕ ಮೊದಲ ಬಾರಿಗೆ ಜೂನ್‌ನಲ್ಲೇ ಕೆಆರ್‌ಎಸ್‌ಗೆ ಬಾಗಿನ

ಬಾಗಿನ ಅರ್ಪಣೆ ಕಾರ್ಯಕ್ರಮಕ್ಕೆ ಜಿಲ್ಲಾಡಳಿತದಿಂದ ಸಕಲ ಸಿದ್ಧತೆ, ಭಾನುಪ್ರಕಾಶ್ ಶರ್ಮಾ ನೇತೃತ್ವದಲ್ಲಿ ಕಾರ್ಯಕ್ರಮ



ಮೈದುಂಬಿ ಹರಿಯುತ್ತಿರುವ ರೈತರ ಜೀವನಾಡಿ ಕಾವೇರಿ.



ಸಿದ್ಧತೆ ಪರಿಶೀಲನೆ ನಡೆಸುತ್ತಿರುವ ಜಿಲ್ಲಾಧಿಕಾರಿ ಡಾ.ಕುಮಾರ.

ಎಂ.ಕೆ.ಮೋಹನ್‌ರಾಜ್

ಮಂಡ್ಯ, ಜೂ.29– ಜಿಲ್ಲೆಯ ಜೀವನಾಡಿಯಾಗಿರುವ ಕೆಆರ್‌ಎಸ್ ಜಲಾಶಯ 94 ವರ್ಷಗಳ ಬಳಿಕ ಇದೇ ಮೊದಲ ಬಾರಿಗೆ ಜೂನ್‌ನಲ್ಲಿಯೇ ಭರ್ತಿಯಾಗಿ, ದಾಖಲೆ ಬರೆದಿದ್ದು, ಜೂನ್‌ನ ಲ್ಲಿಯೇ ಮೊದಲ ಬಾರಿಗೆ ಬಾಗಿನ ಅರ್ಪಿಸುತ್ತಿರುವುದು ಇದೇ ಮೊದಲು.

ಮೈಸೂರು ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಪರಿಶ್ರಮದಿಂದ ಜಲಾಶಯವನ್ನು 1931ರಲ್ಲಿ ನಿರ್ಮಾಣ ಮಾಡಿದ ನಂತರ ಜೂನ್‌ನಲ್ಲಿ ಜಲಾಶಯ ಭರ್ತಿಯಾದ ದಾಖಲೆಗಳಿಲ್ಲ. 94 ವರ್ಷಗಳ ಬಳಿಕ ಇದೇ ಮೊದಲ ಬಾರಿ ಜೂನ್‌ನಲ್ಲಿ ಜಲಾಶಯ ಭರ್ತಿಯಾಗುತ್ತಿದೆ. ಜೂ.30 ರಂದು ಸಿಎಂ ಬಾಗಿನ ಅರ್ಪಿಸುವ ಹೊತ್ತಿಗೆ ಭಾನುವಾರ ರಾತ್ರಿಗೆ ಜಲಾಶಯ ಗರಿಷ್ಠ ಮಟ್ಟ ತಲುಪಲಿದೆ.

1979ರಿಂದ ಬಾಗಿನ ಸಂಪ್ರದಾಯ ಆರಂಭ

ರಾಜ್ಯದಲ್ಲಿ ಹರಿಯುವ ಕಾವೇರಿ ನದಿ ಜೀವ ನದಿಯಾಗಿದ್ದು, ಇದಕ್ಕೆ ಅಡ್ಡಲಾಗಿ ಶ್ರೀರಂಗಪಟ್ಟಣ ಬಳಿ ಅಣೆಕಟ್ಟು ನಿರ್ಮಿಸಲಾಗಿದೆ. ಇದರಿಂದ ರಾಜ್ಯದ ನೀರಾವರಿ ಕ್ಷೇತ್ರದಲ್ಲಿ ತನ್ನದೇ ಆದ ಪಾತ್ರ ವಹಿಸುತ್ತಿದೆ. ಕಾವೇರಿ ಮಾತೆಯನ್ನು ಪ್ರತಿ ವರ್ಷ ಸ್ಮರಿಸುವ ಹಿನ್ನೆಲೆಯಲ್ಲಿ 1979ರಲ್ಲಿ ಒಡಲು ತುಂಬಿದ ಕೆಆರ್ ಎಸ್‌ಗೆ ಬಾಗಿನ ಸಲ್ಲಿಸುವ ಸಂಪ್ರದಾಯ ಡಿ.ದೇವರಾಜ ಅರಸು ಅವರಿಂದ ಪ್ರಾರಂಭಗೊಂಡಿತು. ನಂತರ 1980ರಲ್ಲಿ ಆರ್.ಗುಂಡೂರಾವ್ ಅವರು ಬಾಗಿನ ಸಲ್ಲಿಸುವ ಪರಂಪರೆಯನ್ನು ಮುಂದುವರೆಸಿದರು. ಆ ಸಂಪ್ರದಾಯ ಈಗಲೂ ಮುಂದುವರೆದಿದೆ.

ಜೂನ್‌ನಲ್ಲಿ ಬಾಗಿನ ಅರ್ಪಿಸುತ್ತಿರುವ ಮೊದಲ ಸಿಎಂ ಸಿದ್ದರಾಮಯ್ಯ: 1979ರಲ್ಲಿ ಡಿ.ದೇವರಾಜ ಅರಸು ಅವರು ಕೆಆರ್‌ಎಸ್‌ಗೆ ಬಾಗಿನ ಅರ್ಪಿಸುವ ಸಂಪ್ರದಾಯ ಆರಂಭಿಸಿದರು. ಅದಾದ ಬಳಿಕ ಸಿದ್ದರಾಮಯ್ಯ ಸೇರಿದಂತೆ ಹಲವು ಮುಖ್ಯಮಂತ್ರಿಗಳು ಬಾಗಿನ ಅರ್ಪಿಸಿದ್ದಾರೆ. ಆದರೆ ಜೂನ್‌ನಲ್ಲಿ ಮೊದಲ ಬಾರಿಗೆ ಬಾಗಿನ ಅರ್ಪಿಸಿದ ಹೆಗ್ಗಳಿಕೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಭಾಜನರಾಗಲಿದ್ದಾರೆ. ಅಲ್ಲದೆ, ಮುಖ್ಯಮಂತ್ರಿ ಸಿದ್ದರಾಮಯ್ಯ ನಾಲ್ಕನೇ ಬಾರಿಗೆ ಬಾಗಿನ ಸಲ್ಲಿಸಿದ ಖ್ಯಾತಿಗೂ ಒಳಗಾಗಲಿದ್ದಾರೆ.

ಸಿಎಂ ದಿನಾಂಕಕ್ಕಾಗಿ ಭರ್ತಿ ದಿನಾಂಕ ಮುಂದೂಡಿಕೆ: ಜೂನ್ 23ರಿಂದಲೇ ಜಲಾಶಯಕ್ಕೆ ಒಳಹರಿವು ಹರಿದು ಬರುತ್ತಿತ್ತು. ಆಗಲೇ ಜಲಾಶಯ ಭರ್ತಿ ಮಾಡಿದ್ದರೆ 27ರಂದೇ ಜಲಾಶಯ ಭರ್ತಿಯಾಗುತ್ತಿತ್ತು. ಆದರೆ ಮುಖ್ಯಮಂತ್ರಿ ಸಿದ್ದರಾಮಯ್ಯ ಬಾಗಿನ ಅರ್ಪಿಸುವ ದಿನಾಂಕಕ್ಕೆ ಸರಿ ಹೊಂದಿಸುವ ಸಲುವಾಗಿ ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳು ಒಳಹರಿವಿನಷ್ಟೇ ಜಲಾಶಯದಿಂದ ನದಿಗೆ ಹೊರಹರಿವು ಹರಿಸಿದ ಪರಿಣಾಮ 120 ಅಡಿಯಲ್ಲಿಯೇ ಜಲಾಶಯದ ನೀರಿನ ಮಟ್ಟ ಕಾಯ್ದುಕೊಳ್ಳಬೇಕಾಯಿತು.

ಬಹುಬೇಗ ತುಂಬಿದ ಜಲಾಶಯ: ಪ್ರಸ್ತುತ ಜಲಾಶಯವು ಬಹುಬೇಗ ತುಂಬಿದೆ. ಕಳೆದ ಮೇ 24ರಂದು 89.10 ಅಡಿಗೆ ಇಳಿದಿತ್ತು. ಅದಾದ ಬಳಿಕ ಪೂರ್ವ ಮುಂಗಾರು ಚೇತರಿಸಿಕೊಂಡಿದ್ದರಿಂದ ನಿಧಾನವಾಗಿ ಜಲಾಶಯಕ್ಕೆ ಒಳಹರಿವು ಹೆಚ್ಚಾಯಿತು. ಮೇ 28ಕ್ಕೆ ಒಳಹರಿವು 26 ಸಾವಿರ ಕ್ಯುಸೆಕ್‌ಗೆ ಏರಿಕೆ ಕಂಡಿತ್ತು. ಆಗ ಜಲಾಶಯಕ್ಕೆ ಕೇವಲ ನಾಲ್ಕೇ ದಿನಕ್ಕೆ 6 ಅಡಿ ನೀರು ಸಂಗ್ರಹವಾಗುವ ಮೂಲಕ 95.35 ಅಡಿಗೇರಿತ್ತು. ಮೇ.30ಕ್ಕೆ 100.10 ಅಡಿ ತಲುಪುವ ಮೂಲಕ ಮೇನಲ್ಲಿಯೇ 40 ವರ್ಷಗಳ ಬಳಿಕ ನೂರಡಿ ತಲುಪಿದ ದಾಖಲೆಯನ್ನೂ ಬರೆಯಿತು. ನಂತರ ಜೂನ್ ಮೊದಲ ವಾರದಿಂದಲೇ ಮುಂಗಾರು ಮಳೆ ಚುರುಕುಗೊಂಡ ಹಿನ್ನೆಲೆಯಲ್ಲಿ ಜಲಾಶಯದ ಒಳಹರಿವು ಹೆಚ್ಚಾಯಿತು. ಜೂನ್ 3ಕ್ಕೆ 106 ಅಡಿ ತಲುಪಿತು. ನಂತರ ಕಾವೇರಿ ಕೊಳ್ಳದ ವ್ಯಾಪ್ತಿಯಲ್ಲಿ ಹೆಚ್ಚು ಮಳೆಯಾದ ಪರಿಣಾಮ ಜಲಾಶಯ ಭರ್ತಿಯ ಸನಿಹಕ್ಕೆ ಬಂದು ನಿಂತಿದೆ.

ಕೃಷ್ಣರಾಜಸಾಗರ ಜಲಾಶಯದ ಇತಿಹಾಸ: 1931ರಲ್ಲಿ ನಿರ್ಮಾಣವಾದ ಜಲಾಶಯವು 125 ಚದರ ಕಿ.ಮೀ. ವಿಸ್ತಾರವುಳ್ಳ(ನೀರು ನಿಲ್ಲುವ ಪ್ರದೇಶ) ಹಾಗೂ ಗರಿಷ್ಠ 124.80 ಅಡಿಯ ಜಲಾಶಯವು 49.452 ಟಿಎಂಸಿ ಅಡಿ ನೀರು ಸಂಗ್ರಹ ಸಾಮರ್ಥ್ಯ ಹೊಂದಿದೆ. 49.452 ಟಿಎಂಸಿ ಪೈಕಿ 41.073 ಟಿಎಂಸಿ ಕೃಷಿ ಬಳಕೆಗೆ ಲಭ್ಯವಿದೆ. ಉಳಿದ 8.379 ಟಿಎಂಸಿ ನೀರಿನಲ್ಲಿ 4.400 ಟಿಎಂಸಿ ನೀರು ಯಾವುದಕ್ಕೂ ಬಳಕೆಗೆ ಬಾರದ ಪೂರ್ಣ ಪ್ರಮಾಣದ ಡೆಡ್ ಸ್ಟೋರೇಜ್. ಬಾಕಿ 4.379 ಟಿಎಂಸಿ ನೀರು ಕುಡಿಯುವ ನೀರಿಗೆ ಮೀಸಲಾಗಿದೆ.

ಕಂಗೊಳಿಸುತ್ತಿರುವ ಅಣೆಕಟ್ಟೆ: ಸೋಮವಾರ ಡ್ಯಾಂಗೆ ಬಾಗಿನ ಅರ್ಪಿಸುವ ಹಿನ್ನೆಲೆಯಲ್ಲಿ ಕೃಷ್ಣ ರಾಜಸಾಗರ ಅಣೆಕಟ್ಟೆ ಕಂಗೊಳಿಸುತ್ತಿದೆ. ತಳಿರು ತೋರಣದಿಂದ ಡ್ಯಾಂನ ಆರಂಭದಿಂದ ಹಿಡಿದು ಬಾಗಿನ ಅರ್ಪಣೆ ಜಾಗದವರೆಗೂ ಅಲಂಕಾರ ಮಾಡಲಾಗಿದೆ. ಧಾರ್ಮಿಕ ಮುಖಂಡ ಡಾ.ಭಾನುಪ್ರಕಾಶ್ ಶರ್ಮಾ ನೇತೃತ್ವದಲ್ಲಿ ಪೂಜಾ ಕೈಂಕರ್ಯಕ್ಕೆ ಸಿದ್ಧತೆ ನಡೆಸಿದ್ದು, ಬಾಗಿನ ಹಾಗೂ ಇನ್ನಿತರೆ ಪೂಜಾ ಕೈಂಕರ್ಯಗಳು ಸಿದ್ಧತೆಗೊಂಡಿದೆ.

ಬಸ್‌ನಲ್ಲಿ ಬರಲಿರುವ ಸಿಎಂ

ಹೆಲಿಕ್ಯಾಪ್ಟರ್ ಮೂಲಕ ಬೆಂಗಳೂರಿನಿಂದ ಮೈಸೂರಿಗೆ ಆಗಮಿಸಲಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಂತರ, ಮೈಸೂರು ನಗರದಿಂದ ಕೆಆರ್‌ಎಸ್‌ಗೆ ಬಸ್ ಮೂಲಕ ಆಗಮಿಸಲಿದ್ದಾರೆ. ಡಿಸಿಎಂ ಡಿ.ಕೆ.ಶಿವಕುಮಾರ್, ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಸೇರಿದಂತೆ ಜನಪ್ರತಿನಿಧಿಗಳು ವಿಶೇಷ ಬಸ್‌ನಲ್ಲಿ ಡ್ಯಾಂಗೆ ಆಗಮಿಸಲಿದ್ದಾರೆ.

ಚಲುವರಾಯಸ್ವಾಮಿಯವರೇ ನೀವೇನು ಮಾಡ್ತಾ ಇದ್ದೀರಿ?

ಕೈಗಾರಿಕೆ ತರುವ ವಿಚಾರದಲ್ಲಿ ರಾಜ್ಯ ಸರ್ಕಾರದ ಜವಾಬ್ದಾರಿಯೂ ಇದೆ: ನಿಖಿಲ್ ಕುಮಾರಸ್ವಾಮಿ



ಭಾರತೀನಗರದಲ್ಲಿ ಜನರೊಂದಿಗೆ ಜನತಾದಳ–ಜೆಡಿಎಸ್ ಪಕ್ಷದ ಸದಸ್ಯತ್ವ ನೋಂದಣಿ ಅಭಿಯಾನಕ್ಕೆ ನಿಖಿಲ್‌ಕುಮಾರಸ್ವಾಮಿ ಚಾಲನೆ ನೀಡಿದರು.

ಭಾರತೀನಗರ, ಜೂ.29– ಕೇಂದ್ರ ಕೈಗಾರಿಕಾ ಸಚಿವರಾಗಿರುವ ಹೆಚ್.ಡಿ.ಕುಮಾರಸ್ವಾಮಿ ಅವರು ಕೈಗಾರಿಕೆಗಳನ್ನು ತಂದಿಲ್ಲ ಎಂಬ ಆರೋಪಗಳು ಕೇಳಿ ಬರ್ತಿದೆ ಕೈಗಾರಿಕೆ ತರುವ ವಿಚಾರದಲ್ಲಿ ರಾಜ್ಯ ಸರ್ಕಾರದ ಜವಬ್ದಾರಿಯೂ ಇದೆ. ಅಭಿವೃದ್ಧಿ ವಿಚಾರದಲ್ಲಿ ರಾಜಕೀಯ ಬಿಟ್ಟು ಹೆಚ್ಡಿಕೆಗೆ ರಾಜ್ಯ ಸರ್ಕಾರ ಸಹಕಾರ ಕೊಡಬೇಕು ಎಂದು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಆಗ್ರಹಿಸಿದರು.

ಭಾರತೀನಗರದ ಸರ್ಕಾರಿ ಪದವಿಪೂರ್ವ ಕಾಲೇಜಿನ ಆವರಣದಲ್ಲಿ ಮದ್ದೂರು ವಿಧಾನಸಭಾ ಕ್ಷೇತ್ರದಿಂದ ಹಮ್ಮಿಕೊಂಡಿದ್ದ ಜನರೊಂದಿಗೆ ಜನತಾದಳ–ಜೆಡಿಎಸ್ ಪಕ್ಷದ ಸದಸ್ಯತ್ವ ನೋಂದಣಿ ಅಭಿಯಾನಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ರಾಜ್ಯದ ಕೃಷಿ ಸಚಿವರೇ ನೀವು ಏನು ಮಾಡ್ತಿದ್ದೀರಿ? ಕುಮಾರಣ್ಣ ಅವರು ದೆಹಲಿಯಲ್ಲಿ ರೈತರಿಗೆ ಏನು ಮಾಡ್ಬೇಕೊ ಮಾಡ್ತಿದ್ದಾರೆ. ನೀವು ಏನು ಮಾಡಿದಿರಾ ಹೇಳಿ ಎಂದು ಸಚಿವ ಎನ್.ಚಲುವರಾಯ ಸ್ವಾಮಿ ಅವರನ್ನು ತರಾಟೆಗೆ ತೆಗೆದುಕೊಂಡರು.

ಚಲುವರಾಯಸ್ವಾಮಿ ಅವರೇ ನಿಮ್ಮ ಕೊಡುಗೆ ಏನು? ಕುಮಾರಣ್ಣನ ಬಗ್ಗೆ ಟೀಕೆ ಮಾಡಿದ್ರೆ ಯಾರ ಹೊಟ್ಟೇನು ತುಂಬುವುದಿಲ್ಲ. ನೀವು ರಾಜಕಾರಣದಲ್ಲಿ ಈ ಮಟ್ಟಕ್ಕೆ ಬೆಳೆದು ನಿಂತಿದೀರಾ ಎಂದರೆ ಯಾರ ಬೆಂಬಲದಿಂದ ಎಂದು ಯೋಚಿಸಿ. ನಿಮ್ಮ ಬಗ್ಗೆ ನನಗೆ ವೈಯಕ್ತಿಕವಾಗಿ ಗೌರವವಿದೆ. ಆದರೆ ರಾಜಕೀಯವಾಗಿ ನಿಮ್ಮನ್ನು ನಾನು ಪ್ರಶ್ನಿಸುತ್ತಿದ್ದೇನೆ ಎಂದರು.

ಕುಮಾರಣ್ಣ ಮತ್ತೆ ಮುಖ್ಯಮಂತ್ರಿ ಆಗ್ಬೇಕು: ಕುಮಾರಣ್ಣ ಮತ್ತೆ ಮುಖ್ಯಮಂತ್ರಿ ಆಗ್ಬೇಕು. ಮೂರನೇ ಬಾರಿಗೆ 5 ವರ್ಷ ಪೂರ್ಣಾವಧಿ ಅಧಿಕಾರ ಮಾಡಬೇಕು. ಈ ಹಿಂದೆ ಕೊಟ್ಟ 20 ತಿಂಗಳ ಆಡಳಿತ ಎಲ್ಲರ ಮನ ಮುಟ್ಟಿದೆ. ರಾಜ್ಯದ ಎಲ್ಲಾ ವರ್ಗದ ಜನರು ಹೆಚ್ಡಿಕೆ ಮತ್ತೆ ಸಿಎಂ ಆಗಬೇಕು ಅನ್ನೋ ಆಶಯ ವ್ಯಕ್ತಪಡಿಸಿದ್ದಾರೆ ಎಂದು ತಿಳಿಸಿದರು.

ಮೂರು ಚುನಾವಣೆ ಸೋಲು ನನ್ನ ಧೃತಿಗೆಡಿಸಿಲ್ಲ: ಚುನಾವಣೆ ಸೋಲು ನನ್ನ ಜೀವನಕ್ಕೆ ಪಾಠ ಕಲಿಸಿದೆ.ಮೂರು ಚುನಾವಣೆ ಸೋಲು ನನ್ನ ಧೃತಿಗೆಡಿಸಿಲ್ಲ. ನಾನು ಮತ್ತಷ್ಟು ಗಟ್ಟಿಯಾಗಲು ಅವಕಾಶ ಸಿಕ್ಕಿದೆ.

ಚುನಾವಣೆಯಲ್ಲಿ ನಾನು ಗೆಲ್ಲದೆ ಇದ್ದರೂ ಜನರ ಋಣ ನಮ್ಮ ಮೇಲಿದೆ. ಕುಮಾರಣ್ಣ ದೆಹಲಿಯಲ್ಲಿದ್ರು ತನ್ನ ಮಂಡ್ಯ ಜನರಿಗಾಗಿ ಅವರ ಹೃದಯ ಸದಾ ಮಿಡಿಯುತ್ತಿದೆ ಎಂದು ತಿಳಿಸಿದರು.

ಕುಮಾರಣ್ಣ ಕೇಂದ್ರ ಸಚಿವರಾಗಿ ಏನು ಮಾಡಿದ್ರು ಎಂದು ಕಾಂಗ್ರೆಸ್ ನಾಯಕರು ಕೇಳ್ತಾರೆ. ತಂಬಾಕು ಬೆಳೆಗೆ ಬೆಂಬಲ ಕೊಟ್ಟು ಗೌರವಿಸಿದ್ದು ಕುಮಾರಣ್ಣ. ರಾಜ್ಯದ ಮಾವು ಬೆಳೆಗಾರರ ಸಮಸ್ಯೆ ಬಗೆಹರಿಸಿದ್ದು ಕುಮಾರಣ್ಣ. ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್‌ರಿಗೆ ಪತ್ರ ಬರೆದಿದ್ದು. ಪತ್ರಕ್ಕೆ ಸ್ಪಂದಿಸಿ 2.5 ಲಕ್ಷ ಮೆಟ್ರಿಕ್ ಟನ್ ಮಾವು ಬೆಳೆಗೆ ಬೆಂಬಲ ಬೆಲೆ ಕೊಟ್ಟು ಖರೀದಿಸಿದ್ರು ಎಂದು ಕಾಂಗ್ರೆಸ್ ನಾಯಕರ ವಿರುದ್ಧ ವಾಗ್ದಾಳಿ ನಡೆಸಿದರು.

ಇದಕ್ಕೂ ಮೊದಲು ನಿಡಘಟ್ಟದಿಂದ ಬೈಕ್ ಜಾಥಾ ಆರಂಭಿಸಿ ಶಿವಪುರ, ಟಿ.ಬಿ ಸರ್ಕಲ್, ಸಿ.ಎ ಕೆರೆ ಗೇಟ್, ದೊಡ್ಡರಸಿನಕೆರೆ ಗೇಟ್‌ನಲ್ಲಿ ಕಾರ್ಯಕರ್ತರು ಬೈಕ್ ರ್‍ಯಾಲಿಯಲ್ಲಿ ಪಾಲ್ಗೊಂಡು ತಮ್ಮ ಪಕ್ಷದ ಯುವನಾಯಕನಿಗೆ ಬೆಂಬಲ ಸೂಚಿಸಿದರು.

ನಗರದ ಪ್ರಮುಖ ವೃತ್ತದಲ್ಲಿ ನಿಖಿಲ್ ಕುಮಾರಸ್ವಾಮಿ ಅವರಿಗೆ ಜೆಸಿಬಿ ಮೂಲಕ ಹೋಮಳೆ ಗರೆಯಲಾಯಿತು ಹಾಗೆಯೇ ಟಿ.ಬಿ.ಸರ್ಕಲ್ ಬಳಿ ಬೃಹತ್ ಅನಾನಸ್ ಹಾರ ಹಾಗೂ ದೊಡ್ಡರಸಿನಕೆರೆ ಯಲ್ಲಿ ಬೃಹತ್ ಹೂವಿನ ಹಾರ ಹಾಕುವುದರ ಮೂಲಕ ಸ್ವಾಗತ ಕೋರಿದರು.

ಈ ಸಂದರ್ಭದಲ್ಲಿ ವಿಧಾನಪರಿಷತ್ ಸದಸ್ಯ ವಿವೇಕಾನಂದ, ಮಾಜಿ ಶಾಸಕರಾದ ಸುರೇಶ್‌ಗೌಡ, ಡಾ.ಕೆ.ಅನ್ನದಾನಿ, ಜಿಲ್ಲಾಧ್ಯಕ್ಷ ಡಿ.ರಮೇಶ್, ರಾಜ್ಯ ಪ್ರಧಾನ ಕಾರ್ಯದರ್ಶಿ ಬಳಿಯಪ್ಪ, ಜೆಡಿಎಸ್ ತಾಲೂಕು ಅಧ್ಯಕ್ಷ ಚಿಕ್ಕತಿಮ್ಮೇಗೌಡ, ಮಹಿಳಾ ಘಟಕದ ಅಧ್ಯಕ್ಷ ದಿವ್ಯಾ ರಾಮಶೆಟ್ಟಿ ಮುಖಂಡರಾದ ಸಂತೋಷ್ ತಮ್ಮಣ್ಣ ಚಾಮನಹಳ್ಳಿ ಸ್ವಾಮಿ, ಪ್ರಿಯಾಂಕಾ, ಕರಡಕೆರೆ ಹನುಮಂತೇಗೌಡ, ಎ.ಬಿ.ಹಳ್ಳಿ ಚಂದ್ರಶೇಖರ್, ಕೆಟಿರಾಜಣ್ಣ, ಮಾದನಾಯಕನಹಳ್ಳಿ ರಾಜಣ್ಣ ಎಚ್.ಎಂ.ಮರಿ ಮಾದೇಗೌಡ, ವೆಂಕಟಾಚಲಯ್ಯ, ಎಸ್‌ಸಿ ಎಸ್‌ಟಿ ಘಟಕದ ಅಧ್ಯಕ್ಷ ಕಾಳಯ್ಯ ಸೇರಿದಂತೆ ಹಲವರಿದ್ದರು.

ನಾಳೆ ಮಾಜಿ ಸ್ಪೀಕರ್ ಕೃಷ್ಣರ ಜನ್ಮದಿನ ಆಚರಣೆ



ಮಾಜಿ ಸ್ಪೀಕರ್ ಕೃಷ್ಣ ಅವರ ಜನ್ಮ ದಿನದ ಸಮಾರಂಭದ ಆಹ್ವಾನ ಪತ್ರಿಕೆ ಬಿಡುಗಡೆ ಮಾಡಿದ ಸಂದರ್ಭ.

ಕೆ.ಆರ್.ಪೇಟೆ, ಜೂ.29– ತಾಲೂಕಿನ ಮಾಜಿ ಸ್ಪೀಕರ್ ಕೃಷ್ಣ ಪ್ರತಿಷ್ಠಾನ ಟ್ರಸ್ಟ್ ವತಿಯಿಂದ ಇದೇ ಜುಲೈ 1ರಂದು ಮಂಗಳವಾರ ಬೆಳಿಗ್ಗೆ 10.30ಕ್ಕೆ ಮಾಜಿ ಸ್ಪೀಕರ್ ಕೃಷ್ಣ ಅವರ 85ನೇ ಹುಟ್ಟು ಹಬ್ಬದ ಅಂಗವಾಗಿ ಸಾಧಕರಿಗೆ ಕೃಷ್ಣ ನಾಗರೀಕ ಪುರಸ್ಕಾರ ಹಾಗೂ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಕೃಷ್ಣ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ತಾಲೂಕು ಕೃಷ್ಣ ಪ್ರತಿಷ್ಠಾನ ಟ್ರಸ್ಟ್ ಅಧ್ಯಕ್ಷ ಗೂಡೇಹೊಸಹಳ್ಳಿ ಜವರಾಯಿಗೌಡ ತಿಳಿಸಿದರು.

ಪಟ್ಟಣದ ಒಕ್ಕಲಿಗರ ಹಾಸ್ಟೆಲ್ (ಆದಿಚುಂಚನಗಿರಿ ಶಿಕ್ಷಣ ಸಂಸ್ಥೆ) ಕಟ್ಟಡದಲ್ಲಿರುವ ಕೃಷ್ಣ ಪ್ರತಿಷ್ಠಾನ ಟ್ರಸ್ಟ್ ಕಚೇರಿಯಲ್ಲಿ ಕಾರ್ಯಕ್ರಮದ ಆಹ್ವಾನ ಪತ್ರಿಕೆಗಳನ್ನು ಬಿಡುಗಡೆ ಮಾಡಿ ಅವರು ಮಾತನಾಡಿದರು.

ಈ ಕಾರ್ಯಕ್ರಮವನ್ನು ಕೃಷ್ಣ ಅವರ ಒಡನಾಡಿ ಆಳಂದ ಕ್ಷೇತ್ರದ ಶಾಸಕರು ಹಾಗೂ ರಾಜ್ಯ ಯೋಜನಾ ಆಯೋಗದ ಉಪಾಧ್ಯಕ್ಷರಾದ ಬಿ.ಆರ್.ಪಾಟೀಲ್ ಉದ್ಘಾಟಿಸುವರು. ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಸಾಧಕರಿಗೆ ಕೃಷ್ಣ ಪುರಸ್ಕಾರ ನೀಡುವರು. ಶಾಸಕ ಹೆಚ್.ಟಿ.ಮಂಜು ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡುವರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕೃಷ್ಣ ಪ್ರತಿಷ್ಠಾನ ಅಧ್ಯಕ್ಷ ಜವರಾಯಿಗೌಡ ವಹಿಸುವರು. ಮುಖ್ಯ ಅತಿಥಿಗಳಾಗಿ ಪ್ರೊ.ಇಂದಿರಮ್ಮ ಕೃಷ್ಣ, ಮಾಜಿ ಸಚಿವ ನಾರಾಯಣಗೌಡ, ಮಾಜಿ ಶಾಸಕ ಕೆ.ಬಿ.ಚಂದ್ರಶೇಖರ್, ಬಿ.ಪ್ರಕಾಶ್, ಟಿಎಪಿಸಿಎಂಎಸ್ ಅಧ್ಯಕ್ಷ ಬಿ.ಎಲ್.ದೇವರಾಜು, ಪುರಸಭಾ ಅಧ್ಯಕ್ಷೆ ಪಂಕಜಾಪ್ರಕಾಶ್ ಸೇರಿದಂತೆ ಹಲವು ಗಣ್ಯರು ಭಾಗವಹಿಸುವರು. ಕೃಷ್ಣ ನಾಗರೀಕ ಪುರಸ್ಕಾರವನ್ನು ಸಾಹಿತಿ ಪ್ರೊ.ಕಾಳೇಗೌಡ ನಾಗವಾರ, ರೈತ ಮುಖಂಡ ಎಂ.ವಿ.ರಾಜೇಗೌಡ, ಪ್ರಗತಿಪರ ರೈತ ಸುಬ್ಬೇಗೌಡ ಅವರಿಗೆ ನೀಡಲಾಗುವುದು. ವಿಶೇಷ ಪ್ರತಿಭಾ ಪುರಸ್ಕಾರವನ್ನು ಎಸ್‌ಎಸ್‌ಎಲ್‌ಸಿಯಲ್ಲಿ 625ಕ್ಕೆ 625 ಅಂಕಗಳನ್ನು ಪಡೆದು ಸಾಧನೆ ಮಾಡಿರುವುದು ಧೃತಿ ಅವರಿಗೆ ನೀಡಲಾಗುವುದು.

ಕೆಂಪೇಗೌಡರ ಜಯಂತಿ



ನಾಡಪ್ರಭು ಕೆಂಪೇಗೌಡರ ಜಯಂತಿ ಅಂಗವಾಗಿ ಮೈಸೂರಿನ ವಾರ್ಡ್ ನಂಬರ್ 4ರ ಹೆಬ್ಬಾಳು ಮುಖ್ಯರಸ್ತೆ, ಬಸವನಗುಡಿ ವೃತ್ತದಲ್ಲಿ ಅವರ ಬೃಹತ್ ಕಟೌಟ್‌ಗೆ ನಗರ ಪಾಲಿಕೆ ಮಾಜಿ ಸದಸ್ಯ ಪೈಲ್ವಾನ್ ಶ್ರೀನಿವಾಸ್ ನೇತೃತ್ವದಲ್ಲಿ ಪುಷ್ಪಾರ್ಚನೆ ಸಲ್ಲಿಸಲಾಯಿತು. ಈ ವೇಳೆ ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಹಾಗೂ ಸ್ಥಳೀಯ ಮುಖಂಡರು ಉಪಸ್ಥಿತರಿದ್ದರು.

ಡಿಸೆಂಬರ್ ಬಳಿಕ ರಾಜ್ಯದಲ್ಲಿ ಮಧ್ಯಂತರ ಚುನಾವಣೆ; 150 ಸ್ಥಾನದೊಂದಿಗೆ ಬಿಜೆಪಿ ಸರ್ಕಾರ ರಚನೆ

ಸಂಸದ ಗೋವಿಂದ ಕಾರಜೋಳ ಭವಿಷ್ಯ

ಚಿತ್ರದುರ್ಗ, ಜೂ.29– ರಾಜ್ಯ ರಾಜಕಾರಣದಲ್ಲಿ 'ಸೆಪ್ಟೆಂಬರ್ ಕ್ರಾಂತಿ' ಭವಿಷ್ಯ ಸ್ಫೋಟಗೊಂಡಿದೆ. ಸದ್ಯ ರಾಜ್ಯ ರಾಜಕಾರಣದಲ್ಲಿ, ಕಾಂಗ್ರೆಸ್ ಪಕ್ಷದಲ್ಲಿ ನಡೆಯುತ್ತಿರುವ ಮಹತ್ವದ ಚರ್ಚೆ ಈ ಸೆಪ್ಟೆಂಬರ್ ಕ್ರಾಂತಿ. ಸೆಪ್ಟೆಂಬರ್ ಸ್ಫೋಟಕ್ಕೆ ಇನ್ನೆರಡು ತಿಂಗಳಷ್ಟೇ ಬಾಕಿ. ಹಿರಿಯ ಸಚಿವ ಕೆಎನ್ ರಾಜಣ್ಣ ನೀಡಿರುವ ಈ ಹೇಳಿಕೆ ಸದ್ಯ ರಾಜಕಾರಣದಲ್ಲಿ ನಾನಾ ಆಯಾಮದಲ್ಲಿ ವಿಶ್ಲೇಷಣೆಗೆ ಕಾರಣವಾಗ್ತಿದೆ. ಈ ನಡುವೆ ಕಾಂಗ್ರೆಸ್‌ನಲ್ಲೇ ವಾಗ್ಯುದ್ಧ ನಡೆಯುತ್ತಿದೆ.

ಈ ನಡುವೆ ಚಿತ್ರದುರ್ಗದ ಚಳ್ಳಕೆರೆಯ ಕಾರ್ಯಕ್ರಮವೊಂದರಲ್ಲಿ ಮಾತನಾಡಿರುವ ಸಂಸದ ಗೋವಿಂದ ಕಾರಜೋಳ, ಡಿಸೆಂಬರ್ ಬಳಿಕ ಯಾವ್ರದೇ ಸಂದರ್ಭದಲ್ಲೂ ಮಧ್ಯಂತರ ಚುನಾವಣೆ ಬರಬಹುದು ಎಂದು ಭವಿಷ್ಯ ನುಡಿದಿದ್ದಾರೆ. 2028ಕ್ಕೆ ವಿಧಾನಸಭೆ ಚುನಾವಣೆ ಬರುತ್ತದೆಂದು ನಾನು ಹೇಳಲ್ಲ. ಡಿಸೆಂಬರ್ ಬಳಿಕ ಯಾವ್ರದೇ ಸಂದರ್ಭದಲ್ಲಿ ಚುನಾವಣೆ ಬರಬಹುದು. 150 ಶಾಸಕರೊಂದಿಗೆ ಬಿಜೆಪಿ ಸರ್ಕಾರ ರಚಿಸುವ ಭರವಸೆಯಿದೆ. ಕಾಂಗ್ರೆಸ್ ಸರ್ಕಾರ ಒಂದೇ ಒಂದು ಅಭಿವೃದ್ಧಿ ಕೆಲಸ ಮಾಡುತ್ತಿಲ್ಲ. ಸಿಎಂ, ಡಿಸಿಎಂ, ಉಸ್ತುವಾರಿ ಸಚಿವ ರಿಗೆ ಜನ ಶಾಪ ಹಾಕ್ತಿದ್ದಾರೆಂದು ಕಿಡಿ ಕಾರಿದ್ದಾರೆ.



ಇನ್ನೂ ಸೆಪ್ಟೆಂಬರ್ ಕ್ರಾಂತಿಗೆ ಸಚಿವರು, ಶಾಸಕರು ತಮ್ಮದೇ ಆದ ಧಾಟಿಯಲ್ಲಿ ಸಮರ್ಥನೆ ಕೊಡ್ತಿದ್ದಾರೆ. ಅಷ್ಟಕ್ಕೂ ಸೆಪ್ಟೆಂಬರ್ ಕ್ರಾಂತಿಯನ್ನು ಏನೆಲ್ಲಾ ಬದಲಾವಣೆಗಳು ಆಗಲಿದೆ ಅನ್ನೋದು ಸದ್ಯದ ಕುತೂಹಲ.

ಇನ್ನು ಬಿಜೆಪಿ ನಾಯಕರು ಸೆಪ್ಟೆಂಬರ್ ಕ್ರಾಂತಿಗೆ ಟ್ವಿಸ್ಟ್ ಮೇಲೆ ಟ್ವಿಸ್ಟ್ ಕೊಡ್ತಿದ್ದಾರೆ. ವಿಪಕ್ಷ ನಾಯಕ ಅಶೋಕ್, ರಾಜಣ್ಣಕ್ಕಿಂತ ಮೊದ್ಲೇ ಹೇಳಿದ್ದೇ. ಕಾಂಗ್ರೆಸ್‌ನೊಳಗೆ ಕ್ಷಿಪ್ರ ಕ್ರಾಂತಿ ಆಗೋದು ಶತಸಿದ್ಧ ಎಂದಿದ್ದಾರೆ.

ಈ ನಡುವೆ ಮಾಜಿ ಸಂಸದ ನಳಿನ್ ಕುಮಾರ್ ಕಟೀಲ್, ಕೆಲವೇ ದಿನಗಳಲ್ಲಿ ಈ ಸರ್ಕಾರ ಪತನ ಆಗತ್ತೆ. 2026ರಲ್ಲೇ ಎಲೆಕ್ಷನ್ ನಡೆಯುತ್ತೆ ಅಂತ ಭವಿಷ್ಯ ನುಡಿದಿದ್ದಾರೆ. ಇನ್ನು ಅಶೋಕ್ ಹೇಳಿಕೆಗೆ ಕಾಂಗ್ರೆಸ್ ನಾಯಕರು ತಿರುಗೇಟು ಕೊಟ್ಟಿದ್ದಾರೆ. ಅಶೋಕ್ ಭವಿಷ್ಯ, ಜ್ಯೋತಿಷಿ ಕಲಿತಿದ್ರೆ ನನಗೆ ಟೈಂ ಕೊಡ್ಲಿ, ನನಗೂ ಕೇಳೋದು ಇದೆ, ಅವರನ್ನ ಭೇಟಿ ಮಾಡ್ತೀನಿ ಅಂತ ಡಿಕೆಶಿ ವ್ಯಂಗ್ಯವಾಡಿದ್ದಾರೆ. ಇನ್ನುಳಿದ ಸಚಿವ ತಮ್ಮದೇ ರೀತಿಯಲ್ಲಿ ಪ್ರತಿಕ್ರಿಯೆ ಕೊಟ್ಟಿದ್ದಾರೆ.

'ಹಾಡಿರೇ ರಾಗಗಳ–ತೂಗಿರೇ ದೀಪಗಳ': ಕಾರ್ಯಕ್ರಮಕ್ಕೆ ಅರ್ಜಿ ಆಹ್ವಾನ

ಮೈಸೂರು, ಜೂ.29– 2025–26ನೇ ಸಾಲಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮೈಸೂರು ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ಉಪಯೋಜನೆಯಡಿ ಹಾಡಿರೇ ರಾಗಗಳ ತೂಗಿರೇ ದೀಪಗಳ ಕಾರ್ಯಕ್ರಮವನ್ನು ಏರ್ಪಡಿಸಲಿದ್ದು, ಈ ಕಾರ್ಯಕ್ರಮದಲ್ಲಿ ಪ್ರದರ್ಶನ ನೀಡಬಯಸುವ ಜನಪದ ಗೀತೆ, ಭಾವಗೀತೆ, ಸುಗಮ ಸಂಗೀತ, ರಂಗಗೀತೆಗಳು, ಲಾವಣಿ ಪದಗಳು, ಡೊಳ್ಳಿನ ಪದಗಳು ಇತ್ಯಾದಿ ಕಲಾ ಪ್ರಕಾರದ ಕಲಾವಿದರುಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಅರ್ಜಿಗಳನ್ನು ಜುಲೈ 17ರ ಸಂಜೆ 5.30ರೊಳಗೆ ಸಹಾಯಕ ನಿರ್ದೇಶಕರ ಕಚೇರಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಕಲಾಮಂದಿರ ಮೈಸೂರು ಇಲ್ಲಿ ಅರ್ಜಿಗಳನ್ನು ಸಲ್ಲಿಸಲು ತಿಳಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಕಚೇರಿ ದೂ.ಸಂ: 0821–2513225 ಅನ್ನು ಸಂಪರ್ಕಿಸಬಹುದು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಡಾ. ಎಂ. ಡಿ ಸುದರ್ಶನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೂರನೇ ಪುಟದಿಂದ

ಗಜಪಡೆ ಆಯ್ಕೆ ಪ್ರಕ್ರಿಯೆ ಆರಂಭ

ನಿಭಾಯಿಸುವ ಆನೆಗಳ ಹುಡುಕಾಟದಲ್ಲಿ ಅಧಿಕಾರಿಗಳು ತಲ್ಲೀನರಾಗಿದ್ದಾರೆ. ಜೂ.19 ರಿಂದ ಕ್ಯಾಪ್ಟನ್ ಅಭಿಮನ್ಯು ಇರುವ ಮತ್ತಿಗೋಡು ಕ್ಯಾಂಪ್, ದೊಡ್ಡ ಹರವೆ, ಭೀಮನಕಟ್ಟೆ, ದುಬಾರೆ, ಬಳ್ಳೆ ಹಾಗೂ ಬಂಡೀಪುರದ ಕ್ಯಾಂಪ್‌ಗೆ ಮೈಸೂರು ಡಿಸಿಎಫ್ ಡಾ.ಐ.ಬಿ. ಪ್ರಭುಗೌಡ ಸೇರಿದಂತೆ ಅಧಿಕಾರಿಗಳು, ಪಶು ವೈದ್ಯರು, ಆರ್‌ಎಫ್‌ಓ, ಸಹಾಯ ಕರು ಇರುವ ತಂಡ ಆನೆ ಕ್ಯಾಂಪ್‌ಗೆ ಭೇಟಿ ನೀಡಿ, ದಸರಾ ಮಹೋತ್ಸವಕ್ಕೆ ಕರೆತರಬಹುದಾದ ಆನೆಗಳ ಆರೋಗ್ಯ ಪರಿಶೀಲಿಸಿದ್ದಾರೆ. ಆರು ಕ್ಯಾಂಪ್‌ಗಳಿಂದ ಸುಮಾರು 25ಕ್ಕೂ ಹೆಚ್ಚು ಆನೆಗಳ ಪಟ್ಟಿ ಸಿದ್ದಪಡಿಸಿ ರುವ ಅಧಿಕಾರಿಗಳ ತಂಡ, ಅದರಲ್ಲಿ 15 ಆನೆ ಗಳನ್ನು ಅಂತಿಮಗೊಳಿಸಿ, ಜುಲೈ ಎರಡನೇ ವಾರದಲ್ಲಿ ಪ್ರಕಟಿಸಲಿ ದ್ದಾರೆ. ಈಗಾಗಲೇ ಗಜಪಯಣಕ್ಕೆ ದಿನಾಂಕ ಪ್ರಕಟಿಸಲಾಗಿದೆ. ಆ.4ರಂದು ಮಧ್ಯಾಹ್ನ 12.34ರಿಂದ 12.59ರ ತುಲಾ ಲಗ್ನ (ಅಭಿಜಿನ್)ದಲ್ಲಿ ಹುಣಸೂರು ತಾಲೂಕಿನ ವೀರನಹೊಸಳ್ಳಿ ಗೇಟ್ ಬಳಿಯಿಂದ ಗಜಪಯಣಕ್ಕೆ ಚಾಲನೆ ನೀಡಲಾಗುತ್ತದೆ. ಅಂದು ಸಂಜೆ ಮೈಸೂರಿನ ಅಶೋಕ ಪುರಂನಲ್ಲಿರುವ ಅರಣ್ಯ ಭವನದ ಆವರಣ ತಲುಪಲಿರುವ ಮೊದಲ ಹಂತ 9 ಆನೆಗಳು ಆ.7ರಂದು ಮೈಸೂರು ಅರಮನೆ ಪ್ರವೇಶಿಸಲಿವೆ. ಅರಮನೆ ಪ್ರವೇಶಕ್ಕೆ ಆ.7ರೊಂದಿಗೆ ಮತ್ತೊಂದು ದಿನಾಂಕ ಸೂಕ್ತವೆಂದು ನಿರ್ಧರಿಸಲಾಗಿದ್ದು, ಆ.7ರಂದೆ ಆನೆಗಳು ಅರಮನೆ ಅಂಗಳ ಪ್ರವೇಶಿಸುವುದು ಖಚಿತ ಎಂದು ಮೂಲಗಳು ತಿಳಿಸಿವೆ.

ಆ.9ರಿಂದ ತಾಲೀಮು ಆರಂಭ: ಅರಮನೆ ಅಂಗಳಕ್ಕೆ ಆಗಮಿಸಿದ ನಂತರ ಆ.9 ಅಥವಾ 10ರಿಂದ ಅರಮನೆ ಆವರಣದಿಂದ ಜಂಬೂಸವಾರಿ ಮಾರ್ಗ ದಲ್ಲಿ ಗಜಪಡೆಗೆ ತಾಲೀಮು ನಡೆಸ ಲಾಗುತ್ತದೆ. ಸೆಪ್ಟಂಬರ್ ಮೊದಲ ವಾರದಲ್ಲಿ ಎರಡನೇ ತಂಡದಲ್ಲಿ 5 ರಿಂದ 6 ಆನೆಗಳು ಆಗಮಿಸಲಿದ್ದು, ಆ ನಂತರ ಪೂರ್ಣ ಪ್ರಮಾಣದ ತಾಲೀಮು ನಡೆಸಿ ಗಜಪಡೆಯನ್ನು ಸಜ್ಜುಗೊಳಿಸಲಾಗುತ್ತದೆ.

ಬೆಂಗಳೂರಿಗೆ ಸುರ್ಜೇವಾಲ

ಮುಖ್ಯಮಂತ್ರಿ ಆಗುತ್ತಾರೆ ಎಂದು ಬಹಿರಂಗವಾಗಿಯೇ ಹೇಳುತ್ತಿದ್ದಾರೆ. ಇವೆಲ್ಲವುಗಳ ಹಿನ್ನೆಲೆಯಲ್ಲಿ ರಾಜ್ಯ ಕಾಂಗ್ರೆಸ್‌ನ ಅಸಮಾಧಾನ ಶಮನಗೊಳಿಸುವ ನಿಟ್ಟಿನಲ್ಲಿ ಸುರ್ಜೇವಾಲ ಅವರು ಬೆಂಗಳೂರಿಗೆ ಆಗಮಿಸಿ, ಶಾಸಕರೊಂದಿಗೆ ಪ್ರತ್ಯೇಕವಾಗಿ ಚರ್ಚೆ ನಡೆಸಲಿದ್ದಾರೆ. ಅಸಮಾಧಾನಗೊಂಡಿರುವ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಡಿಸಿಎಂ ಡಿ.ಕೆ. ಶಿವಕುಮಾರ್ ಪರವಾಗಿ ಬಹಿರಂಗ ಹೇಳಿಕೆ ನೀಡುತ್ತಿರುವ ಶಾಸಕರ ಪಟ್ಟಿ ಸಿದ್ಧಪಡಿಸಿಕೊಂಡಿರುವ ಸುರ್ಜೇವಾಲ ಸ್ವತಃ ಅವರೇ ಶಾಸಕರನ್ನು ಚರ್ಚೆಗೆ ಆಹ್ವಾನಿಸಿದ್ದಾರೆ.

ಬಾನು ಮುಷ್ತಾಕ್ ಆಯ್ಕೆ

ಸಮ್ಮೇಳನದ ಸರ್ವಾಧ್ಯಕ್ಷರಾಗಿ ಹಿರಿಯ ಲೇಖಕಿ ಹಾಗೂ ಬುಕರ್ ಪ್ರಶಸ್ತಿ ವಿಜೇತೆ ಬಾನು ಮುಷ್ತಾಕ್ ಅವರ ಹೆಸರನ್ನು ಅಂತಿಮಗೊಳಿಸಲಾಗಿದೆ ಎಂದರು. ಇದರೊಂದಿಗೆ ದೀಪ ಬಾಸ್ತಿ ಅವರನ್ನು ಸಮ್ಮೇಳನದಲ್ಲಿ ಗೌರವಿಸಲಾಗುತ್ತದೆ ಎಂದರು. ಜೂ. 29ರಂದು ಬಳ್ಳಾರಿಯ ಖಾಸಗಿ ಹೋಟೆಲ್‌ನಲ್ಲಿ ನಡೆದ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ ಸಮಿತಿ ಸಭೆಯಲ್ಲಿ 88ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ರಾಗಿ ಸರ್ವಾನುಮತದಿಂದ ಬಾನು ಮುಷ್ತಾಕ್ ಅವರ ಹೆಸರನ್ನು ಅಂತಿಮಗೊಳಿಸಲಾಗಿದೆ ಎಂದು ಜೋಶಿ ತಿಳಿಸಿದರು.

ಕಾಲ್ತುಳಿತದಲ್ಲಿ ಮೂವರು ಸಾವು

ಪರಿಸ್ಥಿತಿ ನಿಯಂತ್ರಣ ತಪ್ಪಿತು. ಕಾನೂನು ಸಚಿವ ಪೃಥ್ವಿರಾಜ್ ಹರಿಚಂದನ್ ಅವರು ಘಟನೆಯ ಬಗ್ಗೆ ಮುಖ್ಯಮಂತ್ರಿ ಮೋಹನ್ ಚರಣ್ ಮಾಝಿ ಅವರಿಗೆ ಮಾಹಿತಿ ನೀಡಿದ್ದಾರೆ ಎಂದು ವರದಿಯಾಗಿದೆ. ಪೊಲೀಸ್ ಮಹಾನಿರ್ದೇಶಕ ವೈ.ಬಿ. ಖುರಾನಿಯಾ ಪರಿಸ್ಥಿತಿ ಬಗ್ಗೆ ತಿಳಿದುಕೊಳ್ಳಲು ಪುರಿಗೆ ಧಾವಿಸಿದರು. ನಿನ್ನೆ ಮೂರು ರಥಗಳು ಹಿಂದಿನ ದಿನ ಅಪೂರ್ಣವಾಗಿ ಉಳಿದಿದ್ದ ರಥ ಎಳೆಯುವಿಕೆಯನ್ನು ಪುನರಾರಂಭಿಸಿದ ನಂತರ ಮಧ್ಯಾಹ್ನ 1.30 ರ ಸುಮಾರಿಗೆ ಗುಂಡಿಚಾ ದೇವಾಲಯವನ್ನು ತಲುಪಿದವು. ಈ ವರ್ಷದ ರಥಯಾತ್ರೆಯಲ್ಲಿ ಸಾಮಾನ್ಯಕ್ಕಿಂತ 1.5 ಪಟ್ಟು ಹೆಚ್ಚಿನ ಜನರು ಭಾಗವಹಿಸಿದ್ದಾರೆ ಎಂದು ಅಧಿಕಾರಿಗಳು ಹೇಳುತ್ತಾರೆ.

ಶ್ರೀ ಜಗನ್ನಾಥ ದೇವಾಲಯ ಆಡಳಿತ ಮಂಡಳಿಯು ಇಂದು ಅಡಪ ಮಂಟಪ ಬಿಜೆ ಆಚರಣೆಗಳನ್ನು ನಡೆಸಲು ನಿರ್ಧರಿಸಿದೆ. ಜನಸಂದಣಿ ಹೆಚ್ಚಾಗುತ್ತಿದ್ದಂತೆಯೇ ರಥಗಳಿಗೆ ಬಳಸುವ ಏಣಿಗಳನ್ನು ಹೊತ್ತ ಟ್ರಕ್ ದೇವಾಲಯದ ಬಳಿಗೆ ಬಂದು ಗೊಂದಲವನ್ನು ಹೆಚ್ಚಿಸಿತು ಎಂದು ಸ್ಥಳೀಯರು ವರದಿ ಮಾಡಿದ್ದಾರೆ.


ಏಪ್ರಿಲ್ 1ರಿಂದ ಜನಗಣತಿ ಆರಂಭ

ದತ್ತಾಂಶ ಸಂಗ್ರಹಿಸಲಾಗುವುದು. ಎರಡನೇ ಹಂತದಲ್ಲಿ ಜನಸಂಖ್ಯಾ ಗಣತಿ ನಡೆಯುತ್ತದೆ. ಇಲ್ಲಿ ಪ್ರತಿಯೊಬ್ಬರ ವೈಯಕ್ತಿಕ ದತ್ತಾಂಶಗಳ ಮೇಲೆ ಗಮನ ಕೇಂದ್ರೀಕರಿಸಿ, ಮಾಹಿತಿ ಕಲೆಹಾಕಲಾಗುತ್ತದೆ. ಸ್ವಾತಂತ್ರ್ಯಾ ನಂತರ ಮೊದಲ ಬಾರಿಗೆ ಜನಗಣತಿಯೊಂದಿಗೆ ಜಾತಿ ಗಣತಿಯನ್ನೂ ನಡೆಸಲು ಕೇಂದ್ರ ಸರ್ಕಾರ ಈಗಾಗಲೇ ಅಧಿಸೂಚನೆ ಹೊರಡಿಸಿದೆ. ಜನಗಣತಿ ಪ್ರಕ್ರಿಯೆಗೆ 34 ಲಕ್ಷ ಗಣತಿದಾರರು ಮತ್ತು ಮೇಲ್ವಿಚಾರಕರು ಹಾಗೂ 1.3 ಲಕ್ಷ ಅಧಿಕಾರಿಗಳನ್ನು ನಿಯೋಜಿಸಲಾಗುತ್ತದೆ. ದೇಶದಲ್ಲಿ ಮೊದಲ ಡಿಜಿಟಲ್ ಜನಗಣತಿಯಾಗಲಿರುವ ಈ ಪ್ರಕ್ರಿಯೆಯು ನಾಗರಿಕರಿಗೆ ಸ್ವಯಂ–ಗಣತಿಗೆ ಒಳಪಡಲು ಅವಕಾಶ ನೀಡುತ್ತದೆ.



ಮೈಸೂರು ಮಿತ್ರ ಸೋಮವಾರ 30 ಜೂನ್ 2025

ಆಲಕೆರೆ ರಾಮಲಿಂಗೇಗೌಡರ 'ವಿಮಲ ಕೀರ್ತಿ ನಿರ್ದೇಶ', 'As witness of time' ಕೃತಿಗಳ ಬಿಡುಗಡೆ



ವಾಣಿಜ್ಯ ತೆರಿಗೆ ಇಲಾಖೆ ವಿಶ್ರಾಂತ ಅಡಿಷನಲ್ ಕಮಿಷನರ್ ಆಲಕೆರೆ ರಾಮಲಿಂಗೇಗೌಡರ ಕೃತಿಗಳನ್ನು ಬಿಡುಗಡೆಗೊಳಿಸಲಾಯಿತು.

ಮೈಸೂರು, ಜೂ.29(ಜಿಎ)–ಪ್ರೊ.ಕೆ.ವೆಂಕಟಗಿರಿಗೌಡ ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಪರಿಷತ್ ಹಾಗೂ ಹನ್ಯಾಳು ಪ್ರಕಾಶನ ವತಿಯಿಂದ ರೋಟರಿ ವೆಸ್ಟ್ ಸಭಾಂಗಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಾಣಿಜ್ಯ ತೆರಿಗೆ ಇಲಾಖೆ ವಿಶ್ರಾಂತ ಅಡಿಷನಲ್ ಕಮಿಷನರ್ ಆಲಕೆರೆ ರಾಮಲಿಂಗೇಗೌಡರು ರಚಿಸಿರುವ 'ವಿಮಲ ಕೀರ್ತಿ ನಿರ್ದೇಶ' ಮತ್ತು 'As witness of time' ಎರಡು ಕೃತಿಗಳನ್ನು ಬಿಡುಗಡೆಗೊಳಿಸಲಾಯಿತು.

ಕಾರ್ಯಕ್ರಮದಲ್ಲಿ ಸುಯೋಗ್ ಆಸ್ಪತ್ರೆ ಮುಖ್ಯಸ್ಥ ಡಾ.ಎಸ್.ಪಿ.ಯೋಗಣ್ಣ, ವಿಶ್ರಾಂತ ಪ್ರಾಂಶುಪಾಲ ಪ್ರೊ.ಎಸ್.ಶಿವಾಜಿ ಜೋಯಿಸ್, ಮಹಾರಾಣಿ ಕಾಲೇಜಿನ ಸಹ ಪ್ರಾಧ್ಯಾಪಕಿ ಡಾ.ಬಿ.ಎಸ್.ದಿವ್ಯ, ಪ್ರಕಾಶಕ ಹೆಚ್.ಎಸ್.ಗೋವಿಂದಗೌಡ, ಎಸ್.ಸಿ.ತಮ್ಮಣ್ಣಗೌಡ ಕೃತಿಗಳನ್ನು ಲೋಕಾರ್ಪಣೆಗೊಳಿಸಿದರು.

ನಂತರ 'ವಿಮಲ ಕೀರ್ತಿ ನಿರ್ದೇಶ' ಕೃತಿ ಕುರಿತು ಪ್ರೊ.ಎಸ್.ಶಿವಾಜಿ ಜೋಯಿಸ್ ಮಾತನಾಡಿ, ರಾಮಲಿಂಗೌಡರು ಸಾಹಿತ್ಯ ಕ್ಷೇತ್ರಕ್ಕೆ ಬಂದಿರುವುದೇ ದೊಡ್ಡ ಕೊಡುಗೆ. ಈ ಕೃತಿಗಾಗಿ ಗೌಡರು ಒಳ ಪ್ರವೇಶ ಮಾಡಿದ್ದಾರೆ. ಕತಿ ಬೇಗ ಮುಗಿಸಬೇಕೆಂದು ಎರಡೇ ತಿಂಗಳಲ್ಲಿ ಅನುವಾದ ಮಾಡಿದ್ದಾರೆ. ನಂತರ ಮೂರು ಬಾರಿ ತಿದ್ದುಪಡಿ ಮಾಡಿದ್ದಾರೆ. ಯಾವುದೇ ಕೃತಿಯನ್ನು ಅನುವಾದ ಮಾಡಬೇಕಾದರೆ, ಅನುಭವಿಸಿ ಅನುವಾದ ಮಾಡಬೇಕು. ಅದನ್ನು ಕೃತಿಯಲ್ಲಿ ನಾವು ಕಾಣಬಹುದು ಎಂದರು. ಮಹಾರಾಣಿ ಕಾಲೇಜಿನ ಸಹ ಪ್ರಾಧ್ಯಾಪಕಿ ಡಾ.ಬಿ.ಎಸ್.ದಿವ್ಯ 'As witness of time' ಕೃತಿ ಕುರಿತು ಮಾತನಾಡಿದರು.

ಶಾಸಕ ಕೆ.ಹರೀಶ್‌ಗೌಡರಿಗೆ ಸನ್ಮಾನ...



ಮೈಸೂರು ನಜರ್‌ಬಾದ್‌ನಲ್ಲಿರುವ ಜಡೇ ಮುನೇಶ್ವರ ಸ್ವಾಮಿ ದೇವಸ್ಥಾನದಲ್ಲಿ ನಡೆದ ಪೂಜಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಶಾಸಕ ಕೆ.ಹರೀಶ್‌ಗೌಡ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ಮುಖಂಡರಾದ ಎಸ್.ಆರ್.ರವಿ ಹೀರೇಗೌಡ, ಸುಹಾಸ್‌ಗೌಡ, ಜಾವೀದ್, ರವಿ, ಶುಭಂ ಸುರೇಂದ್ರ ಉಪಸ್ಥಿತರಿದ್ದರು.

ನಾಳೆ ಮಾಧ್ಯಮ ಆರೋಗ್ಯ ಸಂಜೀವಿನಿ, ಗ್ರಾಮೀಣ ಪತ್ರಕರ್ತರಿಗೆ ಬಸ್ ಪಾಸ್ ವ್ಯವಸ್ಥೆಗೆ ಸಿಎಂ ಚಾಲನೆ

ಶ್ರೀ ಶಿವರಾತ್ರೀಶ್ವರ ಮಾಧ್ಯಮ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಸಿಎಂ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್ ಮಾಹಿತಿ



ಮೈಸೂರಿನ ಶ್ರೀ ಶಿವರಾತ್ರಿ ರಾಜೇಂದ್ರ ಭವನದಲ್ಲಿ ಭಾನುವಾರ ಮೈಸೂರು ಜಿಲ್ಲಾ ಪತ್ರಕರ್ತರ ಸಂಘ ಆಯೋಜಿಸಿದ್ದ ಸಮಾರಂಭದಲ್ಲಿ 'ಮೈಸೂರು ಮಿತ್ರ' ಸುದ್ದಿ ಸಂಪಾದಕ ಎ.ಸಿ.ಪ್ರಭಾಕರ್ ಅವರಿಗೆ ಶ್ರೀ ಶಿವರಾತ್ರೀಶ್ವರ ಮಾಧ್ಯಮ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಯಿತು.

ಮೈಸೂರು, ಜೂ.29(ಬಿಎಲ್‌ಯು)– ಜುಲೈ 1ರ ಪತ್ರಿಕಾ ದಿನಾಚರಣೆ ದಿನದಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಾಧ್ಯಮ ಆರೋಗ್ಯ ಸಂಜೀವಿನಿ ಮತ್ತು ಗ್ರಾಮೀಣ ಪತ್ರಕರ್ತರಿಗೆ ಉಚಿತ ಬಸ್ ಪಾಸ್ ವ್ಯವಸ್ಥೆಗೆ ಚಾಲನೆ ನೀಡುವರು ಎಂದು ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್ ತಿಳಿಸಿದರು.

ಮೈಸೂರಿನ ಶ್ರೀ ಶಿವರಾತ್ರಿ ರಾಜೇಂದ್ರ ಭವನದಲ್ಲಿ ಇಂದು ಮೈಸೂರು ಜಿಲ್ಲಾ ಪತ್ರಕರ್ತರ ಸಂಘ ಆಯೋಜಿಸಿದ್ದ ಶ್ರೀ ಶಿವರಾತ್ರೀಶ್ವರ ಮಾಧ್ಯಮ ಪ್ರಶಸ್ತಿ ಪ್ರದಾನ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಗ್ರಾಮೀಣ ಪತ್ರಕರ್ತರಿಗೆ ಬಸ್ ಪಾಸ್ ನೀಡುವ ಬಹು ವರ್ಷಗಳ ಬೇಡಿಕೆ ಈಗ ಈಡೇರಿದೆ. ಜೊತೆಗೆ ಕೆಲಸದ ಒತ್ತಡದಲ್ಲಿರುವ ಪತ್ರಕರ್ತರ ಆರೋಗ್ಯದ ದೃಷ್ಟಿಯಿಂದ ಜಾರಿಗೊಳಿಸುವ ಮಾಧ್ಯಮ ಆರೋಗ್ಯ ಸಂಜೀವಿನಿ ಯೋಜನೆಯಡಿ ಪತ್ರಕರ್ತರು 5 ಲಕ್ಷ ರೂ.ವರೆಗೆ ಉಚಿತ ಚಿಕಿತ್ಸೆ ಪಡೆಯಬಹುದಾಗಿದೆ ಎಂದರು.

ವಿಶ್ವದ ಶ್ರೀಮಂತ ಉದ್ಯಮಿ ಅಂಬಾನಿ ಪುತ್ರನ ಐಷರಾಮಿ ಮದುವೆಯನ್ನು ದೇಶದ ಅಮೃತ ಕಾಲ ಎಂದು ಬಿಂಬಿಸುತ್ತಿದ್ದ ಸಂದರ್ಭದಲ್ಲಿ ಭಾರತದ 67 ಲಕ್ಷ ಮಕ್ಕಳಿಗೆ ಒಪ್ಪೊತ್ತಿನ ಊಟಕ್ಕೂ ಗತಿ ಇಲ್ಲ ಎನ್ನುವ ವರದಿ ಬಂದಿತ್ತು ಎಂಬ ಆತಂಕಕಾರಿ ವಿಚಾರವನ್ನು ತಿಳಿಸಿದರು.

ಭಾರತದ ಮಕ್ಕಳ ಅಪೌಷ್ಟಿಕತೆಯ ಪ್ರಮಾಣ ಶೇಕಡ 18.7ರಷ್ಟಿದ್ದರೆ, ಗಂಭೀರ ಸ್ವರೂಪದ ಅಪೌಷ್ಟಿಕತೆ ಪ್ರಮಾಣ ಶೇಕಡ 16.6ರಷ್ಟಿದೆ. ಹಾಗೆಯೇ 5 ವರ್ಷದೊಳಗಿನ ಮಕ್ಕಳು ಅಪೌಷ್ಟಿಕತೆಯಿಂದ ಮರಣ ಹೊಂದುವ ಪ್ರಮಾಣ ಶೇಕಡ 3.1 ರಷ್ಟಿದೆ ಎಂದು ಅಧ್ಯಯನಗಳು ಸಾರಿ ಹೇಳುತ್ತಿವೆ ಎಂದು ಅಂಕಿ ಅಂಶಗಳ ವಿವರಣೆ ನೀಡಿದರು.

ಸನ್ನಿ ಡಿಯೋಲ್ ಬಂಗಲೆ ಬಗ್ಗೆ ನಡೆಯುವ ಚರ್ಚೆ, ಲವ್ ಜಿಹಾದ್, ಹಿಜಾಬ್, ಕ್ರಿಕೆಟ್, ಐಪಿಎಲ್ ಕುರಿತಂತೆ ನಡೆಯುವ ಚರ್ಚೆಯ ಸಮಯ ಜನಸಾಮಾನ್ಯರ ಬದುಕಿನ ಬವಣೆ ಬಗ್ಗೆ ಚರ್ಚಿಸಲು ಸಿಗುತ್ತಿಲ್ಲ ಎಂದು ಪ್ರಭಾಕರ್ ಅಸಮಾಧಾನ ವ್ಯಕ್ತಪಡಿಸಿದರು.

ಜನಸಾಮಾನ್ಯರ ಬಗ್ಗೆ ಚರ್ಚಿಸಿ ಸರ್ಕಾರದ ಗಮನ ಸೆಳೆಯುವ ಅವಕಾಶ ಮಾಧ್ಯಮ ಲೋಕದ ಮುಂದಿದೆ. ಈ ವಿಚಾರದಲ್ಲಿ ಮೈಸೂರಿನ ಪತ್ರಕರ್ತರು ಆರೋಗ್ಯಕರ, ಜವಾಬ್ದಾರಿಯುತ ಹಾಗೂ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿರುವುದು ಸಮಾಧಾನದ ಸಂಗತಿಯಾಗಿದೆ. ಆದರೆ ನಮ್ಮ ಮಾಧ್ಯಮ ಲೋಕದ ಆಸಕ್ತಿ ಮತ್ತು ವರ್ತನೆಯನ್ನು ಒಟ್ಟಾರೆ ಗಮನಿಸಿದಾಗ ನಿರಾಸೆ ಮೂಡುತ್ತದೆ ಎಂದರು.

ಇಂತಹ ನಿರಾಶದಾಯಕ ಪರಿಸ್ಥಿತಿಯಲ್ಲಿ ಮಾಧ್ಯಮಗಳ ಜವಾಬ್ದಾರಿ ಹೆಚ್ಚಿದ್ದು, ಸುಳ್ಳು ಸುದ್ದಿ, ಊಹಾ ಪ್ರತಿಕೋದ್ಯಮದಿಂದ ನಮ್ಮನ್ನು ನಾವು ಬಿಡಿಸಿಕೊಂಡು ನಮ್ಮ ಹಿಂದಿನವರು ಹಾಕಿಕೊಟ್ಟ ಆದರ್ಶದ ಹಾದಿಯಲ್ಲಿ ಸಾಗಬೇಕು. ಈ ಮೂಲಕ ಜನಮುಖಿ, ಸಮಾಜಮುಖಿ ಮತ್ತು ವೃತ್ತಿಪರತೆ ಗಟ್ಟಿಗೊಳಿಸುವ ಹೊಣೆಗಾರಿಕೆ ತಮ್ಮ ಮೇಲಿದೆ ಎಂದು ಪತ್ರಕರ್ತರು ಅರಿಯಬೇಕು ಎಂದು ಅಭಿಪ್ರಾಯಪಟ್ಟರು.

ಇದೇ ವೇಳೆ ನಿವೃತ್ತ ರಾಜ್ಯ ಪೊಲೀಸ್ ಮಹಾನಿರ್ದೇಶಕರೂ ಆದ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ರಾಜ್ಯಾಧ್ಯಕ್ಷ ಶಂಕರ ಬಿದರಿ ಅವರು 'ಮೈಸೂರು ಮಿತ್ರ' ಸುದ್ದಿ ಸಂಪಾದಕ ಎ.ಸಿ.ಪ್ರಭಾಕರ್ ಅವರಿಗೆ ಸುತ್ತೂರು ಶ್ರೀಕ್ಷೇತ್ರದಿಂದ ಕೊಡಮಾಡುವ ಶ್ರೀ ಶಿವರಾತ್ರೀಶ್ವರ ಮಾಧ್ಯಮ ಪ್ರಶಸ್ತಿ ಪ್ರದಾನ ಮಾಡಿದರು.

ನಂತರ ಮಾತನಾಡಿದ ಅವರು, ಪ್ರಶಸ್ತಿ ಪುರಸ್ಕೃತ ಎ.ಸಿ.ಪ್ರಭಾಕರ್ ಅವರು ಪತ್ರಿಕೋದ್ಯಮದ ವೃತ್ತಿ ಮೌಲ್ಯ ಅಳವಡಿಸಿಕೊಂಡು ಜವಾಬ್ದಾರಿಯಾಗಿ ಕೆಲಸ ನಿರ್ವಹಿಸುತ್ತಿದ್ದಾರೆ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ವೀರಪ್ಪನ್ ಸೆರೆ ಹಿಡಿಯುವ ಕಾರ್ಯಾಚರಣೆ ವೇಳೆ ಗಂಭೀರ ಹಾಗೂ ಕಷ್ಟದ ಪರಿಸ್ಥಿತಿಯಲ್ಲಿದ್ದೆವು. ಮಹದೇಶ್ವರ ಬೆಟ್ಟಕ್ಕೆ ಅಷ್ಟಾಗಿ ಬಸ್‌ಗಳಿಲ್ಲದ ಅಂದಿನ ಸಮಯದಲ್ಲಿ ಜನರು ಪೊಲೀಸ್ ಅಧಿಕಾರಿಗಳೇ ರಕ್ಷಣೆಯೊಂದಿಗೆ ಹೋಗಬೇಕಾದ ಪರಿಸ್ಥಿತಿ ಇತ್ತು. ಕಾಡು ಮೇಡು ಸುತ್ತುವ ಪೊಲೀಸರಿಗೆ ಜೀವ ಭಯವಿತ್ತು. ಅಂದಿನ ಸಂದರ್ಭದಲ್ಲಿ ನನ್ನಷ್ಟೇ ಪ್ರಭಾಕರ್ ಅವರಿಗೂ ಜೀವ ಭಯವಿತ್ತು. ಆದರೂ ಕಾರ್ಯಾಚರಣೆಯಲ್ಲಿ ನನ್ನೊಡನೆ ಜೊತೆಯಾಗಿ ಸಾಗಿದರು ಎಂದರು.

ಪ್ರಭಾಕರ್ ಅವರು ವೀರಪ್ಪನ್ ಕುರಿತಂತೆ ಬಹಳಷ್ಟು ವಿಚಾರಗಳನ್ನು ಸಂಗ್ರಹಿಸಿ ಪೊಲೀಸ್ ಇಲಾಖೆಗೆ ತಿಳಿಸುತ್ತಿದ್ದರು. ತಮ್ಮ ಪ್ರಾಣಕ್ಕೆ ಅಪಾಯ ಇದ್ದರೂ ಕಾರ್ಯಾಚರಣೆಯಲ್ಲಿ ಕೆಲಸ ಮಾಡುತ್ತಿದ್ದರು. ಪತ್ರಕರ್ತನಾಗಿ ಕಾರ್ಯಾಚರಣೆ ಬಗ್ಗೆ ತಮಗೆ ತಿಳಿದಿದ್ದ ಎಲ್ಲಾ ವಿವರವನ್ನು ಪ್ರಭಾಕರ್ ಪತ್ರಿಕೆಗಳಿಗೆ ನೀಡುತ್ತಿರಲಿಲ್ಲ. ಆ ಎಲ್ಲಾ ರಹಸ್ಯಗಳನ್ನು ಪತ್ರಿಕೆಗಳಿಗೆ ನೀಡಿದ್ದರೆ ಪ್ರಾಯಶಃ ಪೊಲೀಸರಿಗೆ ಅದು ಅಪಾಯವನ್ನುಂಟು ಮಾಡುತ್ತಿತ್ತು. ಈ ಹಿನ್ನೆಲೆ ವೀರಪ್ಪನ್ ಕಾರ್ಯಾಚರಣೆ ಕುರಿತಂತೆ ಅಗತ್ಯ ಮಾಹಿತಿಯನ್ನು ಮಾತ್ರ ಪತ್ರಿಕೆಗೆ ನೀಡುತ್ತಿದ್ದರು ಎಂದು ಶಂಕರ ಬಿದರಿ ಹೇಳಿದರು.

ಇದೇ ವೇಳೆ ಪಿ.ರಾಮಯ್ಯ ಪತ್ರಿಕೋದ್ಯಮ ಪ್ರಶಸ್ತಿ ಪುರಸ್ಕೃತರಾದ 'ಮೈಸೂರು ಮಿತ್ರ' ಹಿರಿಯ ವರದಿಗಾರ ಎಸ್.ಟಿ.ರವಿಕುಮಾರ್, ರಾಜ್ಯಮಟ್ಟದ ಗೋಮ್ಮಟಿ ಶ್ರೀ ದತ್ತಿನಿಧಿ ಪ್ರಶಸ್ತಿ ಪರಸ್ಕೃತ ಎಂ.ಆರ್.ಸತ್ಯನಾರಾಯಣ, ರಾಜಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಶಸ್ತಿ ಪುರಸ್ಕೃತ ಆರ್.ಕೃಷ್ಣ, ಹೆಚ್.ಕೆ.ಚಂದ್ರು, ಕಾಸರಗೋಡು ಜಿಲ್ಲಾ ಕನ್ನಡ ಪತ್ರಕರ್ತರ ಕ್ಷೇಮಾಭಿವೃದ್ಧಿ ಸಂಘದ ದತ್ತಿನಿಧಿ ಪ್ರಶಸ್ತಿ ಪರಸ್ಕೃತ ಪುನೀತ್ ಚಪ್ಪರದಹಳ್ಳಿ ಅವರನ್ನು ಅಭಿನಂದಿಸಲಾಯಿತು.

ಶಾಸಕ ದರ್ಶನ್ ಧ್ರುವನಾರಾಯಣ್ ಅವರು ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದ ಪತ್ರಕರ್ತರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಿದರು ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರಮಠ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರ್, ಜೆಎಸ್‌ಎಸ್ ಸಮೂಹ ಸಂಸ್ಥೆಯ ಶ್ರೀಹರಿ ದ್ವಾರಕನಾಥ್, ವಸತಿ ಸಚಿವ ಜಮೀರ್ ಅಹಮ್ಮದ್ ಖಾನ್ ಅವರ ಆಪ್ತ ಕಾರ್ಯದರ್ಶಿ ಲಕ್ಷ್ಮಿ ನಾರಾಯಣ ಉಪಸ್ಥಿತರಿದ್ದರು. ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್ ಅಧ್ಯಕ್ಷತೆ ವಹಿಸಿದ್ದರು.

ತಾಳ್ಮೆ, ದೂರದೃಷ್ಟಿ ನಾಯಕತ್ವದಿಂದ ಉದ್ಯಮ ಕ್ಷೇತ್ರದಲ್ಲಿ ಯಶಸ್ಸು



ಟೈ ಮೈಸೂರು ಚಾಪ್ಟರ್‌ನ ಫೌಂಡರ್ ಸೀರೀಸ್ ಸಂವಾದ ಕಾರ್ಯಕ್ರಮದಲ್ಲಿ ಜಿಆರ್‌ಎಸ್ ಫ್ಯಾಂಟಸಿ ಪಾರ್ಕ್‌ನ ವ್ಯವಹಾರ ಮುಖ್ಯಸ್ಥ ಎಂ.ಅಶ್ವಿನ್ ಡಾಂಗೆ ಹಾಗೂ ವಿನ್ಯಾಸ್ ಇನ್ನೋವೇಟಿವ್ ಟೆಕ್ನಾಲಜೀಸ್ ನಿರ್ದೇಶಕ ಸುಮುಖ್ ನರೇಂದ್ರ ನವೋದ್ಯಮಿಗಳಿಗೆ ಸಲಹೆ ನೀಡಿದರು. ಈ ವೇಳೆ ವಿಜ್ಞಾನಿ ಡಾ.ಎಂ.ಧರ್ಮ ಪ್ರಸಾದ್ ಉಪಸ್ಥಿತರಿದ್ದರು.

ನವೋದ್ಯಮಿಗಳಿಗೆ ಯಶಸ್ವಿ ಉದ್ಯಮಿಗಳ ಕಿವಿಮಾತು

ಮೈಸೂರು,ಜೂ.29(ಎಂಕೆ)– ಉದ್ಯಮದಲ್ಲಿ ತಾಳ್ಮೆ ಇರಬೇಕು. ದೂರದೃಷ್ಟಿ ನಾಯಕತ್ವದ ಜೊತೆಗೆ ಹೊಸ ಚಿಂತನೆ, ಯೋಜನೆಗಳಿಗೆ ಅದ್ವತೆ ನೀಡುವ ಮೂಲಕ ಯಶಸ್ಸು ಸಾಧ್ಯವಾಗಲಿದೆ ಎಂದು ಜಿಆರ್‌ಎಸ್ ಫ್ಯಾಂಟಸಿ ಪಾರ್ಕ್‌ನ ವ್ಯವಹಾರ ಮುಖ್ಯಸ್ಥ ಎಂ.ಅಶ್ವಿನ್ ಡಾಂಗೆ ಹಾಗೂ ವಿನ್ಯಾಸ್ ಇನ್ನೋವೇಟಿವ್ ಟೆಕ್ನಾಲಜೀಸ್ ನಿರ್ದೇಶಕ ಸುಮುಖ್ ನರೇಂದ್ರ ನವೋದ್ಯಮಿಗಳಿಗೆ ಸಲಹೆ ನೀಡಿದರು.

ಮೈಸೂರಿನ ಹುಣಸೂರು ರಸ್ತೆಯಲ್ಲಿರುವ ಲೀ ರುಚಿ ಹೋಟೆಲ್‌ನಲ್ಲಿ ಟೈ (TiE) ಮೈಸೂರು ಚಾಪ್ಟರ್ ವತಿಯಿಂದ ಆಯೋಜಿಸಿದ್ದ ಫೌಂಡರ್ ಸೀರೀಸ್ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಈಗಾಗಲೇ ಆರಂಭವಾಗಿರುವ ಉದ್ಯಮವನ್ನು ಮುನ್ನೆಡೆಸುವ ಎರಡನೇ ತಲೆಮಾರಿನ ಉದ್ಯಮಿಗಳು, ಉದ್ಯಮವನ್ನು ಉನ್ನತ ಸ್ಥಾನಕ್ಕೆ ಕೊಂಡೊಯ್ಯುವುದು ಸವಾಲಿನ ಕೆಲಸ ಮಾಡಬೇಕಿದೆ ಎಂದರು.

ಹಳೆ ಯೋಜನೆಗಳನ್ನು ನವೀಕರಣ ಮಾಡುವುದರ ಜೊತೆ ಜೊತೆಗೆ ಹೊಸ ಹೊಸ ಚಿಂತನೆಗಳನ್ನು ಅಳವಡಿಸಿಕೊಳ್ಳಬೇಕು. ಸಂದರ್ಭಕ್ಕೆ ಅನುಗುಣವಾಗಿ ಆಫರ್‌ಗಳನ್ನು ಘೋಷಣೆ ಮಾಡುವ ಮೂಲಕ ಗ್ರಾಹಕರನ್ನು ಸೆಳೆಯಬೇಕಾಗುತ್ತದೆ. ಉದ್ಯಮವನ್ನು ಮುನ್ನಡೆಸುವಾಗ ಹೆಜ್ಜೆ ಹೆಜ್ಜೆಗೂ ಕಲಿಯುವುದು ಸಾಕಷ್ಟು ಇರಲಿದ್ದು, ತಾಳ್ಮೆಯಿಂದ ಎಲ್ಲವನ್ನು ಆಲಿಸಿ ಮುನ್ನಡೆಯಬೇಕು ಎಂದು ಕಿವಿಮಾತು ಹೇಳಿದರು. ವಿಜ್ಞಾನಿ ಡಾ.ಎಂ.ಧರ್ಮ ಪ್ರಸಾದ್ ಸಂವಾದ ನಡೆಸಿಕೊಟ್ಟರು. ಟೈ ಮೈಸೂರು ಚಾಪ್ಟರ್ ಅಧ್ಯಕ್ಷ ಭಾಸ್ಕರ್ ಕಳಲೆ, ಬೋರ್ಡ್ ಮೆಂಬರ್ ಪವನ್ ರಂಗ, ಸದಸ್ಯರಾದ ಬಿ.ಎನ್.ಪ್ರಮೋದ್, ಶಬರೀಷನ್, ಬಿ.ಸಿ.ಪ್ರದೀಪ್, ಕೆ.ವೆಂಕಟ್, ಜಯಪ್ರಕಾಶ್ ಚೋಪ್ರಾ ಇತರರರಿದ್ದರು.

ಇಂದು ವಿದ್ಯುತ್ ವ್ಯತ್ಯಯ

ಮೈಸೂರು: ಜೂ.30ರ ಬೆಳಗ್ಗೆ 10ರಿಂದ ಸಂಜೆ 5:30ರವರೆಗೆ ತುರ್ತು ಕಾರ್ಯ ನಿಮಿತ್ತ ರಾಜೀವನಗರ 2ನೇ ಹಂತ, ಕ್ರಿಶ್ಚಿಯನ್ ಕಾಲೋನಿ, ಯಾಸಿನ್ ಮಸ್ಜಿದ್, ಸೂರ್ಯನಾರಾಯಣ ದೇವಸ್ಥಾನ ರಸ್ತೆ, ಆಲ್ ಬಜಾರ್ ಮಸ್ಜಿದ್ ವೃತ್ತ, ಅಂಬೇಡ್ಕರ್ ಭವನ ರಸ್ತೆ, ಕ್ಯೂಬಾ ಮಸ್ಜಿದ್ ವೃತ್ತ, ನಾರಾಯಣ ಹೃದಯಾಲಯ ಆಸ್ಪತ್ರೆ, ಕಾಮನಕೆರೆಹುಂಡಿ, ಕೆ.ಹೆಚ್.ಬಿ., ಆಸೀನಾ ಬಡಾವಣೆ, ರಾಜೀವನಗರ 3ನೇ ಹಂತ ಹಾಗೂ ಸುತ್ತ-ಮುತ್ತ. ಅಜೀಜ್ ಸೇಠ್ ನಗರ, ಶಕ್ತಿನಗರ, ಕಲ್ಯಾಣಗಿರಿ, ರಮ್ಮನಹಳ್ಳಿ, ಕಾಳಿಸಿದ್ದನಹುಂಡಿ, ಹಂಚ್ಯ, ಸಾತಗಳ್ಳಿ, ಗಳಿಗರಹುಂಡಿ, ನೆಹರುನಗರ, ಡಿ.ಟಿ.ಎಸ್ ರಾವ್‌ನಗರ, ಭಾರತ್‌ನಗರ ಹಾಗೂ ಸುತ್ತಮುತ್ತ ವಿದ್ಯುತ್ ವ್ಯತ್ಯಯವಾಗಲಿದೆ.

ಶ್ರೀ ಚಾಮುಂಡೇಶ್ವರಿ ಅಮ್ಮನವರ ಪೂಜಾ ಮಹೋತ್ಸವ



ಮೈಸೂರಿನ ಚಿಕ್ಕ ಗಡಿಯಾರದಲ್ಲಿರುವ ಹಣ್ಣಿನ ವ್ಯಾಪಾರಿಗಳ ಸಂಘದ ವತಿಯಿಂದ ಶ್ರೀ ಚಾಮುಂಡೇಶ್ವರಿ ಅಮ್ಮನವರ ಪೂಜಾ ಮಹೋತ್ಸವ ನೆರವೇರಿಸಲಾಯಿತು. ಈ ವೇಳೆ ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡರು ಪೌರಕಾರ್ಮಿಕರಿಗೆ ವಸ್ತ್ರ ವಿತರಿಸಿದರು. ನಂತರ ಸಾರ್ವಜನಿಕರಿಗೆ ಪ್ರಸಾದ ವಿನಿಯೋಗ ಮಾಡಿದರು. ಈ ಸಂದರ್ಭದಲ್ಲಿ ಲಾಲು ಬೈ, ರಿಯಾಜ್, ದೊಡ್ಡಯ್ಯ ಸಂದೀಪ್, ಅಭಿಲಾಶ್, ಶರವಣ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಜೆಕೆ ಟೈರ್ಸ್‌ನ ಆಡಳಿತ ಮಂಡಳಿ ವಿರುದ್ಧ ಬದಲಿ, ದಿನಗೂಲಿ ನೌಕರರಿಂದ ಅಂಚೆ ಚಳವಳಿ



ಜೆಕೆ ಟೈರ್ಸ್‌ನ ಆಡಳಿತ ಮಂಡಳಿಯು ನ್ಯಾಯಾಲಯದ ಆದೇಶ ಧಿಕ್ಕರಿಸಿ ಕಾರ್ಮಿಕರನ್ನು ವಜಾಗೊಳಿಸಿದೆ ಎಂದು ಆರೋಪಿಸಿ ಜೆಕೆ ಟೈರ್ಸ್‌ನ ಬದಲಿ ಮತ್ತು ದಿನಗೂಲಿ ಕಾರ್ಮಿಕರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಮೈಸೂರಿನ ಅಶೋಕ ರಸ್ತೆಯಲ್ಲಿರುವ ಪ್ರಧಾನ ಅಂಚೆ ಕಚೇರಿ ಮುಂಭಾಗ ಅಂಚೆ ಚಳವಳಿ ನಡೆಸಲಾಯಿತು.

ಮೈಸೂರು,ಜೂ.29(ಜಿಎ)–ಜೆಕೆ ಟೈರ್ಸ್‌ನ ಆಡಳಿತ ಮಂಡಳಿಯು ನ್ಯಾಯಾಲಯದ ಆದೇಶ ಧಿಕ್ಕರಿಸಿ ಕಾರ್ಮಿಕರನ್ನು ವಜಾಗೊಳಿಸಿದೆ ಎಂದು ಆರೋಪಿಸಿ ಜೆಕೆ ಟೈರ್ಸ್‌ನ ಬದಲಿ ಮತ್ತು ದಿನಗೂಲಿ ಕಾರ್ಮಿಕರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಮೈಸೂರಿನ ಅಶೋಕ ರಸ್ತೆಯಲ್ಲಿರುವ ಪ್ರಧಾನ ಅಂಚೆ ಕಚೇರಿ ಮುಂಭಾಗ ಅಂಚೆ ಚಳುವಳಿ ನಡೆಸಿದರು.

ಅಂಚೆ ಕಚೇರಿ ಮುಂಭಾಗದ ಅಂಚೆ ಪೆಟ್ಟಿಗೆ ಬಳಿ ಜಮಾಯಿಸಿದ ಕಾರ್ಮಿಕರು ಜೆಕೆ ಟೈರ್ಸ್‌ನ ಆಡಳಿತ ಮಂಡಳಿಯು ಕಾರ್ಮಿಕರ ವಿರೋಧಿ ಆಡಳಿತ ಬಗ್ಗೆ ಗಮನಹರಿಸುವಂತೆ ಕಾರ್ಮಿಕ ಸಚಿವರಿಗೆ ಪತ್ರ ರವಾನಿಸಿದರು.

ಜೆಕೆ ಟೈರ್ಸ್ ಆಡಳಿತ ಮಂಡಳಿಯೂ ಈಗಾಗಲೇ ಸಾಕಷ್ಟು ಕಾರ್ಮಿಕರನ್ನು ಕೆಲಸದಿಂದ ವಜಾಗೊಳಿಸಿರುವುದನ್ನು ವಿರೋಧಿಸಿ ಸಂಸ್ಥೆ ವಿರುದ್ಧ ನ್ಯಾಯಾಲಯದಲ್ಲಿ ದಾವೆ ಹೂಡಲಾಗಿತ್ತು ವಿಚಾರಣೆ ನಡೆಸಿದ

ಕಾರ್ಮಿಕರ ವಿರೋಧಿ ನೀತಿ ಆರೋಪ; ಸಚಿವರಿಗೆ ಪತ್ರ ರವಾನೆ

ಕೋರ್ಟ್ ಕಾರ್ಮಿಕರ ಪರ ತೀರ್ಪಿನ ಆದೇಶ ನೀಡಿದಲ್ಲದೇ, ವಜಾಗೊಳಿಸಿದ ಎಲ್ಲಾ ನೌಕರರನ್ನು ಮರು ನೇಮಕ ಮಾಡಿಕೊಳ್ಳಬೇಕು. ಹಿರಿತನವನ್ನು ಕಾಪಾಡಬೇಕು. ಸಮಾಲೋಚನೆ ಮಾಡುವಂತಿಲ್ಲ ಎಂಬಿತ್ಯಾದಿ ಸೂಚನೆಗಳನ್ನು ನೀಡಿದ್ದರೂ, ಆಡಳಿತ ವರ್ಗ ಕಾರಣವಿಲ್ಲದೇ ಮತ್ತೆ ಕಾರ್ಮಿಕರನ್ನು ಕೆಲಸದಿಂದ ವಜಾಗೊಳಿಸುತ್ತಿದೆ. ಕೆಲವು ಬದಲಿ ಕಾರ್ಮಿಕರಿಗೆ ಸುಖಾಸುಮ್ಮನೆ ಸಮಾಲೋಚನೆಯ ನೋಟಿಸ್ ನೀಡುತ್ತಿದ್ದಾರೆ ಎಂದು ಪ್ರತಿಭಟನಾಕಾರರು ದೂರಿದರು.

ನ್ಯಾಯಾಲಯದ ಆದೇಶದಂತೆ ಖಾಯಂ ಮಾತಿ ಮತ್ತು ವೇತನದ ವ್ಯತ್ಯಾಸವನ್ನು ಸರಿಸಮನಾಗಿ ನೀಡಬೇಕು. ಬದಲಿ ಕಾರ್ಮಿಕರಿಗೆ ಅನಗತ್ಯವಾಗಿ ನೀಡಿದಂತಹ ಸಮಾಲೋಚನೆಯ ನೋಟಿಸ್ ಅನ್ನು ವಾಪಸ್ ಪಡೆಯಬೇಕು. ಬದಲಿ ಕಾರ್ಮಿಕರಿಗೆ ಶೋಷಣೆ, ದೌರ್ಜನ್ಯ ಮತ್ತು ಬೆದರಿಕೆ ತಕ್ಷಣ ನಿಲ್ಲಬೇಕು. ಅಧಿಕ ಸಮಯ ಕಾರ್ಯನಿರ್ವಹಿಸಿದರೆ, ದುಪ್ಪಟ್ಟು ವೇತನ ನೀಡುವ ಮೂಲಕ ವಿವಿಧ ಬೇಡಿಕೆಗಳನ್ನು ಈಡೇರಿಸಬೇಕೆಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಸಂಘದ ಗೌರವಾಧ್ಯಕ್ಷ ಜಿ.ಇಂದ್ರೇಶ್, ಅಧ್ಯಕ್ಷ ಚಂದ್ರು, ಉಪಾಧ್ಯಕ್ಷರಾದ ಮಧು, ಮೋಹನ್‌ಕುಮಾರ್, ಪ್ರಧಾನ ಕಾರ್ಯದರ್ಶಿ ಭಾನುಚಂದ್ರ, ಸಹ ಕಾರ್ಯದರ್ಶಿ ಮಂಜಪ್ಪಗೌಡ, ಸಂಘಟನಾ ಕಾರ್ಯದರ್ಶಿ ವಿಜಯ್ ಕುಮಾರ್, ಖಜಾಂಜಿ ಶಿವಕುಮಾರ್, ಬಿಎಂಎಸ್‌ಸಿ ಭಾರತೀಯ ಮಜ್ದೂರ್ ಸಂಘ ರಾಜ್ಯ ಉಪಾಧ್ಯಕ್ಷರು ವಾಸುದೇವ್, ರಾಜ್ಯ ಕಾರ್ಯದರ್ಶಿ ಶಾಂತಕುಮಾರ್, ಮಜ್ದೂರ್ ಮೈಸೂರು ಜಿಲ್ಲಾ ಅಧ್ಯಕ್ಷ ಗುರುರಾಜ್, ರೈತ ಮುಖಂಡ ನಂಜುಂಡೇಗೌಡ ಸೇರಿದಂತೆ ಕಾರ್ಮಿಕರು ಪಾಲ್ಗೊಂಡಿದರು.

ದೇಶ - ವಿದೇಶ


ಪಾಕಿಸ್ತಾನದಲ್ಲಿ ಒಂದೇ ದಿನ 3 ಭೂಕಂಪನ



ಇಸ್ಲಾಮಾಬಾದ್: ಭಾರಿ ಮಳೆ, ಪ್ರವಾಹದಿಂದಾಗಿ ಸಾಕಷ್ಟು ನಲುಗಿ ಹೋಗಿರುವ ಪಾಕಿಸ್ತಾನಕ್ಕೆ ಇದೀಗ ಪ್ರಕೃತಿ ಮತ್ತೊಂದು ಶಾಕ್ ನೀಡಿದ್ದು, ಒಂದೇ ದಿನ ಸಂಭವಿಸಿದ 3 ಭೂಕಂಪನಗಳು ಮರ್ಮಾಘಾತ ನೀಡಿದೆ. ಕೇವಲ 24 ಗಂಟೆಗಳ ಅವಧಿಯಲ್ಲಿ ಪಾಕಿಸ್ತಾನದಲ್ಲಿ 3 ಭಾರಿ ಭೂಮಿ ಕಂಪಿಸಿದೆ ಎಂದು ರಾಷ್ಟ್ರೀಯ ಭೂಕಂಪಶಾಸ್ತ್ರ ಕೇಂದ್ರ ಮಾಹಿತಿ ನೀಡಿದೆ. ರಿಕ್ಟರ್ ಮಾಪಕದಲ್ಲಿ ಭೂಕಂಪನದ ತೀವ್ರತೆ 3.8 ಮತ್ತು 5.2ರಷ್ಟು ದಾಖಲಾಗಿದೆ. ಭೂಕಂಪದ ಕೇಂದ್ರಬಿಂದುವು ಪಾಕಿಸ್ತಾನದ ಮುಲ್ತಾನ್ ನಗರದಿಂದ ಪಶ್ಚಿಮಕ್ಕೆ 149 ಕಿಲೋಮೀಟರ್ ದೂರದಲ್ಲಿ, 30.25 ಉತ್ತರ ಅಕ್ಷಾಂಶ ಮತ್ತು 69.82 ಪೂರ್ವ ರೇಖಾಂಶದಲ್ಲಿ ಇದೆ ಎಂದು ಯುರೋ-ಮೆಡಿಟರೇನಿಯನ್ ಭೂಕಂಪನ ಕೇಂದ್ರವನ್ನು ಉಲ್ಲೇಖಿಸಿ ರಾಯಿಟರ್ಸ್ ವರದಿಯಾಗಿದೆ.

ಎನ್‌ಸಿಎಸ್ ಪ್ರಕಾರ, ಭೂಕಂಪವು ಭೂಮಿಯಿಂದ 150 ಕಿಲೋಮೀಟರ್ ಆಳದಲ್ಲಿ ಸಂಭವಿಸಿದೆ. ಆದರೆ, ಭೂಗರ್ಭ ಹವಾಮಾನ ಇಲಾಖೆಯು ಭೂಕಂಪದ ಆಳವನ್ನು 10 ಕಿಲೋಮೀಟರ್ ಎಂದು ದೃಢಪಡಿಸಿದೆ. ಈ ಭೂಕಂಪದಿಂದ ತಕ್ಷಣದ ಸಾವು-ನೋವುಗಳು ಅಥವಾ ಆಸ್ತಿಪಾಸ್ತಿಗೆ ಹಾನಿಯ ಬಗ್ಗೆ ಯಾವುದೇ ವರದಿಗಳು ಬಂದಿಲ್ಲ.

ಭಾರತ-ಪಾಕ್ ಗಡಿ ಬಳಿ ಅಪ್ರಾಪ್ತ ಬಾಲಕಿ, ಯುವಕನ ಶವ ಪತ್ತೆ



ಜೈಸಲ್ಮೇರ್: ರಾಜಸ್ಥಾನದ ಜೈಸಲ್ಮೇರ್ ಜಿಲ್ಲೆಯ ಭಾರತ-ಪಾಕಿಸ್ತಾನ ಗಡಿ ಬಳಿ ಅಪ್ರಾಪ್ತ ಬಾಲಕಿ ಮತ್ತು ಯುವಕನ ಭಾಗಶಃ ಕೊಳೆತ ಶವಗಳು ಪತ್ತೆಯಾಗಿವೆ ಎಂದು ಪೊಲೀಸರು ಭಾನುವಾರ ತಿಳಿಸಿದ್ದಾರೆ.

ಪೊಲೀಸರ ಪ್ರಕಾರ ಇಬ್ಬರೂ ಸುಮಾರು ಒಂದು ವಾರದ ಹಿಂದೆ ಸಾವನ್ನಪ್ಪಿದ್ದಾರೆ. ರವಿಕುಮಾರ್ (18) ಎಂಬ ವ್ಯಕ್ತಿಯ ಪಾಕಿಸ್ತಾನಿ ಸಿಮ್ ಕಾರ್ಡ್ ಮತ್ತು ಗುರುತಿನ ಚೀಟಿ ಸಹ ಸ್ಥಳದಿಂದ ವಶಪಡಿಸಿಕೊಳ್ಳಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಅಂತರರಾಷ್ಟ್ರೀಯ ಗಡಿಯಿಂದ ಭಾರತದ ಭೂಪ್ರದೇಶದಿಂದ ಸುಮಾರು 10-12 ಕಿಲೋಮೀಟರ್ ದೂರದಲ್ಲಿರುವ ಸಾಧೇವಾಲಾ ಪ್ರದೇಶದಲ್ಲಿ ಶವಗಳು ಪತ್ತೆಯಾಗಿವೆ ಎಂದು ಜೈಸಲ್ಮೇರ್ ಎಸ್ಪಿ ಸುಧೀರ್ ಚೌಧರಿ ತಿಳಿಸಿದ್ದಾರೆ. ಶವಗಳನ್ನು ರಾಮಗಢ ಸಮುದಾಯ ಆರೋಗ್ಯ ಕೇಂದ್ರದ ಶವಾಗಾರಕ್ಕೆ ಕಳುಹಿಸಲಾಗಿದ್ದು, ಮರಣೋತ್ತರ ಪರೀಕ್ಷೆಯು ಸಾವಿಗೆ ಕಾರಣವನ್ನು ನಿರ್ಧರಿಸುತ್ತದೆ. ಬಾಲಕಿ ಮತ್ತು ಯುವಕರು ಭಾರತೀಯರೇ ಅಥವಾ ಪಾಕಿಸ್ತಾನಿ ಪ್ರಜೆಗಳೇ ಎಂಬುದು ತಕ್ಷಣಕ್ಕೆ ಸ್ಪಷ್ಟವಾಗಿಲ್ಲ. ಈ ವಿಷಯವನ್ನು ಮತ್ತಷ್ಟು ತನಿಖೆ ಮಾಡಲಾಗುತ್ತಿದೆ.

ಹಮಾಸ್ ನಾಯಕ ಇಸ್ಸಾನನ್ನು ಹೊಡೆದುರುಳಿಸಿದ ಇಸ್ರೇಲ್ ಸೇನೆ



ಜೆರುಸೆಲಂ: ಅಕ್ಟೋಬರ್ 7, 2023 ರಂದು ಇಸ್ರೇಲ್ ನೆಲದಲ್ಲಿ ಮಾರಣಾಂತಿಕ ದಾಳಿ ನಡೆಸಿದ ಹಮಾಸ್ ನಾಯಕ ಇಸ್ಸಾನನ್ನು ಹೊಡೆದುರುಳಿಸಿರುವುದಾಗಿ ಇಸ್ರೇಲ್ ರಕ್ಷಣಾ ಪಡೆ ತಿಳಿಸಿದೆ.

ಈ ಕುರಿತು ಶನಿವಾರ ತಡರಾತ್ರಿ ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಇಸ್ರೇಲ್ ರಕ್ಷಣಾ ಪಡೆ, ಹಮಾಸ್‌ನ ಮಿಲಿಟರಿ ವಿಭಾಗದ ಸ್ಥಾಪಕರಲ್ಲಿ ಒಬ್ಬರಾದ ಹಕಿಮ್ ಮುಹಮ್ಮದ್ ಇಸ್ಸಾ ಅಲ್-ಇಸ್ಸಾ ಅವರನ್ನು ಹತ್ಯೆ ಮಾಡಲಾಗಿದೆ. ಇಸ್ಸಾ ನೇತೃತ್ವದಲ್ಲಿ ಹಮಾಸ್ ಪಡೆಗಳ ರಚನೆ, ತರಬೇತಿ ಮತ್ತು ಅಕ್ಟೋಬರ್ 7ರ ಮಾರಣಾಂತಿಕ ದಾಳಿ ನಡೆದಿತ್ತು. ಅವರು ಇಸ್ರೇಲಿಗಳ ವಿರುದ್ಧ ವೈಮಾನಿಕ ಮತ್ತು ನೌಕಾ ದಾಳಿಯನ್ನು ಮುನ್ನಡೆಸಿದ್ದರು ಎಂದು ಹೇಳಿದೆ.

ಈ ಮಧ್ಯೆ ಸುದ್ದಿಸಂಸ್ಥೆ ಅಲ್ ಜಜೀರಾ ಪ್ರಕಾರ, ಇಸ್ರೇಲ್ ಗಾಜಾ ಪಟ್ಟಿಯಾದ್ಯಂತ ತನ್ನ ದಾಳಿಯನ್ನು ಮುಂದುವರೆಸಿದೆ. ಇದರಲ್ಲಿ ಗಾಜಾ ನಗರದ ತುಫಾ ನೆರೆಹೊರೆಯಲ್ಲಿ ಒಂಬತ್ತು ಮಕ್ಕಳು ಸೇರಿದಂತೆ ಕನಿಷ್ಠ 20 ಜನರನ್ನು ಕೊಂದ ದಾಳಿಯೂ ಸೇರಿದೆ.

ಮಣ್ಣು ಕುಸಿದು ನಾಲ್ವರು ಸಾವು, ಐವರು ಸಿಲುಕಿರುವ ಶಂಕೆ



ಜೈಪುರ: ರಾಜಸ್ಥಾನದ ಭರತ್‌ಪುರದಲ್ಲಿ ಭಾನುವಾರ ಬೆಳಗ್ಗೆ ಪೈಪ್‌ಲೈನ್ ಅಗೆಯುವಾಗ ಮಣ್ಣು ಕುಸಿದು ನಾಲ್ವರು ಕಾರ್ಮಿಕರು ಮೃತಪಟ್ಟಿದ್ದು, ಐವರು ಅವಶೇಷಗಳಡಿ ಸಿಲುಕಿರುವ ಶಂಕೆ ವ್ಯಕ್ತವಾಗಿದೆ. ಜಂಗಿ ಕಾ ನಾಗ್ಲಾ ಗ್ರಾಮದ ಬಳಿ ಪೈಪ್‌ಲೈನ್ ಹಾಕಲು ಅಗೆದ 10 ಅಡಿ ಆಳದ ಕಂದಕವನ್ನು ಕೆಲವು ಕಾರ್ಮಿಕರು ತುಂಬುತ್ತಿದ್ದಾಗ ಮಣ್ಣು ಕುಸಿದಿದೆ ಎಂದು ಅಧಿಕಾರಿಗಳು ಹೇಳುತ್ತಾರೆ. 12 ಕಾರ್ಮಿಕರು ಮಣ್ಣಿನಡಿಯಲ್ಲಿ ಸಿಲುಕಿಕೊಂಡಿದ್ದಾರೆ. ಕಾರ್ಮಿಕರ ಕೂಗು, ಚೀರಾಟ ಕೇಳಿ ಇತರ ಕಾರ್ಮಿಕರು ಮತ್ತು ಯೋಜನಾ ಸಿಬ್ಬಂದಿ ಕೂಡಲೇ ರಕ್ಷಣಾ ಪ್ರಯತ್ನಗಳನ್ನು ಪ್ರಾರಂಭಿಸಿದರು. ಆದರೆ ಮಣ್ಣಿನ ಆಳ ಮತ್ತು ಭಾರದಿಂದಾಗಿ ರಕ್ಷಣಾ ಪ್ರಯತ್ನಗಳಿಗೆ ಅಡ್ಡಿಯುಂಟಾದವು. ಜಿಲ್ಲಾಡಳಿತ, ಪೊಲೀಸ್ ಮತ್ತು ವಿಪತ್ತು ನಿರ್ವಹಣಾ ತಂಡಗಳು ಎಚ್ಚರಿಕೆ ನೀಡಿದ ಕೂಡಲೇ ಸ್ಥಳಕ್ಕೆ ತಲುಪಿದವು. ರಕ್ಷಣಾ ತಂಡಗಳು ಮಣ್ಣು ತೆಗೆಯಲು ಮತ್ತು ಸಿಕ್ಕಿಬಿದ್ದ ಕಾರ್ಮಿಕರನ್ನು ಹೊರತರಲು ಮಣ್ಣು ತೆಗೆಯುವ ಯಂತ್ರಗಳನ್ನು ಬಳಸಿ, ಮಣ್ಣಿನಡಿಯಿಂದ 6 ಕಾರ್ಮಿಕರನ್ನು ಹೊರತೆಗೆಯುವಲ್ಲಿ ಯಶಸ್ವಿಯಾದರು. ಅವರಲ್ಲಿ ಇಬ್ಬರು ಮೃತಪಟ್ಟರು.

ಅರೇಂಜ್ಡ್ ಮ್ಯಾರೇಜ್ ಆಗಿ ಅಮೆರಿಕಕ್ಕೆ ಹೋಗಿದ್ದ ಮಹಿಳೆ ನಾಪತ್ತೆ



ವಾಷಿಂಗ್ಟನ್: ಯಾವುದೇ ಸಂಬಂಧಿಕರಿಲ್ಲ, ಇಂಗ್ಲಿಷ್ ಕೂಡ ಬರೋದಿಲ್ಲ, ಅರೇಂಜ್ಡ್ ಮ್ಯಾರೇಜ್ ಆಗಿ ಅಮೆರಿಕಕ್ಕೆ ಹೋಗಿದ್ದ ಮಹಿಳೆ ಏಕಾಏಕಿ ನಾಪತ್ತೆಯಾಗಿದ್ದಾರೆ ಎನ್ನುವ ಮಾಹಿತಿ ಲಭ್ಯವಾಗಿದೆ. 24 ವರ್ಷದ ಭಾರತೀಯ ಮಹಿಳೆ ಸಿಮ್ರನ್, ಜೂನ್ 20ರಂದು ಭಾರತದಿಂದ ನ್ಯೂಜೆರ್ಸಿಗೆ ಬಂದು ಸ್ವಲ್ಪ ಸಮಯದ ನಂತರ ಕೊನೆಯ ಬಾರಿಗೆ ಕಾಣಿಸಿಕೊಂಡಿದ್ದಾರೆ. ಲಿಂಡೆನ್ವೋಲ್ಡ್ ಪೊಲೀಸರು ಸಿಸಿಟಿವಿ ದೃಶ್ಯಗಳನ್ನು ಪರಿಶೀಲಿಸಿದ್ದಾರೆ. ವಿಡಿಯೋದಲ್ಲಿ ಅವರು ತಮ್ಮ ಮೊಬೈಲ್ ನೋಡುತ್ತಿರುವುದನ್ನು ಕಂಡುಬಂದಿದೆ. ಆದರೆ, ಯಾವುದೇ ಚಿಂತೆಯಾಗಲಿ ಅಥವಾ ಅವರು ತೊಂದರೆಯಲ್ಲಿರುವಂತೆ ಕಾಣಿಸಿರಲಿಲ್ಲ. ಸಿಮ್ರನ್‌ಗೆ ಅಮೆರಿಕದಲ್ಲಿ ಯಾವುದೇ ಸಂಬಂಧಿಕರಿಲ್ಲ. ಅವರಿಗೆ ಇಂಗ್ಲಿಷ್ ಕೂಡ ಬರುವುದಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ. ಇಲ್ಲಿವರೆಗೆ ಯಾವ ಕುಟುಂಬದ ಸದಸ್ಯರನ್ನೂ ಸಂಪರ್ಕಿಸಲು ಪೊಲೀಸರಿಗೆ ಸಾಧ್ಯವಾಗಿಲ್ಲ. ಆಕೆಯ ಇರುವಿಕೆ ಬಗ್ಗೆ ಮಾಹಿತಿ ಇರುವ ಯಾರಾದರೂ ಲಿಂಡೆನ್‌ವೋಲ್ಡ್ ಪೊಲೀಸ್ ಡಿಟೆಕ್ಟಿವ್ ಜೋ ಟೊಮಸೆಟ್ಟಿರನ್ನು ಸಂಪರ್ಕಿಸಲು ತಿಳಿಸಲಾಗಿದೆ.

ರಸ್ತೆಯ ಪಕ್ಕದ ತಿರುವಿನಲ್ಲೇ ಸರಣಿ ಅಪಘಾತ



ಕೊರಗಜ್ಜ ದೇವಾಲಯದ ಬಳಿ ತಿರುವಿನಲ್ಲಿ ಸರಣಿ ಅಪಘಾತಕ್ಕೆ ಈಡಾಗಿರುವ ಕಾರುಗಳು

ಮಡಿಕೇರಿ,ಜೂ.29– ವಿರಾಜಪೇಟೆ ಆರ್ಜಿ ಗ್ರಾಮದ ಕೇರಳ ಮತ್ತು ಕೊಡಗು ಸಂಪರ್ಕಿಸುವ ಮಲಬಾರ್ ಹೆದ್ದಾರಿಯಲ್ಲಿ ಶನಿವಾರ ರಾತ್ರಿ ಸರಣಿ ಅಪಘಾತಗಳು ಸಂಭವಿಸಿದ ಬಗ್ಗೆ ವರದಿಯಾಗಿದೆ.

ನೆನ್ನೆ ರಾತ್ರಿ ಮಲಬಾರ್ ರಸ್ತೆಯ ಕೊರಗಜ್ಜ ದೇವಾಲಯದ ಬಳಿಯ ತಿರುವಿನಲ್ಲಿ ಉದ್ಯಮಿ ಚುಪ್ಪ ನಾಗರಾಜ್ ಎಂಬವರ ಕಾರು ರಾತ್ರಿ 11 ಗಂಟೆಗೆ ನಿಯಂತ್ರಣ ಕಳೆದುಕೊಂಡು ಮರವೊಂದಕ್ಕೆ ಡಿಕ್ಕಿ ಹೊಡೆದಿದೆ. ಬೆಳಗ್ಗೆ 3 ಗಂಟೆ ವೇಳೆಗೆ ಅದೇ ರಸ್ತೆ ತಿರುವಿನಲ್ಲಿ ಸಾಲಾಗಿ ಬಂದ ಇತರ 3 ಕಾರು ಕೂಡ ನಿಯಂತ್ರಣ ಕಳೆದುಕೊಂಡು ಅಪಘಾತಕ್ಕೀಡಾಗಿವೆ. ಸರಣಿ ವಾಹನ ಅಪಘಾತದ ದೃಶ್ಯಗಳು ತಿರುವು ರಸ್ತೆಯ ಪಕ್ಕದಲ್ಲೇ ಇರುವ ಕಟ್ಟಡವೊಂದರ ಸಿ.ಸಿ. ಕ್ಯಾಮರಾದಲ್ಲಿ ದಾಖಲಾಗಿದ್ದು, ವಾಹನಗಳ ಅತಿ ವೇಗ ಅಪಘಾತಕ್ಕೆ ಕಾರಣವಾಗಿದೆ ಎಂಬ ಮಾತುಗಳು ಕೇಳಿ ಬರುತ್ತಿದೆ. ತಿರುವು ರಸ್ತೆಯಲ್ಲಿ ವಾಹನಗಳ ಇಂಧನ ಸೋರಿರುವುದು, ಲಘು ಪ್ರಮಾಣದ ಮಳೆ, ಮಂಜು ಮುಸುಕಿದ ವಾತಾವರಣವೂ ಅಪಘಾತಕ್ಕೆ ಕಾರಣವಾಗಿರಬಹುದು ಎಂಬ ಅಭಿಪ್ರಾಯ ವ್ಯಕ್ತವಾಗಿದೆ. ಅಪಘಾತದಲ್ಲಿ ಎಲ್ಲಾ 4 ಕಾರು ಜಖಂಗೊಂಡಿವೆ.

ಕೂಡುಮಂಗಳೂರು: ಮಳೆ–ಗಾಳಿಗೆ ಮನೆ ಗೋಡೆ ಕುಸಿದು ಇಬ್ಬರಿಗೆ ಗಾಯ



ಕುಶಾಲನಗರ, ಜೂ.29– ತಾಲೂಕಿನ ಕೂಡುಮಂಗಳೂರು ಗ್ರಾಮ ಪಂಚಾಯತಿ ವ್ಯಾಪ್ತಿಯ ವಿಜಯನಗರ ಜನತಾ ಕಾಲೋನಿಯಲ್ಲಿ ಮಳೆಗಾಳಿಗೆ ಕೇಶವಮೂರ್ತಿ, ಜಯ ಎಂಬುವರಿಗೆ ಸೇರಿದ ಮನೆಯ ಗೋಡೆ ಕುಸಿದು ನಿವಾಸಿಗಳಿಬ್ಬರು ಗಾಯಗೊಂಡಿರುವ ಘಟನೆಯೊಂದು ಜರುಗಿದೆ.

ಮನೆಯಲ್ಲಿದ್ದ ಕೇಶವಮೂರ್ತಿ, ಜಯ ಮೇಲೆ ಮನೆಯ ಮೇಲ್ಛಾವಣಿ ಕುಸಿತ ಗೊಂಡಿದೆ. ಇದರಿಂದ ಕೇಶವಮೂರ್ತಿ ಎಂಬುವರ ತಲೆಗೆ ಪೆಟ್ಟು ಬಿದ್ದು ಗಾಯ ಗೊಂಡಿದ್ದಾರೆ. ಜಯ ಸಣ್ಣಪುಟ್ಟ ಗಾಯಗೊಂಡು ಅಪಾಯದಿಂದ ಪಾರಾಗಿದ್ದಾರೆ.

ಕೇಶವಮೂರ್ತಿ ಅವರನ್ನು ಮಡಿಕೇರಿಯ ಜಿಲ್ಲಾ ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲಿಸ ಲಾಗಿದೆ. ಸ್ಥಳಕ್ಕೆ ತಾಪಂ ಸಿಓ ಪರಮೇಶ್ವರ್, ಕೂಡುಮಂಗಳೂರು ಗ್ರಾಪಂ ಅಧ್ಯಕ್ಷ ಭಾಸ್ಕರ್ ನಾಯಕ್ ಹಾಗೂ ಪಿಡಿಓ ಸಂತೋಷ್ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಕೂಡಿಗೆ: ಕೋಳಿ ಕೊಳ್ಳಲು ನೂಕುನುಗ್ಗಲು

ಕುಶಾಲನಗರ: ಕೂಡಿಗೆ ಕೃಷಿಫಾರಂ ಕೋಳಿ ಸಾಕಾಣಿಕೆ ಕೇಂದ್ರದಲ್ಲಿ ಭಾನುವಾರ ರೈತರಿಗೆ ರಿಯಾಯಿತಿ ದರದಲ್ಲಿ ಗಿರಿರಾಜ ಕೋಳಿಗಳನ್ನು ವಿತರಣೆ ಮಾಡಲಾಯಿತು.

ಪ್ರತಿ ವರ್ಷದಂತೆ ಈ ಬಾರಿಯು ಗಿರಿರಾಜ ಕೋಳಿಗಳನ್ನು ವಿತರಿಸಲು ಮುಖ್ಯ ಪಶುವೈದ್ಯಾಧಿಕಾರಿ ಡಾ.ಕೆ.ನಾಗರಾಜು ವ್ಯವಸ್ಥೆ ಮಾಡಿದ್ದರು. ಕೋಳಿಗೆ 500 ರೂ.ಗಳಂತೆ ವಿತರಿಸಲು ಕ್ರಮ ಕೈಗೊಂಡಿದ್ದರು. ಆದರೆ ನಿರೀಕ್ಷೆಗಿಂತಲು ಹೆಚ್ಚಿನ ರೈತರು ಆಗಮಿಸಿದ್ದರು. ಕೂಡಿಗೆ ಸೇರಿದಂತೆ ತಾಲೂಕಿನ ವಿವಿಧ ಗ್ರಾಮಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿದ್ದ ಜನರು ಕೋಳಿ ಕೊಳ್ಳಲು ಪೈಪೋಟಿ ನಡೆಸಿದ ಹಿನ್ನೆಲೆಯಲ್ಲಿ ನೂಕುನುಗ್ಗಲು ಉಂಟಾಯಿತು.

ಕಾಲೇಜು ಕ್ಯಾಂಪಸ್‌ಗೆ ಪಂದ್ಯಂಡ ಬೆಳ್ಳಿಯಪ್ಪ ಹೆಸರಿಡಲು ಆಗ್ರಹ




ಕಾರ್ಯಪ್ಪ ಕಾಲೇಜು ಕ್ಯಾಂಪಸ್‌ಗೆ ಪಂದ್ಯಂಡ ಬೆಳ್ಳಿಯಪ್ಪ ಹೆಸರಿಡಲು ಆಗ್ರಹಿಸಿ ಕುಲಪತಿಗಳಿಗೆ ಮನವಿ ಸಲ್ಲಿಸಿದರು.

ಮಡಿಕೇರಿ,ಜೂ.29– ನಗರದ ಪ್ರತಿಷ್ಠಿತ ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಕಾಲೇಜು ಕ್ಯಾಂಪಸ್‌ಗೆ ಕೊಡಗಿನ ಗಾಂಧಿ ಎಂದೇ ಪ್ರಖ್ಯಾತರಾಗಿದ್ದ ಹಾಗೂ ಕಾಲೇಜು ಸ್ಥಾಪನೆಯ ರೂವಾರಿಯೂ ಆಗಿದ್ದ 'ಪಂದ್ಯಂಡ ಬೆಳ್ಳಿಯಪ್ಪ' ಹೆಸರಿಡ ಬೇಕೆಂದು ಅಲ್ಲಾರಂಡ ರಂಗ ಚಾವಡಿಯ ಅಧ್ಯಕ್ಷ ಅಲ್ಲಾರಂಡ ವಿಠಲ ನಂಜಪ್ಪ ಆಗ್ರಹಿಸಿದ್ದಾರೆ.

1949ರಲ್ಲಿ ಆರಂಭಗೊಂಡ ಈಗಿನ ಫೀ. ಮಾ.ಕೆ.ಎಂ.ಕಾರ್ಯಪ್ಪ ಕಾಲೇಜಿಗೆ ವೀರ ಸೇನಾನಿಯ ಹೆಸರಿರುವುದಕ್ಕೆ ತಮ್ಮ ಯಾವುದೇ ಆಕ್ಷೇಪಗಳಿಲ್ಲ. ಬದಲಾಗಿ ಕಾಲೇಜು ಕ್ಯಾಂಪಸ್‌ಗೆ ಪಂದ್ಯಂಡ ಬೆಳ್ಳಿ ಯಪ್ಪ ಅವರ ಹೆಸರನ್ನಿಡುವುದು ಹೆಚ್ಚು ಅರ್ಥಪೂರ್ಣ ಎನಿಸಿ ಕೊಳ್ಳುತ್ತದೆ. ಈ ಹಿನ್ನೆಲೆಯಲ್ಲಿ ಕೊಡಗು ವಿಶ್ವವಿದ್ಯಾಲಯದ ಕುಲಪತಿ ಡಾ.ಅಶೋಕ ಸಂಗಪ್ಪ ಆಲೂರರಿಗೂ ಮನವಿಯನ್ನು ಸಲ್ಲಿಸಿರುವುದಾಗಿ ಸುದ್ದಿಗೋಷ್ಠಿಯಲ್ಲಿ ಒತ್ತಾಯಿಸಿದರು.

ಕೊಡಗಿಗೆ ಮಹಾತ್ಮ ಗಾಂಧಿ ಅವರನ್ನು ಬರುವಂತೆ ಮಾಡು ವಲ್ಲಿಯೂ ಪಂದ್ಯಂಡ ಬೆಳ್ಳಿಯಪ್ಪ ಅವರ ಪರಿಶ್ರಮವಿತ್ತು ಎಂದು ತಿಳಿಸಿದ ಅಲ್ಲಾರಂಡ ವಿಠಲ ನಂಜಪ್ಪ, ಇಂತಹ ಮಹಾನ್ ಚೇತನ ಪಂದ್ಯಂಡ ಬೆಳ್ಳಿಯಪ್ಪ ಹೆಸರನ್ನು ಫೀ.ಮಾ.ಕೆ.ಎಂ. ಕಾರ್ಯಪ್ಪ ಕಾಲೇಜು ಕ್ಯಾಂಪಸ್‌ಗೆ ಇಡಬೇಕು ಮತ್ತು ಪ್ರತಿಮೆಯನ್ನು ಸ್ಥಾಪಿಸಿ, ಅವರ ಮಾಹಿತಿಯನ್ನು ಯುವ ಸಮೂಹಕ್ಕೆ ತಲುಪಿಸುವ ಕಾರ್ಯವಾಗಬೇಕೆಂದು ತಿಳಿಸಿದರು.

ಬಾರಿಯಂಡ ಜೋಯಪ್ಪರಿಗೆ ಕೆಂಪೇಗೌಡ ಪ್ರಶಸ್ತಿ ಪ್ರದಾನ



ಕರುನಾಡ ಪ್ರಭು ಕೆಂಪೇಗೌಡ ಪ್ರಶಸ್ತಿ ಪುರಸ್ಕೃತ ಬಾರಿಯಂಡ ಜೋಯಪ್ಪ.

ಮಡಿಕೇರಿ: ನಾಡಪ್ರಭು ಕೆಂಪೇಗೌಡ 516ನೇ ಜನ್ಮ ದಿನೋತ್ಸವದಲ್ಲಿ ಸಾಹಿತ್ಯ ಕ್ಷೇತ್ರದ ಸಾಧನೆಗೆ ಬಾರಿಯಂಡ ಜೋಯಪ್ಪ ಅವರನ್ನು ನಾಡಪ್ರಭು ಕೆಂಪೇಗೌಡ ಪ್ರತಿಷ್ಠಾನದ ರಾಜ್ಯಮಟ್ಟದ 'ಕರುನಾಡ ಪ್ರಭು ಕೆಂಪೇಗೌಡ' ಪ್ರಶಸ್ತಿ ನೀಡಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಬೆಂಗಳೂರಿನ ಅರಮನೆ ಮೈದಾನದಲ್ಲಿ ನಡೆದ ಸಮಾ ರಂಭದಲ್ಲಿ ಪ್ರಶಸ್ತಿ ಸ್ಮರಣಿಕೆಯೊಂದಿಗೆ ಬೆಳ್ಳಿ ಪದಕ ಮತ್ತು 25ಸಾವಿರ ನಗದನ್ನು ನೀಡಿ ಗೌರವಿಸಿದರು.

ಮಾಜಿ ಉಪಮುಖ್ಯಮಂತ್ರಿ ಡಾ. ಸಿ.ಎನ್. ಅಶ್ವಥ್ ನಾರಾಯಣ್, ಪ್ರತಿಷ್ಠಾನದ ಅಧ್ಯಕ್ಷ ಪ್ರೊ.ಎಂ.ಕೃಷ್ಣೇಗೌಡ, ಆದಿಚುಂಚನಗಿರಿ ಮಹಾಸಂಸ್ಥಾನದ ಪೀಠಾಧ್ಯಕ್ಷರಾದ ಶ್ರೀ ಡಾ. ನಿರ್ಮಲಾನಂದನಾಥ ಸ್ವಾಮೀಜಿ, ವಿಪಕ್ಷ ನಾಯಕ ಆರ್.ಅಶೋಕ್, ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ, ಮಾಜಿ ಸ್ಪೀಕರ್ ಕೆ.ಜಿ.ಬೋಪಯ್ಯ, ಮಾಜಿ ಮುಖ್ಯ ಮಂತ್ರಿ ಡಿ.ವಿ. ಸದಾನಂದ ಗೌಡ ಹಾಗೂ ಇನ್ನಿತರ ಪ್ರಮುಖರು ಉಪಸ್ಥಿತರಿದ್ದರು.

ಜನಾಕರ್ಷಣೆಯಾಗಿರುವ ಕುಶಾಲನಗರದ ತಾವರೆಕೆರೆ



ಮಡಿಕೇರಿ: ಕುಶಾಲನಗರದ ತಾವರೆಕೆರೆ ಇದೀಗ ಜನಾಕರ್ಷಣೆ ಪಡೆದುಕೊಂಡಿದ್ದು, ದಾರಿಹೋಕರು, ಪ್ರಯಾಣಿಕರು, ಪ್ರವಾಸಿಗ ರನ್ನು ತನ್ನೆಡೆಗೆ ಸೆಳೆಯುತ್ತಿದೆ. ಹೆದ್ದಾರಿ ಬದಿಯಲ್ಲಿ ಕಾಡಪೊದೆಗಳ ನಡುವೆ ಮೌನ ವಾಗಿದ್ದ ಕೆರೆ ದಿಢೀರ್ ತನ್ನ ಸೌಂದರ್ಯ ಹೆಚ್ಚಿಸಿಕೊಂಡಿದೆ. ಸಾಧಾರಣವಾಗಿ ತಾವರೆ ಹೂವುಗಳಿಂದ ಕಂಗೊಳಿಸುತ್ತಿದ್ದ ಕೆರೆಯ ತುಂಬಾ ಇದೀಗ ಕಡು ನೀಲಿ ಬಣ್ಣದ ಹೂವುಗಳು ಚಿಗುರೊಡೆದು ಕೆರೆಯ ತುಂಬಾ ಆವರಿಸಿಕೊಂಡ ದೃಶ್ಯ ನಯನ ಮನೋಹರವಾಗಿದೆ.

ಇದು ಎಲ್ಲರ ಕಣ್ಮನ ಸೆಳೆಯುತ್ತಿದ್ದು, ಇದರ ಸೌಂದರ್ಯವನ್ನು ಕಣ್ತುಂಬಿಕೊಳ್ಳಲು ಹೆದ್ದಾರಿ ಬದಿಯಲ್ಲಿ ಜನಸಂದಣಿ ಕಂಡು ಬರುತ್ತಿದೆ. ಮಾರ್ಗದ ಬದಿಯಲ್ಲಿ ವಾಹನ ಗಳನ್ನು ನಿಯಂತ್ರಿಸಲು ಪೊಲೀಸರು ಕೂಡ ಸ್ಥಳದಲ್ಲಿ ಕಾರ್ಯನಿರ್ವಹಿಸುವ ಸ್ಥಿತಿ ನಿರ್ಮಾಣ ಗೊಂಡಿದೆ. ಇದೇ ಮೊದಲ ಬಾರಿಗೆ ತಾವರೆ ಕೆರೆಯಲ್ಲಿ ಇಂತಹ ಹೂವುಗಳು ಅರಳಿದ್ದು ಎಲ್ಲರನ್ನು ಬೆರಗುಗೊಳಿಸುತ್ತಿದೆ.

ಬೀಜದ ಭತ್ತವನ್ನು ತುಳಿದು ನಾಶಪಡಿಸಿದ ಕಾಡಾನೆ

ಮಡಿಕೇರಿ: ಭತ್ತದ ಸಸಿ ಮಡಿಸಿದ್ದ ಮಾಡಲು ಶೇಖರಿಸಿದ್ದ ಬೀಜದ ಭತ್ತವನ್ನು ಕಾಡಾನೆಗಳು ತಿಂದು ತುಳಿದು ನಾಶಪಡಿಸಿದ ಘಟನೆ ಗೋಣಿಕೊಪ್ಪ ಸಮೀಪದ ಹೊಸೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕಳತ್ಮಾಡು ಗ್ರಾಮದಲ್ಲಿ ನಿನ್ನೆ ರಾತ್ರಿ ನಡೆ ದಿದೆ. ಕೊಲ್ಲೀರ ಉಮೇಶ್‌ಗೆ ಸೇರಿದ ಗದ್ದೆಗೆ ದಾಳಿ ಇಟ್ಟ ಕಾಡಾನೆಗಳು ಭತ್ತ ತುಂಬಿದ್ದ ಮೂಟೆಗಳನ್ನು ತುಳಿದು ಚೆಲ್ಲಾಡಿವೆ. ಭತ್ತದ ಕೃಷಿಗೆ ತಯಾರಿ ನಡೆಸಿದ್ದ ಕೃಷಿಕನಿಗೆ ಲಕ್ಷಾಂತರ ರೂ. ನಷ್ಟವಾಗಿದೆ. ಅರಣ್ಯ ಇಲಾಖಾಧಿಕಾರಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ಸೂಕ್ತ ಪರಿಹಾರ ನೀಡುವಂತೆ ವಿಜು ಸುಬ್ರಮಣಿ ಒತ್ತಾಯಿಸಿದ್ದಾರೆ.

ಜಮೀರ್ ಅಹಮದ್‌ಗೆ ಒಲಿದ ನಾಡೋಜ ಕರೀಂಖಾನ್ ಪ್ರಶಸ್ತಿ



ಬೆಂಗಳೂರಿನ ಕನ್ನಡ ಜಾನಪದ ಪರಿಷತ್ ಕೊಡಗಿನ ಡಾ. ಜಮೀರ್ ಅಹಮದ್ ಅವರಿಗೆ ನಾಡೋಜ ಕರೀಂ ಖಾನ್ ಪ್ರಶಸ್ತಿ ನೀಡಿ ಗೌರವಿಸಿತು

ಮಡಿಕೇರಿ: ಮೂಲತಃ ಇಸ್ಲಾಂ ಧರ್ಮೀಯರಾದರೂ ಇವರೊಬ್ಬ ಕನ್ನಡ ಸಾಹಿತ್ಯ ಪ್ರೇಮಿ. ಕನ್ನಡವನ್ನೇ ತಮ್ಮ ಉಸಿರೆಂಬಂತೆ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುತ್ತಿರುವ ಇವರು ಈ ಬಾರಿಯ ನಾಡೋಜ ಕರೀಂ ಖಾನ್ ಪ್ರಶಸ್ತಿಯ ಪುರಸ್ಕೃತರಾಗಿದ್ದಾರೆ.

ಕೊಡಗು ವಿಶ್ವವಿದ್ಯಾಲಯದಲ್ಲಿ ಕನ್ನಡ ಉಪನ್ಯಾಸಕರಾಗಿರುವ ಡಾ. ಜಮೀರ್ ಅಹಮದ್ ಅವರಿಗೆ ಕರ್ನಾಟಕ ಜಾನಪದ ಕಲೆ, ಸಾಹಿತ್ಯದ ಸಂರಕ್ಷಣೆಗಾಗಿ ಸಲ್ಲಿಸಿದ ಅಮೂಲ್ಯ ಸೇವೆಯನ್ನು ಗುರುತಿಸಿ ಬುಧವಾರ ಬೆಂಗಳೂರಿನ ಕನ್ನಡ ಜಾನಪದ ಪರಿಷತ್ ಏರ್ಪಡಿಸಿದ್ದ ಪ್ರಥಮ ಕನ್ನಡ ಜಾನಪದ ಸಮ್ಮೇಳನದಲ್ಲಿ ಗೌರವಿಸಲಾಯಿತು.

ಕನ್ನಡ ಸಾಹಿತ್ಯ ವಿದ್ಯಾರ್ಥಿಯಾಗಿರುವ ಜಮೀರ್ ಅಹಮದ್ ಉಪನ್ಯಾಸಕರಾಗಿ, ಪತ್ರಕರ್ತರಾಗಿ ಸಾಮಾಜಿಕ ಮತ್ತು ಶೈಕ್ಷಣಿಕ ಜೀವನದಲ್ಲಿ ತಮ್ಮನ್ನು ತಾವು ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ. ಆರ್ಥಿಕವಾಗಿ ದುರ್ಬಲವಾಗಿರುವ ರೋಗಿಗಳಿಗೆ ಅದರಲ್ಲೂ ಕಿಡ್ನಿ ವೈಫಲ್ಯದಿಂದ ಬಳಲುತ್ತಿರುವ ರೋಗಿಗಳಿಗೆ ಸಾಮಾಜಿಕ ಜಾಲತಾಣದ ಮತ್ತು ಮಾಧ್ಯಮದ ಸಹಾಯದೊಂದಿಗೆ ಆರ್ಥಿಕ ಸಹಕಾರ ಕೊಡಿಸುವ ಮೂಲಕ ಮಾನವತಾ ಪ್ರೀತಿಗೆ ಪಾತ್ರರಾಗಿದ್ದಾರೆ..

ಕೊಡಗು ಕನ್ನಡ ಸಾಹಿತ್ಯ ಪರಿಷತ್ತು ರಾಜ್ಯೋತ್ಸವದಲ್ಲಿ ಉತ್ತಮ ಶಿಕ್ಷಕ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಸ್ನೇಹ ಸಿರಿ ಬಳಗ(ರಿ) ಶಿಕ್ಷಕ ಸಿರಿ ಪ್ರಶಸ್ತಿಯನ್ನು ನೀಡಿದೆ ಸಾಮಾಜಿಕ ಕ್ಷೇತ್ರದಲ್ಲಿ ಸಲ್ಲಿಸುತ್ತಿರುವ ನಿರಂತರ ಸೇವೆಯನ್ನು ಗುರುತಿಸಿ ಹಾಸನ ಜಿಲ್ಲಾಡಳಿತ ವತಿಯಿಂದ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ಕುಶಾಲನಗರ ತಾಲೂಕು ಆಡಳಿತ ರಾಷ್ಟ್ರೀಯ ಹಬ್ಬಗಳ ಆಚರಣೆಯ ಸಮಿತಿಯಿಂದ ಗೌರವ ಪುರಸ್ಕಾರವನ್ನು ಪಡೆದುಕೊಂಡಿದ್ದಾರೆ.

ಕರ್ನಾಟಕ ತಂಡಕ್ಕೆ ಕೊಡಗಿನ ಹಾಕಿ ಕ್ರೀಡಾಪಟುಗಳು



ಕರ್ನಾಟಕ ಹಾಕಿ ಇಂಡಿಯಾ ಸಬ್ ಜೂನಿಯರ್ ಮಹಿಳಾ ತಂಡ

ನಾಪೋಕು: ರಾಂಚಿಯಲ್ಲಿ ನಡೆಯಲಿರುವ ಹಾಕಿ ಇಂಡಿಯಾ ಸಬ್ ಜೂನಿಯರ್ ಮಹಿಳಾ ವಿಭಾಗದ ರಾಷ್ಟ್ರೀಯ ಚಾಂಪಿಯನ್ ಶಿಪ್ ಪಂದ್ಯಾವಳಿಗೆ ಕೊಡಗಿನ 8 ಮಂದಿ ಹಾಕಿ ಆಟಗಾರರನ್ನು, ಕರ್ನಾಟಕ ತಂಡದಲ್ಲಿ ಸೇರ್ಪಡೆಗೊಳಿಸಲಾಗಿದೆ.

15ನೇ ಹಾಕಿ ಇಂಡಿಯಾ ಸಬ್ ಜೂನಿಯರ್ ಮಹಿಳಾ ವಿಭಾಗದ ರಾಷ್ಟ್ರೀಯ ಚಾಂಪಿಯನ್ ಶಿಪ್ 2025 ಪಂದ್ಯಾಟವು ಜು.3ರಿಂದ 14ರವರೆಗೆ ರಾಂಚಿಯಲ್ಲಿ ನಡೆಯಲಿದ್ದು, ಕರ್ನಾಟಕ ತಂಡದ ನಾಯಕಿಯಾಗಿ ಕೊಡಗಿನ ಅಚ್ಚಪಂಡ ಪರ್ಲಿನ್ ಪೊನ್ನಮ್ಮ ಆಯ್ಕೆಯಾಗಿದ್ದು, ನೀಲಮ್ಮ ಎನ್.ಆರ್, ಪೂರ್ವಿ ಪೂವಮ್ಮ ಕೆ.ಎ, ಗ್ರೀಷ್ಮ ಪೊನ್ನಪ್ಪ ಪಿ, ಧನ್ಯ.ಕಾವೇರಮ್ಮ ಸಿ.ಯು, ವಿದ್ಯಾ ಪೊನ್ನಮ್ಮ ಎಂ.ಯು, ತ್ರಿಷ ದೇಚಮ್ಮಸಿ.ಎಂ(ಗೋಲ್ ಕೀಪರ್), ಹಾಗೂ ಬೋಳ್ಳಮ್ಮ ಬಿ.ಎಂ, ತಂಡದ ಪಟುವಾಗಿದ್ದಾರೆ.

ವಸತಿ ಶಾಲೆಗೆ ಸಚಿವ ಮಹದೇವಪ್ಪ ದಿಢೀರ್ ಭೇಟಿ



ಬೇಗೂರು ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗೆ ಸಚಿವ ಡಾ.ಎಚ್.ಸಿ.ಮಹದೇವಪ್ಪ ಭೇಟಿ ನೀಡಿ ಮಕ್ಕಳೊಂದಿಗೆ ಸಂವಾದ ನಡೆಸಿದರು.

ಚಾಮರಾಜನಗರ/ಬೇಗೂರು, ಜೂ.29– ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ. ಹೆಚ್.ಸಿ. ಮಹದೇವಪ್ಪ ಬೇಗೂರಿನ ಕಿತ್ತೂರು ರಾಣಿ ಚನ್ನಮ್ಮ ವಸತಿ ಶಾಲೆಗೆ ಇಂದು ಅನಿರೀಕ್ಷಿತವಾಗಿ ಭೇಟಿ ನೀಡಿದ್ದರು.

ವಿದ್ಯಾರ್ಥಿನಿಲಯಕ್ಕೆ ತೆರಳಿದ ಸಚಿವರು, ವಿದ್ಯಾರ್ಥಿಗಳ ವಾಸದ ಕೊಠಡಿ, ಶೌಚಾಲಯ ವೀಕ್ಷಿಸಿ ನೈರ್ಮಲ್ಯ ಪರಿಶೀಲಿಸಿದ ನಂತರ ಶಾಲೆಯಲ್ಲಿ ದೊರಕುತ್ತಿರುವ ಸೌಲಭ್ಯಗಳು ಹಾಗೂ ಬೋಧನೆ ಕುರಿತು ವಿದ್ಯಾರ್ಥಿಗಳೊಂದಿಗೆ ಚರ್ಚಿಸಿ, ಶಿಕ್ಷಕರು ಉತ್ತಮವಾಗಿ ಕಲಿಸುತ್ತಿದ್ದಾರೆಯೇ? ರುಚಿಕರವಾದ ತಿಂಡಿ, ಊಟ ನೀಡುತ್ತಿದ್ದಾರಾ? ವಾಸದ ಕೊಠಡಿಯಲ್ಲಿ ಆರಾಮದಾಯಕವಾಗಿ ಇರಬಹುದಾ? ಶೌಚಾಲಯವು ಯಾವಾಗಲೂ ಶುಚಿತ್ವವಾಗಿರುತ್ತದಾ? ಏನಾದರೂ ಸಮಸ್ಯೆ ಇದೆಯಾ ಎಂದು ಮಕ್ಕಳನ್ನು ಪ್ರಶ್ನಿಸಿ, ಪ್ರತಿಕ್ರಿಯೆ ಪಡೆದರು. ಬಳಿಕ ಭೋಜನಾಲಯಕ್ಕೆ ಭೇಟಿ ನೀಡಿ ದಾಸ್ತಾನು ಕೊಠಡಿ ಪರಿಶೀಲಿಸಿದರು.

ಚಹಾ ಸವಿಯುತ್ತಾ ಮಾತನಾಡಿ, ಗ್ರಾಮೀಣ ಭಾಗದ ಅನೇಕ ಮಕ್ಕಳು ಕಲಿಯಲು ಇಲ್ಲಿಗೆ ಬರುತ್ತಾರೆ. ನಿಲಯಪಾಲಕರು ಪ್ರೀತಿಯಿಂದ ನೋಡಿಕೊಳ್ಳಬೇಕು. ಶಿಕ್ಷಕರು ತಮಗೆ ನೀಡಿರುವ ವಸತಿ ಗೃಹದಲ್ಲಿ ಕಡ್ಡಾಯವಾಗಿ ಇರಬೇಕು. ಮಕ್ಕಳ ಆರೋಗ್ಯದಲ್ಲಿ ಜಾಗರೂಕತೆ ವಹಿಸಬೇಕು ಎಂದು ಸೂಚಿಸಿದರು.

ಶಿಕ್ಷಕರು ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡಬೇಕು. ಪಠ್ಯೇತರ ಚಟುವಟಿಕೆಯಲ್ಲಿ ಮಕ್ಕಳು ಹೆಚ್ಚಾಗಿ ಭಾಗ ವಹಿಸುವಂತೆ ಪ್ರೇರಿಪಿಸಿ, ಮೆನು ಚಾರ್ಟ್ ಪ್ರಕಾರವೇ ಮಕ್ಕಳಿಗೆ ಊಟ, ತಿಂಡಿ ವಿತರಿಸಬೇಕು. ಒಟ್ಟಾರೆ ಮನೆಗಿಂತಲೂ ವಸತಿ ಶಾಲೆಯಲ್ಲಿ ಉತ್ತಮ ವಾತಾವರಣ ನಿರ್ಮಿಸಬೇಕೆಂದು ಸಲಹೆ ನೀಡಿದರು.

ವಸತಿ ಶಾಲೆಯ ಭೋಜನಾಲಯ, ಶೌಚಾಲಯಗಳು ಹಾಗೂ ಆವರಣವು ನೈರ್ಮಲ್ಯದಿಂದ ಕೂಡಿರಬೇಕು. ಪ್ರತಿದಿನ ಮುಂಜಾನೆ ಯೋಗ, ವ್ಯಾಯಾಮ, ಧ್ಯಾನವನ್ನು ಅಭ್ಯಾಸ ಮಾಡಿಸಬೇಕು. ಮಕ್ಕಳಿಗೆ ಆರೋಗ್ಯ ಕುರಿತು ಅವರಲ್ಲಿ ಜಾಗೃತಿ ಮೂಡಿಸಬೇಕು ಎಂದು ಸಂಬಂಧಿಸಿದವರಿಗೆ ತಿಳಿಸಿದರು. ಸಚಿವರ ವಿಶೇಷ ಕರ್ತವ್ಯಾಧಿಕಾರಿಗಳಾದ ಗೋಪಾಲ್ ಹೊರೆಯಾಲ, ರವಿಕುಮಾರ್, ಉಪವಿಭಾಗಧಿಕಾರಿ ಮಹೇಶ್, ಆಪ್ತ ಸಹಾಯಕರಾದ ಶ್ರೀನಿವಾಸ್ ಸೇರಿದಂತೆ ಇತರರು ಈ ಸಂದರ್ಭದಲ್ಲಿ ಇದ್ದರು.

ಹಿರಿಯ ವಿದ್ಯಾರ್ಥಿಗಳಿಂದ ಗುರುವಂದನೆ



ತೆರಕಣಾಂಬಿಯ ಜೆಎಸ್‌ಎಸ್ ಪ್ರೌಢಶಾಲೆಯಲ್ಲಿ ಗುರುವಂದನೆ ಕಾರ್ಯಕ್ರಮದಲ್ಲಿ ಶಿಕ್ಷಕರನ್ನು ಗೌರವಿಸಲಾಯಿತು

ಗುಂಡ್ಲುಪೇಟೆ, ಜೂ–29 (ಸೋಮ್.ಜಿ)– ತಾಲೂಕಿನ ತೆರಕಣಾಂಬಿ ಗ್ರಾಮದ ಜೆ.ಎಸ್.ಎಸ್ ಪ್ರೌಢಶಾಲೆಯಲ್ಲಿ ಹಿರಿಯ ವಿದ್ಯಾರ್ಥಿಗಳಿಂದ ಗುರುವಂದನಾ ಕಾರ್ಯಕ್ರಮ ನಡೆಯಿತು.

ಶಾಲೆಯಲ್ಲಿ ವ್ಯಾಸಂಗ ಮಾಡಿದ ವಿದ್ಯಾರ್ಥಿಗಳೆಲ್ಲರೂ ಸೇರಿ ಆಗ ಕರ್ತವ್ಯ ನಿರ್ವಹಿಸುತ್ತಿದ್ದ ತಮಗೆ ವಿದ್ಯೆ ಕಲಿಸಿದ ಗುರುಗಳಿಗೆ ತಾವು ವ್ಯಾಸಂಗ ಮಾಡಿದ 25ನೇ ವರ್ಷದ ಅಂಗವಾಗಿ ಆತ್ಮೀಯವಾಗಿ ಗೌರವಿಸಿ ನೆನಪಿನ ಕಾಣಿಕೆ ನೀಡಿ ಸನ್ಮಾನಿಸಿದರು.

ಶಿಕ್ಷಕರಾದ ಪುಟ್ಟಲಿಂಗಪ್ಪ, ನಾಗರಾಜು, ಸುರೇಶ್, ಸಿದ್ದಪ್ಪ, ಪುಟ್ಟಸ್ವಾಮಿ, ಶಿವಶಂಕರ್ ಮತ್ತು ಸುಧಾ ಅವರನ್ನು ಹಿರಿಯ ವಿದ್ಯಾರ್ಥಿಗಳು ಸನ್ಮಾನಿಸಿದರು. ಅಧ್ಯಕ್ಷತೆ ವಹಿಸಿದ್ದ ಮುಖ್ಯ ಶಿಕ್ಷಕಿ ಕಮಲಮ್ಮ ಮಾತನಾಡಿ, ಈ ಶಾಲೆಯು ಪ್ರಾರಂಭಗೊಂಡು 60 ವರ್ಷಗಳಾಗಿದ್ದು ಗ್ರಾಮಾಂತರ ಪ್ರದೇಶದಲ್ಲಿ ಉತ್ತಮ ಗುಣಮಟ್ಟದ ಶಿಕ್ಷಣವನ್ನು ನೀಡುವುದರೊಂದಿಗೆ ಹಲವಾರು ವಿದ್ಯಾರ್ಥಿಗಳ ಬಾಳಿಗೆ ಬೆಳಕಾಗಿದೆ. ಈ ನಿಟ್ಟಿನಲ್ಲಿ ಶಾಲೆಯು ಶ್ರೀ ರಾಜೇಂದ್ರ ಮಹಾಸ್ವಾಮಿಗಳ ಆಶಯದಂತೆ ಹಾಗೂ ಸುತ್ತೂರು ಮಠಾಧ್ಯಕ್ಷ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳ ಮಾರ್ಗದರ್ಶನದಲ್ಲಿ ಉತ್ತಮವಾದ ಶಿಕ್ಷಣವನ್ನು ನೀಡುತ್ತಿದೆ ಎಂದರು.

ಹಿರಿಯ ವಿದ್ಯಾರ್ಥಿಗಳು ತಮ್ಮ ನೆಚ್ಚಿನ ಗುರುಗಳನ್ನು ನೆನಪಿಸಿಕೊಂಡು ಅವರಿಗೆ ಗುರುವಂದನೆಯ ಮೂಲಕ ಕೃತಜ್ಞತೆಗಳನ್ನು ಅರ್ಪಿಸುತ್ತಿರುವುದು ಅವರಲ್ಲಿರುವ ಉತ್ತಮ ಸಂಸ್ಕಾರವನ್ನು ಬಿಂಬಿಸುತ್ತದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಹಿರಿಯ ವಿದ್ಯಾರ್ಥಿಗಳು ಶಾಲೆಗೆ ಅವಶ್ಯಕತೆ ಇದ್ದ ಮೈಕ್ ಮತ್ತು ಧ್ವನಿವರ್ಧಕ ಮತ್ತಿತರೆ ಉಪಕರಣಗಳನ್ನು ಕೊಡುಗೆಯಾಗಿ ನೀಡಿದರು.

ಪಟ್ಟಾಧಿಕಾರದ ಬೆಳ್ಳಿ ಮಹೋತ್ಸವ ಅದ್ಧೂರಿಯಾಗಿ ನಡೆಸಲು ತೀರ್ಮಾನ



ಮರಿಯಾಲದ ಮುರುಘರಾಜೇಂದ್ರ ಸ್ವಾಮೀಜಿ ಮಹಾ ಸಂಸ್ಥಾನ ಮಠದಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಭಾಗವಹಿಸಿದ್ದ ಭಕ್ತ ಸಮೂಹ.

ಚಾಮರಾಜನಗರ, ಜೂ.29– ತಾಲೂಕಿನ ಮರಿಯಾಲದ ಮುರುಘರಾಜೇಂದ್ರಸ್ವಾಮೀಜಿ ಮಹಾ ಸಂಸ್ಥಾನ ಮಠದಲ್ಲಿ ಬಸವೋತ್ಸವ ಮಹಾಂತ ಮಂಟಪದ ಉದ್ಘಾಟನೆ ಮತ್ತು ಪುತ್ಥಳಿಗಳ ಅನಾವರಣ ಹಾಗೂ ಇಮ್ಮಡಿ ಮುರುಘರಾಜೇಂದ್ರ ಸ್ವಾಮೀಜಿಗಳ ಗುರು ಪಟ್ಟಾಧಿಕಾರದ ಬೆಳ್ಳಿ ಮಹೋತ್ಸವ ಕಾರ್ಯಕ್ರಮವನ್ನು ಅದ್ದೂರಿಯಿಂದ ಆಚರಿಸಲು ಮರಿಯಾಲದ ಗ್ರಾಮಸ್ಥರು ಹಾಗೂ ಮಠದ ಭಕ್ತರ ಪೂರ್ವಭಾವಿ ಸಭೆಯಲ್ಲಿ ತೀರ್ಮಾನಿಸಲಾಯಿತು.

ಸಭೆಯಲ್ಲಿ ಮಾತನಾಡಿದ ಮುಖಂಡರು ಮುರುಘರಾಜೇಂದ್ರ ಸ್ವಾಮಿಗಳವರು, 1885ರಲ್ಲಿ ಶ್ರೀ ಮಠವನ್ನು ಸ್ಥಾಪಿಸಿ ಹಲವಾರು ಗ್ರಾಮಗಳಲ್ಲಿ ಸಂಚರಿಸಿ ಬಸವಾದಿ ಶರಣರ ತತ್ವಗಳನ್ನು ಬಿತ್ತಿ ಬೆಳೆದು ಭಕ್ತರನ್ನು ಉದ್ಧರಿಸಿದ್ದಾರೆ. ಮಠದ ಆವರಣದಲ್ಲಿ ಮಹಾಂತ ಮಂಟಪ ಹಾಗೂ ಪುತ್ಥಳಿಗಳ ಅನಾವರಣ ಕಾರ್ಯಕ್ರಮ ಹಮ್ಮಿಕೊಂಡಿದ್ದಾರೆ. ಜೊತೆಗೆ ಇವರ ಗುರು ಪಟ್ಟಾಧಿಕಾರದ ಬೆಳ್ಳಿ ಮಹೋತ್ಸವ ಕಾರ್ಯಕ್ರಮಕ್ಕೆ ನಮ್ಮ ತನುಮನ ಧನವನ್ನು ಅರ್ಪಿಸಿ ಎಲ್ಲರೂ ನಿಂತು ಈ ಕಾರ್ಯಕ್ರಮವನ್ನು ಅದ್ದೂರಿಯಾಗಿ, ವಿಜೃಂಭಣೆಯಿಂದ ಮಾಡೋಣ ಎನ್ನುತ್ತಿದ್ದಂತೆ ಸಭೆ ಚಪ್ಪಾಳೆಯ ಕರಾಡತನದೊಂದಿಗೆ ಒಪ್ಪಿಗೆ ಸೂಚಿಸಿತು.

ನನ್ನ ಪೂಜ್ಯ ಗುರುಗಳ ಆಶೀರ್ವಾದದಿಂದ ಹಾಗೂ ಗ್ರಾಮಸ್ಥರ ಮತ್ತು ಶ್ರೀ ಮಠದ ಭಕ್ತ ಸಮೂಹದ ಸಹಕಾರದಿಂದ ಎಲ್ಲವೂ ನಡೆಯುತ್ತಿದ್ದು, ಮುಂದೆಯು ಇದೇ ಸಹಕಾರದೊಂದಿಗೆ ಮಠದ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಯಶಸ್ವಿಗೊಳಿಸಿ ಎಂದು ಇಮ್ಮಡಿ ಮುರುಘರಾಜೇಂದ್ರಸ್ವಾಮೀಜಿ ಕರೆ ನೀಡಿ, ಗುರು ಪಟ್ಟಾಧಿಕಾರದ ಬೆಳ್ಳಿ ಮಹೋತ್ಸವ ಅಪೇಕ್ಷಿಸಿರಲಿಲ್ಲ, ಭಕ್ತರ ಮನವಿ ಮೇರೆಗೆ ಒಪ್ಪಿಕೊಂಡಿದ್ದೇನೆ. ಎಂದರು

ವಿರಕ್ತ ಮಠದ ಚನ್ನಬಸವಸ್ವಾಮೀಜಿ, ಮೂಡುಗೂರು ಮಠದ ಇಮ್ಮಡಿ ಉದ್ಧಾನಸ್ವಾಮಿಗಳು, ಕಬ್ಬಹಳ್ಳಿ ಮಠದ ಗುರುಸಿದ್ದಸ್ವಾಮಿಗಳು ಶಿವಚಾರ್ಯ ಸ್ವಾಮಿಗಳು ಆಶೀರ್ವಚನ ನೀಡಿದರು. ಸಂಸ್ಥಾನದ ಸಿಬ್ಬಂದಿವರ್ಗ, ಮರಿಯಾಲ ಗ್ರಾಮಸ್ಥರು, ಮಠದ ಭಕ್ತ ವೃಂದ ಉಪಸ್ಥಿತರಿದ್ದರು.

ಎಂಸಿಡಿಸಿಸಿ ಬ್ಯಾಂಕ್ ಚುನಾವಣೆ : ಚಾ.ನಗರ ಜಿಲ್ಲೆಯಲ್ಲಿ ಹೆಚ್ಚಳಗೊಂಡ ಕಾಂಗ್ರೆಸ್ ಪ್ರಾಬಲ್ಯ

ಚಾಮರಾಜನಗರ: ಮೈಸೂರು– ಚಾಮರಾಜನಗರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ (ಎಂಸಿಡಿಸಿಸಿಬಿ) ನಿರ್ದೇಶಕರ ಸ್ಥಾನಗಳ ಚುನಾವಣೆಯಿಂದ ಜಿಲ್ಲೆಯಲ್ಲಿ ಕಾಂಗ್ರೆಸ್ ತನ್ನ ಪ್ರಾಬಲ್ಯವನ್ನು ಮತ್ತಷ್ಟು ಹೆಚ್ಚಿಸಿಕೊಳ್ಳುವುದರ ಮೂಲಕ ಜಿಲ್ಲೆ ಕಾಂಗ್ರೆಸ್‌ನ ಭದ್ರಕೋಟೆ ಎಂಬುದು ಸಾಬೀತಾಗಿದೆ.

ಕಳೆದ ಬಾರಿ ಚುನಾವಣೆಯಲ್ಲಿ ಜಿಲ್ಲೆಯಲ್ಲಿ ತಲಾ ಎರಡು ಕ್ಷೇತ್ರಗಳು ಕಾಂಗ್ರೆಸ್ ಮತ್ತು ಬಿಜೆಪಿ ಬೆಂಬಲಿತರ ಪಾಲಾಗಿದ್ದವು. ಈ ಬಾರಿ ಮೂರು ಕ್ಷೇತ್ರಗಳಲ್ಲಿ ಕಾಂಗ್ರೆಸ್ ಬೆಂಬಲಿತರು ಗೆಲುವು ದಾಖಲಿಸಿದ್ದಾರೆ. ಈ ಬಾರಿಯ ಚುನಾವಣೆಯಲ್ಲಿ ಕಾಂಗ್ರೆಸ್‌ನ ಶಾಸಕರು, ಮಾಜಿ ಶಾಸಕರು ಸ್ಪರ್ಧಿಸಿದ್ದರಿಂದ ಚುನಾವಣೆಯನ್ನು ಕಾಂಗ್ರೆಸ್ ಹಾಗೂ ಬಿಜೆಪಿ ಪ್ರತಿಷ್ಠೆಯಾಗಿ ತೆಗೆದುಕೊಂಡಿತ್ತು. ಗೆಲುವು ಸಾಧಿಸಲು ಎರಡು ಪಕ್ಷಗಳು ಸಾಕಷ್ಟು ತಂತ್ರಗಾರಿಕೆ ನಡೆಸಿತ್ತಾದರೂ ಅಂತಿಮವಾಗಿ ಕಾಂಗ್ರೆಸ್ ಬೆಂಬಲಿತರು ನಿರ್ದೇಶಕರಾಗಿ ಆಯ್ಕೆಯಾಗುವ ಮೂಲಕ ಬಿಜೆಪಿ ಹಿಡಿತದಲ್ಲಿದ್ದ ಚಾಮರಾಜನಗರ, ಗುಂಡ್ಲುಪೇಟೆ ಕ್ಷೇತ್ರಗಳನ್ನು 'ಕೈ' ವಶ ಮಾಡಿ ಕೊಂಡಿದೆ.

ಭರ್ಜರಿ ಗೆಲುವು : ಗುಂಡ್ಲುಪೇಟೆ ಕ್ಷೇತ್ರದಿಂದ ಚಲಾವಣೆಯಾದ 37 ಮತಗಳ ಪೈಕಿ 22 ಮತಗಳನ್ನು ಶಾಸಕ ಎಚ್.ಎಂ.ಗಣೇಶಪ್ರಸಾದ್ ಪಡೆಯುವ ಮೂಲಕ ಭರ್ಜರಿ ಗೆಲುವು ದಾಖಲಿಸಿದ್ದಾರೆ. ಈ ಮೂಲಕ ಸಹಕಾರಿ ಕ್ಷೇತ್ರವನ್ನು ಪ್ರವೇಶಿಸಿದ ಕುಟುಂಬದ ಮೂರನೇ ವ್ಯಕ್ತಿ ಎಂಬ ಹೆಗ್ಗಳಿಕೆಗೂ ಪಾತ್ರರಾಗಿದ್ದಾರೆ.

ಎಂಡಿಸಿಸಿ ಬ್ಯಾಂಕ್ ಚುನಾವಣೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿಷ್ಠೆಯಾಗಿ ತೆಗೆದುಕೊಂಡಿದ್ದು, ಪಕ್ಷದ ಶಾಸಕರಿಗೆ ಚುನಾವಣೆ ಜವಾಬ್ದಾರಿ ನೀಡಿ, ಕೆಲವರನ್ನು ಚುನಾವಣೆ ಕಣಕ್ಕಿಳಿಸಿದ್ದರು. ಶಾಸಕ ಎ.ಆರ್. ಕೃಷ್ಣಮೂರ್ತಿ ತಾನು ಸ್ಪರ್ಧೆ ಮಾಡದೇ ಕ್ಷೇತ್ರದಿಂದ ಜಯರಾಂ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಿಸುವಲ್ಲಿ ಪ್ರಮುಖ ಪಾತ್ರವಹಿಸುವ ಮೂಲಕ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿಭಾಯಿಸಿದ ಹೆಗ್ಗಳಿಗೂ ಪಾತ್ರರಾದರು.

ಶಾಸಕ ಸಿ. ಪುಟ್ಟರಂಗಶೆಟ್ಟಿ ಬಿಜೆಪಿ ಬೆಂಬಲಿತ ಪಿ.ವೃಷಭೇಂದ್ರಪ್ಪ ವಿರುದ್ಧ ಒಂದು ಮತಗಳ ಅಂತರದಿಂದ ಗೆಲುವು ದಾಖಲಿಸುವ ಮೂಲಕ ಚುನಾವಣೆಗಳಲ್ಲಿ ಸೋಲಿಲ್ಲದ ಸರದಾರ ಎಂಬ ಖ್ಯಾತಿಗೆ ಪುಟ್ಟರಂಗಶೆಟ್ಟಿ ಪಾತ್ರರಾಗಿದ್ದಾರೆ.

ಹಳಿತಪ್ಪಿದ ಲೆಕ್ಕಾಚಾರ: ಚುನಾವಣೆಯಲ್ಲಿ ಶಾಸಕ ಪುಟ್ಟರಂಗಶೆಟ್ಟಿ ಗೆಲುವು ಸಾಧಿಸಿದ್ದರೂ ತಮ್ಮ ಪಕ್ಷದ ಬೆಂಬಲಿತ ಮತದಾರರನ್ನು ಪೂರ್ಣವಾಗಿ ಉಳಿಸಿಕೊಳ್ಳುವಲ್ಲಿ ವಿಫಲರಾಗಿದ್ದಾರೆ. ತಾಲೂಕಿನ ಒಟ್ಟು 37 ಪಿಎಸಿಸಿಎಸ್ ಮತದಾರ ಪ್ರತಿನಿಧಿಗಳ ಪೈಕಿ ಕಾಂಗ್ರೆಸ್ ಬೆಂಬಲಿತರೇ 25 ಮಂದಿ ಇದ್ದರೂ ಅದರಲ್ಲಿ 19 ಮತಗಳಷ್ಟೇ ಕಾಂಗ್ರೆಸ್‌ಗೆ ಬಂದಿವೆ. ಬಿಜೆಪಿಯ ವೃಷಭೇಂದ್ರಪ್ಪ ತಮ್ಮ ಪಕ್ಷದ ಬೆಂಬಲಿತ 12 ಮತದಾರರೊಟ್ಟಿಗೆ ಕಾಂಗ್ರೆಸ್ ಕಡೆಯ 6 ಮತಗಳನ್ನೂ ಸೆಳೆದಿರುವುದು ಅಚ್ಚರಿಯ ಬೆಳವಣಿಗೆಯಾಗಿದೆ.

ವಾರಗಳ ಕಾಲ ವಿವಿದೆಡೆ ಪ್ರವಾಸ ಹೋಗಿ ಬೆಂಗಳೂರಿನ ತಾರಾ ಹೋಟೆಲ್‌ನಲ್ಲಿ ಉಳಿದುಕೊಂಡು ಮತದಾನದ ದಿನ ಒಟ್ಟಿಗೆ ಬಂದವರಲ್ಲಿ ಕಾಂಗ್ರೆಸ್ ಬೆಂಬಲಿತ 20 ಮತದಾರರಿದ್ದರು. ಇತ್ತ, ಶಾಸಕ ಪುಟ್ಟರಂಗಶೆಟ್ಟಿ ತಡ ರಾತ್ರಿ ಬೆಂಗಳೂರಿನಿಂದ ವಾಪಸ್ಸಾಗಿ ಅನಾರೋಗ್ಯದಿಂದ ಆಸ್ಪತ್ರೆಯಲ್ಲಿ ದಾಖಲಾಗಿದ್ದ ಉಮ್ಮತ್ತೂರು ಪಿಎಸಿಸಿಎಸ್‌ನ ಮತ ದಾರ ಪ್ರತಿನಿಧಿ ರೇವಣ್ಣ ಅವರನ್ನು ಮೈಸೂರಿನ ಮತದಾನ ಕೇಂದ್ರಕ್ಕೆ ಕರೆದೊಯ್ಯುವ ವ್ಯವಸ್ಥೆ ಮಾಡಿದ್ದರಿಂದ ಪುಟ್ಟರಂಗ ಶೆಟ್ಟಿ ಅವರಿಗೆ 22 ಮತಗಳು ಗ್ಯಾರಂಟಿ ಎಂಬ ನಂಬಿಕೆ ಇತ್ತು. ಜೊತೆಯಲ್ಲಿ ಇದ್ದವರಲ್ಲಿಯೇ ಮೂವರ ಮತಗಳು ಬಿಜೆಪಿಗೆ ಕಡೆ ವಾಲಿರುವುದು ಆಶ್ಚರ್ಯ ಮೂಡಿಸಿದೆ. ಈ ಮೂಲಕ ಬಿಜೆಪಿ ಬೆಂಬಲಿತ ವೃಷಭೇಂದ್ರಪ್ಪರವರು ತಮ್ಮ ವರ್ಚಸ್ಸು ಹೆಚ್ಚಿಸಿಕೊಂಡಿದ್ದಾರೆ.

ಖಾಸಗಿ ಶಾಲಾ ವ್ಯಾಮೋಹ ಬಿಟ್ಟು ಸರ್ಕಾರಿ ಶಾಲೆಗೆ ಸೇರಿಸಿ



ಯಳಂದೂರು ಪಟ್ಟಣ ಪಬ್ಲಿಕ್ ಶಾಲೆಯಲ್ಲಿ ಎಲ್‌ಕೆಜಿ ತರಗತಿಗೆ ಪುಟಾಣಿ ಮಕ್ಕಳು ಲಾಟರಿ ಚೀಟಿಯನ್ನು ಎತ್ತುವ ಮೂಲಕ ಆಯ್ಕೆಯನ್ನು ಮಾಡಲಾಯಿತು.

ಯಳಂದೂರು, ಜೂ.29 (ವಿ.ನಾಗರಾಜು)– ಖಾಸಗಿ ಶಾಲೆಗಳ ವ್ಯಾಮೋಹವನ್ನು ಬಿಟ್ಟು ಸರ್ಕಾರಿ ಶಾಲೆಗಳ ಕಡೆ ಪೋಷಕರು ಗಮನ ನೀಡಿ. ಸರ್ಕಾರವು ಶಿಕ್ಷಣಕ್ಕೆ ಸಾಕಷ್ಟು ಯೋಜನೆಗಳನ್ನು ಜಾರಿ ಉತ್ತಮ ಗುಣಮಟ್ಟ ಶಿಕ್ಷಣವನ್ನು ನೀಡುತ್ತಿದೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಮಾರಯ್ಯ ತಿಳಿಸಿದರು

ಪಟ್ಟಣದ ಪಬ್ಲಿಕ್ ಶಾಲೆಯಲ್ಲಿ ಎಲ್.ಕೆ.ಜಿ ತರಗತಿಗೆ ವಿದ್ಯಾರ್ಥಿಗಳನ್ನು ಲಾಟರಿ ಮೂಲಕ ಆಯ್ಕೆ ಮಾಡುವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಕೆಲ ಪೋಷಕ ವರ್ಗದವರು ಖಾಸಗಿ ಶಾಲೆಗಳ ಕಡೆ ಮುಖ ಮಾಡುತ್ತಿದ್ದಾರೆ. ಆದರೆ ಸರ್ಕಾರಿ ಶಾಲೆಯಲ್ಲಿ ಉತ್ತಮ ಗುಣಮಟ್ಟದ ಶಿಕ್ಷಣ, ಜೊತೆಗೆ ಬಿಸಿಯೂಟ, ಪಠ್ಯಪುಸ್ತಕ, ವಿದ್ಯಾರ್ಥಿ ವೇತನ, ಶಾಲೆಯಲ್ಲಿ ಸಮವಸ್ತ್ರ ಸೇರಿದಂತೆ ಸಾಕಷ್ಟು ಅನುಕೂಲ ನೀಡುತ್ತಿದೆ ಎಂದರು. ಕರ್ನಾಟಕ ಪಬ್ಲಿಕ್ ಶಾಲೆಯನ್ನು ತೆರೆದು ಎಲ್‌ಕೆಜಿಯಿಂದ ಪಿಯುಸಿವರೆಗೂ ಇಂಗ್ಲೀಷ್ ಮಾಧ್ಯಮದಲ್ಲಿ ಕಲಿಕೆಯನ್ನು ನೀಡುತ್ತಿದ್ದು, ಇದರಿಂದ ಶಾಲೆಗೆ ಸಾಕಷ್ಟು ಬೇಡಿಕೆ ಇದೆ. ಆದ್ದರಿಂದ ಸರ್ಕಾರಿ ಶಾಲೆಗಳಿಗೆ ಪೋಷಕರು ತಮ್ಮ ಮಕ್ಕಳನ್ನು ಸೇರಿಸಿ ಜೊತೆಗೆ ಶೈಕ್ಷಣಿಕ ಅಭಿವೃದ್ಧಿಗೆ ಸಹಾಯವನ್ನು ಮಾಡುವ ಮೂಲಕ ಮಾದರಿ ಶಾಲೆಗೆ ಎಲ್ಲರೂ ಕೈ ಜೋಡಿಸಬೇಕೆಂದು ಹೇಳಿದರು.

ಕರ್ನಾಟಕ ಪಬ್ಲಿಕ್ ಶಾಲೆಯ ಉಪ ಪ್ರಾಂಶುಪಾಲ ನಂಜುಂಡಯ್ಯ ಮಾತನಾಡಿ, ಜಿಲ್ಲೆಯಲ್ಲಿ 4 ಕರ್ನಾಟಕ ಪಬ್ಲಿಕ್ ಶಾಲೆಯಿದ್ದು, ತಾಲೂಕಿನ ಶಾಲೆಗೆ ಹೆಚ್ಚಿನ ಬೇಡಿಕೆ ಇದೆ. ಇನ್ನೂ ಒಂದು ವಿಭಾಗದ ತರಗತಿಯನ್ನು ತೆರಯುವ ನಿಟ್ಟಿನಲ್ಲಿ ಸಂಬಂಧಪಟ್ಟ ಮೇಲಾಧಿಕಾರಿಗಳಿಗೆ ಮಾಹಿತಿ ನೀಡಲಾಗಿದೆ ಎಂದು ತಿಳಿಸಿದರು.

ಡಯಟ್ ಹಿರಿಯ ಉಪನ್ಯಾಸಕ ಅರಸಶೆಟ್ಟಿ, ಪಪಂ ಸದಸ್ಯ ಮಹೇಶ್, ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲ ಅಲ್ಮಸ್ ಬೇಗಂ, ಎಸ್‌ಡಿಎಂಸಿ ಅಧ್ಯಕ್ಷ ಜೈಗುರು, ಟಿಪಿಓ ಶಾಂತರಾಜು, ಸಿಆರ್‌ಪಿ ಯರಿಯೂರು ರೇಚಣ್ಣ, ತಾಲೂಕು ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಅಮ್ಮನಪುರ ಮಹೇಶ್, ಪ್ರಾಥಮಿಕ ಶಾಲೆ ಶಿಕ್ಷಕ ಸಂಘದ ಅಧ್ಯಕ್ಷ ಸೋಮಣ್ಣ, ಶಾಲೆಯ ಮುಖ್ಯ ಶಿಕ್ಷಕರಾದ ಪುಟ್ಟಸಿದ್ದಮ್ಮ ಮುಖಂಡರಾದ ರಾಜಶೇಖರ್ ಸೇರಿದಂತೆ ಪೋಷಕ ವರ್ಗದವರು ಹಾಜರಿದ್ದರು.

ಶ್ರೀ ವ್ಯಾಸ–ಶ್ರೀಶ ಸಂಚಾರಿ ಉಚಿತ ಆಸ್ಪತ್ರೆ ವಾಹನಕ್ಕೆ ಚಾಲನೆ



ಸೋಸಲೆ ಶ್ರೀ ವ್ಯಾಸರಾಜರ ಮಠದ 'ಶ್ರೀ ವ್ಯಾಸ–ಶ್ರೀಶ ಸಂಚಾರಿ ಉಚಿತ ಆಸ್ಪತ್ರೆ' ವಾಹನಕ್ಕೆ ಸೋಸಲೆ ಗ್ರಾಮದಲ್ಲಿ ಭಾನುವಾರ ಚಾಲನೆ ನೀಡಲಾಯಿತು.

ಮೈಸೂರು, ಜೂ.29(ಎಸ್‌ಪಿಎನ್)– ತಿ.ನರಸೀಪುರ ತಾಲೂಕಿನ ಸೋಸಲೆ ಶ್ರೀ ವ್ಯಾಸರಾಜರ ಮಠದ ಆವರಣದಲ್ಲಿ ಶ್ರೀ ರಘುನಾಥ ತೀರ್ಥರ ಪುಣ್ಯದಿನದ ಅಂಗವಾಗಿ ಶ್ರೀ ವ್ಯಾಸರಾಜರ ಮಠದ ಶ್ರೀ ವಿದ್ಯಾಶ್ರೀಶ ತೀರ್ಥ ಸ್ವಾಮೀಜಿ ನೇತೃತ್ವದಲ್ಲಿ ನಡೆದ 'ಶ್ರೀ ವ್ಯಾಸ–ಶ್ರೀಶ ಸಂಚಾರಿ ಉಚಿತ ಆಸ್ಪತ್ರೆ' (ವಾಹನ)ಗೆ ವನ್ನು ಹೈಕೋರ್ಟ್ ನ್ಯಾಯಮೂರ್ತಿ ಶ್ರೀಶಾನಂದ ಭಾನುವಾರ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ಸರ್ಕಾರ ಆರೋಗ್ಯ ಸೇವೆ ನೀಡುತ್ತಿದೆ. ಆದರೂ ಅನೇಕ ಕುಗ್ರಾಮದ ಜನರು ಇಂದಿಗೂ ವೈದ್ಯಕೀಯ ಸೇವೆಯಿಂದ ವಂಚಿತರಾಗಿದ್ದಾರೆ. ಈ ದಿಸೆಯಲ್ಲಿ ಸೊಸಲೆ ಶ್ರೀ ವ್ಯಾಸರಾಜರ ಮಠದ ತಿ.ನರಸೀಪುರ ತಾಲೂಕಿನ 25ಕ್ಕೂ ಹೆಚ್ಚು ಗ್ರಾಮಗಳಿಗೆ ಉಚಿತ ಸಂಚಾರಿ ವೈದ್ಯಕೀಯ ಸೇವೆ ನೀಡಲು ಮುಂದಾಗಿರುವುದು ಶ್ಲಾಘನೀಯ ಎಂದರು.

ಬಳಿಕ ಶ್ರೀ ವಿದ್ಯಾಶ್ರೀಶ ತೀರ್ಥ ಸ್ವಾಮೀಜಿ ಅನುಗ್ರಹ ಸಂದೇಶ ನೀಡಿ, ಇಂದು ಶ್ರೀ ಮಠ ತಿಂಗಳಿಗೆ 1 ಲಕ್ಷ ರೂ. ನಿರ್ವಹಣಾ ವೆಚ್ಚ ಭರಿಸಿಕೊಂಡು ಸಣ್ಣದಾಗಿ ಆರಂಭಿಸಿದ ಉಚಿತ ಸಂಚಾರಿ ಆರೋಗ್ಯ ಸೇವೆ ಜಿಲ್ಲೆ ವ್ಯಾಪ್ತಿ ವಿಸ್ತರಣೆಯಾಗಲಿದೆ. ದಾನಿಗಳು ಈ ಸಂಚಾರಿ ಆರೋಗ್ಯ ಸೇವಾ ಕಾರ್ಯಕ್ಕೆ ಮುಂದೆ ಬರುತ್ತಿದ್ದಾರೆ. ಸಮಾಜದ ಗಣ್ಯರು, ಸಾಧಕರ ಬಳಿ ಇರುವ ಸಂಪನ್ಮೂಲವನ್ನು ಸಮಾಜಕ್ಕೆ ವಿನಿಯೋಗ ಮಾಡಲು ಇದು ಸಕಾಲ. ಹಳ್ಳಿಗಾಡಿನ ಜನರಿಗೆ ಮೂಲ ಸೌಕರ್ಯ ನೀಡಲು ನಾವು ಮಾಡಿದ ಸಂಕಲ್ಪ ಕಾರ್ಯರೂಪಕ್ಕೆ ಬರುತ್ತಿರುವುದು ಶ್ಲಾಘನೀಯ ಎಂದರು.

ಮೈಸೂರಿನ ಆಶಾಕಿರಣ ಆಸ್ಪತ್ರೆಯ ಮುಖ್ಯಸ್ಥ ಡಾ. ಗುರುರಾಜ ಮಾತನಾಡಿದರು. ಹಿರಿಯ ಉದ್ಯಮಿ ಸುಬ್ಬಣ್ಣ, ಸಂಚಾರಿ ವಾಹನ ದಾನಿ ಆರ್. ಅಂಬಿಕಾಪತಿ, ಡಾ. ಡಿ. ಪಿ. ಮಧುಸೂದನಾಚಾರ್ಯ, ರಾಯರಹುಂಡಿ ಆನಂದ ಸೇರಿದಂತೆ ಇತರರಿದ್ದರು.

ಹಸಿರು ಮೈಸೂರು ಅಭಿಯಾನ



'ಟೀಂ ಮೈಸೂರು' ವತಿಯಿಂದ 'ಹಸಿರು ಮೈಸೂರು ಅಭಿಯಾನ'ದ ಎರಡನೇ ಕಾರ್ಯಕ್ರಮವಾಗಿ ಭಾನುವಾರ ಬೃಂದಾವನ ಬಡಾವಣೆ ಹಾಗೂ ಪಿ.ಕೆ.ಸ್ಯಾನಿಟೋರಿಯಂ ಆವರಣದಲ್ಲಿ 20ಕ್ಕೂ ಹೆಚ್ಚು ಗಿಡಗಳನ್ನು ನೆಡಲಾಯಿತು. ಡಾ.ಲೋಕೇಶ್, ಟೀಂ ಮೈಸೂರು ಸದಸ್ಯರಾದ ಗೋಕುಲ್ ಗೋವರ್ಧನ್, ಯಶವಂತ್, ಕಿರಣ್ ಜೈ ರಾಮಗೌಡ, ಅನಿಲ್ ಜೈನ್, ಹಿರಿಯಣ್ಣ, ಮುರಳಿ, ಲಿಂಗರಾಜು, ಹರೀಶ್ ಶೆಟ್ಟಿ, ಪ್ರಸನ್ನ ರಾಜ್ ಗುರು, ಇಂದು ಶೇಖರ ಭಟ್ಟ, ಮನೋಹರ್, ಹೇಮಂತ್, ತಿಲಕ್, ಬಸವರಾಜು ಬಳ್ಳಾರಿ, ಸಹನ, ಸುಕೃತ, ವರ್ಷಿಣಿ, ಕಲ್ಯಾಣಿ, ಕೀರ್ತನ ಶೆಟ್ಟಿ, ಯಶಸ್ ಶೆಟ್ಟಿ ಮತ್ತಿತರರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಅಟ್ಟಾರಿ–ವಾಘಾ ಗಡಿ ವೀಕ್ಷಣೆ



ವಿಧಾನಸಭೆಯ ಅಧೀನ ಶಾಸನ ಸಮಿತಿಯ ಅಧ್ಯಯನ ಪ್ರವಾಸದಲ್ಲಿ ಪಂಜಾಬ್‌ನ ಅಮೃತಸರದಲ್ಲಿನ ಅಟ್ಟಾರಿ–ವಾಘಾ ಗಡಿಗೆ ಭೇಟಿ ನೀಡಲಾಗಿತ್ತು. ಸಮಿತಿ ಅಧ್ಯಕ್ಷ ಶಿವಣ್ಣ, ಶಾಸಕರಾದ ಟಿ.ಎಸ್.ಶ್ರೀವತ್ಸ, ಶಾಂತನಗೌಡ, ರಾಮಮೂರ್ತಿ, ಕಿರಣಕುಮಾರ್ ಕೊಡ್ಗಿ, ವಿಠ್ಠಲ್ ಹಲಗೇಕರ್ ಹಾಗೂ ಅಧಿಕಾರಿಗಳು ಚಿತ್ರದಲ್ಲಿದ್ದಾರೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಸೈಟು, ಮನೆ ಮಾರಾಟಕ್ಕೆ ಇದೆ (ಮುಡಾ) ಮೈಸೂರು
ಕುವೆಂಪುನಗರದಲ್ಲಿ 30x45 ಹಾಗೂ 30x40, 40 ಅಡಿ ರಸ್ತೆ, ಪೂರ್ವ ದಿಕ್ಕು ಹಳೇ ಮನೆ ದಟ್ಟಗಳ್ಳಿ (ಮಹಾಮನೆ ಸರ್ಕಲ್) 20x30 ಉತ್ತರ ದಿಕ್ಕು 3 ರೂಂ ಹೊಸ ಮನೆ 30x40 and 40x60 ಸೈಟ್ ದಕ್ಷಿಣ ದಿಕ್ಕು
ಧರ್ಮರಾಜ್, 9844351921

ತಕ್ಷಣ ಬೇಕಾಗಿದ್ದಾರೆ
1) ಹೌಸ್‌ಕೀಪಿಂಗ್ ಸೂಪರ್‌ವೈಸರ್ - ಅನುಭವವಿರಬೇಕು.
2) ಹೌಸ್‌ಕೀಪಿಂಗ್ - ಹುಡುಗರು / ಮಹಿಳೆಯರು (ಹೋಟೆಲ್ ಕೆಲಸಕ್ಕೆ ಊಟದ ವ್ಯವಸ್ಥೆಯಿರುತ್ತದೆ)
3) ಸೆಕ್ಯೂರಿಟಿ ಗಾರ್ಡ್ಸ್ - ಬೆಳಗ್ಗೆ ಮತ್ತು ರಾತ್ರಿ ಪಾಳಯಕ್ಕೆ
9739166772, 9731663856

HOME APPLIANCES SERVICE
ಫ್ರಿಡ್ಜ್, ವಾಶಿಂಗ್ ಮಶೀನ್, ಮೈಕ್ರೋವೋವನ್, ಎಲ್‌ಸಿಡಿ, ಸೋಲಾರ್, ಯುಪಿಎಸ್, ವಾಟರ್ ಪ್ಯೂರಿಫೈಯರ್, ಸೇಲ್ಸ್ ಅಂಡ್ ಸರ್ವೀಸ್, ನಿಮ್ಮ ಮನೆಯ ಹತ್ತಿರ ದೊರೆಯುತ್ತದೆ.
Contact: Srinivas 9379699229

DRIVER WANTED
To Drive WagonR Car in Bengaluru
Attractive Salary
Contact 8710921058

ಮನೆ ಮಾರಾಟಕ್ಕೆ ಇದೆ
40x60 E/F ಬೃಂದಾವನ ಬಡಾವಣೆ, 1ನೇ ಹಂತ, ಮೈಸೂರು.
Mob: 7204914777

ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ (8 Hours duty)
ಉತ್ತಮ ವೇತನ, ಪಿಎಫ್ ಮತ್ತು ಇಎಸ್‌ಐ ಸೌಲಭ್ಯವಿರುತ್ತದೆ. ಸ್ಥಳ: ನಂಜನಗೂಡು, ಮೈಸೂರು ಹೆಬ್ಬಾಳು ಕೈಗಾರಿಕಾ ನಗರ
9886200104 / 7829393555

ಕೆಲಸ ಖಾಲಿ ಇದೆ
ಮೈಸೂರು & ಬೆಂಗಳೂರಿನಲ್ಲಿರುವ ಕಂಪನಿ ಮತ್ತು ಆಫೀಸ್ ಕೆಲಸಗಳಿಗೆ 7ನೇ, 10ನೇ, ಪಿಯುಸಿ, ಡಿಗ್ರಿ ಪಾಸ್/ ಫೇಲ್ ಆದಂತಹ ಯುವಕ ಯುವತಿಯರಿಗೆ ಊಟ ವಸತಿ ಯೊಂದಿಗೆ ಸಂಬಳ+ಓಟಿ 20,000/- 25000/-. ಸಂಪರ್ಕಿಸಿ:
9916039299 7996661933

ಬಾಡಿಗೆಗೆ ಬೇಕಾಗಿದೆ
ಚರ್ಮ ಚಿಕಿತ್ಸೆ ಕ್ಲಿನಿಕ್ ಗಾಗಿ 1000 sq.ft ಜಾಗ ಮೈಸೂರಿನ ಪ್ರಮುಖ ವಾಣಿಜ್ಯ ಪ್ರದೇಶಗಳಲ್ಲಿ
Ph: 7259117937

ಬೇಕಾಗಿದ್ದಾರೆ
ಆಫೀಸ್ ಅಸಿಸ್ಟೆಂಟ್ (ಮಹಿಳೆ) (MS OFFICE/EXCEL / TALLY)
ಮೇಟಗಳ್ಳಿ, ಗೋಕುಲಂ, ಹೆಬ್ಬಾಳ್, ವಿಜಯನಗರದವರಿಗೆ ಮಾತ್ರ,
ಸೆಕ್ಯೂರಿಟಿ ಗಾರ್ಡ್ - 5 ನು. ಹೌಸ್‌ಕೀಪಿಂಗ್ - 5 ನು.
(ವಯಸ್ಸು 25 - 35) ಆಕರ್ಷಕ ಸಂಬಳವಿರುತ್ತದೆ.
90367 45292, 9900749104

ಬೇಕಾಗಿದ್ದಾರೆ
ವ್ಯವಸಾಯಕ್ಕೆ ಹಾಗೂ ಹಸುಗಳನ್ನು ಸಾಕುವುದಕ್ಕೆ 50ರ ಆಸುಪಾಸು ವಯಸ್ಸಿನವರು ಸಸ್ಯಹಾರಿಗಳು ಕೆಲಸಕ್ಕೆ ಬೇಕಾಗಿರುತ್ತಾರೆ. ಸಂಬಳ: ಗಂಡ ಹೆಂಡತಿ ಇಬ್ಬರಿಗೂ ಇರುವುದಕ್ಕೆ ವ್ಯವಸ್ಥೆ ಹಾಗೂ ಸುಮಾರು 15,000 (ಇಬ್ಬರಿಗೂ ಸೇರಿ) ನೀಡಲಾಗುವುದು. ಸಂಪರ್ಕಿಸಿ:
Mob: 9036058002

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7204494854

HOME LOANS
CORPORATION, MUDA, KHB
GRAMATHANA PROPERTY
Site Purchase, Site Construction
House Purchase
Site Mortgage, house Mortgage
Contact: 9108416410

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8618373596

SITE FOR SALE
30x40, N/F @ Varuna Lake View, Price: 2500/Sft., T. Narasipura Main Road.
26x40, E/F @ Vishwa Enclave. Price: Rs. 17,50,000/- , Janthagalli.
Call: 7795609173

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 9606838940

ITI ಗೆ ಪ್ರವೇಶಾವಕಾಶ
ITI (Fitter-NSQF) ವೃತ್ತಿಗೆ SSLC/PUC Pass Fail ಅಭ್ಯರ್ಥಿಗಳಿಗೆ ಪ್ರವೇಶಾವಕಾಶ ವಿರುತ್ತದೆ. N.C.V.T ಭಾರತ ಸರ್ಕಾರದಿಂದ ಸಂಯೋಜನೆಗೊಂಡಿರುತ್ತದೆ.
Also Admission for Nursery, LKG & UKG
BENAKA ITI College, Near Cauvery Circle, Dr. Rajkumar Road, Raghavendra Nagar, Mysore.
9342123467 / 9141756695

NORTH EAST CONSTRUCTIONS
"Turn your Dream into Address"
We undertake all types of Civil Works, including:-
▸ Residential Construction
▸ Commercial Construction
▸ Industrial Construction
▸ Repair Works ▸ Renovation
▸ Architecture ▸ Structural Design
▸ Interior Design ▸ Material Supply
Call: 76193 99919

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

BECOME A TEACHER
NURSERY TEACHERS TRAINING
PRIMARY TEACHERS TRAINING
(Recognised by M H R D New Delhi)
S S L C PASS , PUC FAIL/ PASS, ANY DEGREE, GET CERTIFIED DIPLOMA HOLDER .
Start earning from next year
Jnana gangothri Convent
WatsApp/call 9113980741

ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ
Raj Cars, Mysore
Car Showroom, near Apollo Hospital Road, Dosa Point, Kuvempunagar.
Mob: 9342001989

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 6360485921

ಬೋಳು ತಲೆಯ ಸಮಸ್ಯೆಯೇ?



ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 MANGALORE 9343142258

4 ದಿನಗಳ ಕಾಶಿ ಪ್ರವಾಸ 26/7/25,
3 ದಿನಗಳ ಶಿರಡಿ ಪ್ರವಾಸ 18/7/25,
4 ದಿನಗಳ ಪುರಿ ಜಗನ್ನಾಥ ಪ್ರವಾಸ 10/7/25,
5 ದಿನಗಳ ದೆಹಲಿ ಪ್ರವಾಸ 24/7/25
14 ದಿನಗಳ ಮಾನಸ ಸರೋವರ ಪ್ರವಾಸ 22/7/25
ಸುವರ್ಣ ಯಾತ್ರಾ
9008381022 / 6360146483

ಗಾರ್ಡನರ್ ಬೇಕಾಗಿದ್ದಾರೆ
ಮೈಸೂರಿನ ದಟ್ಟಗಳ್ಳಿಯಲ್ಲಿರುವ ಮನೆಗೆ ಗಾರ್ಡನ್ ಕೆಲಸಕ್ಕೆ ಅನುಭವಸ್ಥ ಒಂದು ಕುಟುಂಬ ಬೇಕಾಗಿದೆ ಉತ್ತಮ ಸಂಬಳ ನೀಡಲಾಗುವುದು.
ಸಂಪರ್ಕಿಸಿ: 81234 50066

GHANASHREE ENTERPRISES
Shell, Najangud - Ooti Road
REQUIRED MEN/ WOMEN STAFF
FOR SHELL PETROL BUNK & cafe
Attractive Salary ESI/PF, Food Facilities and Room Services
FOR MORE DETAILS PLEASE CONTACT
8248380195, 8088446601

ಉದ್ಯೋಗ ಅವಕಾಶ
ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree ಪಾಸ್ / ಫೇಲ್ ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ESI/ PF ನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ + ಓಟಿ, 15200 - 86000.
Mob: 7892046990

ಸೈಟುಗಳು ಮಾರಾಟಕ್ಕಿವೆ
ಮೈಸೂರು ತಾಲೂಕು, ವರುಣ ಬಳಿ ಸೈಟು ಮಾರಾಟಕ್ಕಿದೆ, ಎಸ್.ಬಿ. ಸುರೇಶ್, ಮೊದಲು ಬಂದವರಿಗೆ ಆದ್ಯತೆ
9901987456

DOCUMENT LOST
Harish. G, site #5713, Vijayanagar 4th Stage, 2nd Phase, Mysore. Article: Original MUDA allotted property all document vide property bearing Site #5713. Finders Please contact:
Mob: 9916282776

ಬೇಕಾಗಿದ್ದಾರೆ
ಗೂಡ್ಸ್ ವಾಹನಕ್ಕೆ ಡ್ರೈವರ್ ಬೇಕಾಗಿದ್ದಾರೆ.
ಸಂಬಳ: 15,000 ರಿಂದ 20,000. ಉಚಿತ ವಸತಿ ಸೌಕರ್ಯ. ಸಂಪರ್ಕಿಸಿ:
Mob: 8884179981

SITE FOR SALE
1) 30x40 West face, KHB Kenchalagudu.
2) 3 BHK house for rent, Jayalakshmipuram, near DRC Cinemas.
Mob: 6361610427

ತಕ್ಷಣ ಬೇಕಾಗಿದ್ದಾರೆ
(ನೈಟ್ ಶಿಫ್ಟ್ ಮಾತ್ರ)
ಹಳೇ ಆರ್‌ಎಂಸಿ ಸರ್ಕಲ್ ಪೆಟ್ರೋಲ್ ಬಂಕ್ ಕ್ಯಾಷಿಯರ್ (ಪುರುಷರು)
ವಯಸ್ಸು 20 ರಿಂದ 40
9164777336, 9902179776

Wanted - ಬೇಕಾಗಿದ್ದಾರೆ
ಮೈಸೂರು ಮೇಟಗಳ್ಳಿ ಇಂಡಸ್ಟ್ರಿಯಲ್ ಏರಿಯಾದಲ್ಲಿರುವ ಕಂಪನಿಗೆ ಕೆಲಸ ಮಾಡಲು ಹುಡುಗಿಯರು ಬೇಕಾಗಿದ್ದಾರೆ. ವಯಸ್ಸು: 18 ರಿಂದ 30, ವಿದ್ಯಾಭ್ಯಾಸ SSLC and PUC. ಸಂಪರ್ಕಿಸಿ:
ಸುಷ್ಮಾ 7892725603
ಪ್ರಕಾಶ್ 8971460235

ಕಾವೇರಿ ಇನ್ಸ್‌ಟಿಟ್ಯೂಟ್ ಆಫ್ ಹೆಲ್ತ್‌ಕೇರ್ ಇಂಟ್ಟಿಡ್ (ನರ್ಸಿಂಗ್)
8ನೇ ಕ್ರಾಸ್, ಆಸರೆ ಕಾನ್ವೆಂಟ್ ರಸ್ತೆ, ಬೆಳವಾಡಿ, ಮೈಸೂರು.
ಎಸ್‌ಎಸ್‌ಎಲ್‌ಸಿ, ಪಿಯುಸಿ ಆದ ವಿದ್ಯಾರ್ಥಿ/ ವಿದ್ಯಾರ್ಥಿನಿಯರಿಗೆ ಒಂದು ಸುವರ್ಣಾವಕಾಶ ಇಲ್ಲಿ 2 ವರ್ಷಗಳ ತರಬೇತಿಯನ್ನು ಕೊಡಲಾಗುವುದು. ಡೊನೇಷನ್ ಇಲ್ಲ, ಫೀಸ್ ಮಾತ್ರ ತರಬೇತಿ ಸಮಯದಲ್ಲಿ ವೇತನ ಇದೆ. ಇಲ್ಲಿ ಕಳೆದ 20 ವರ್ಷಗಳಿಂದ ತರಬೇತಿ ಪಡೆದ ವಿದ್ಯಾರ್ಥಿ/ ವಿದ್ಯಾರ್ಥಿನಿಯರು ಪ್ರಖ್ಯಾತ ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಹಾಸ್ಟೆಲ್ ವ್ಯವಸ್ಥೆ ಇದೆ. ಕೆಲವೇ ಸೀಟುಗಳು ಬಾಕಿ ಇದೆ. ಸಂಪರ್ಕಿಸಿ:
9845331087, 9535524464

ಬೇಕಾಗಿದ್ದಾರೆ
ಬೆಂಗಳೂರಿನ ಇಂಜಿನಿಯರಿಂಗ್ ಕಾಲೇಜ್ ಹಾಸ್ಟೆಲ್‌ಗೆ ಹೆಡ್‌ಕುಕ್, ಅಸಿಸ್ಟೆಂಟ್ ಕುಕ್ ಬೇಕಾಗಿದ್ದಾರೆ. ಆಕರ್ಷಕ ಸಂಬಳ ಮತ್ತು ವಸತಿ ಸೌಕರ್ಯವಿರುತ್ತದೆ. ಸಂಪರ್ಕಿಸಿ:
Mob: 9380394364

ಕೆಲಸಕ್ಕೆ ಬೇಕಾಗಿದ್ದಾರೆ
ಮೈಸೂರಿನ ಪ್ರಸಿದ್ಧ MNC ಕಂಪನಿಗಳಿಗೆ 7th, 9th, 10th, PUC, any Degree, M.Com., B.Com. MBA ಆದವರಿಗೆ Packing, Helper, Q/C checking, Security , Driver, Machine Operators, Data Entry, Telling, Receptionist, Billing, HR, Admin ಇತ್ಯಾದಿ ಕೆಲಸಗಳಿಗೆ ಯುವಕ, ಯುವತಿಯರು ಬೇಕಾಗಿದ್ದಾರೆ. ಸಂಬಳ: 20,000 ರಿಂದ 65000 + ಇಎಸ್‌ಐ, ಪಿಎಫ್, ಓಟಿ ನೊಂದಿಗೆ. ಸಂಪರ್ಕಿಸಿ:
9036559663, 9901816285

30x40 ಸೈಟು 600 ಮೀಟರ್ ಆಲನಹಳ್ಳಿ ರಿಂಗ್ ರಸ್ತೆಗೆ
10 ಲಕ್ಷ ಪಾವತಿ, ಉಳಿಕೆಲೋನ್. ಅರಮನೆಗೆ 7 ಕಿ.ಮೀ. ಬೆಲೆ: 63 ಲಕ್ಷ.
* ಕ್ರೈಸ್ಟ್ ಪಬ್ಲಿಕ್ ಸ್ಕೂಲ್ ಪಕ್ಕ – 65 ಲಕ್ಷ.
* ವಿಜಯನಗರ 4ನೇ ಹಂತ & ಬೋಗಾದಿ ಮುಖ್ಯ ರಸ್ತೆ ಹತ್ತಿರ – 52 ಲಕ್ಷ.
ಲೇಔಟ್ಸ್ ಜೆ.ಪಿ. ನಗರ, ಇಲವಾಲದಲ್ಲೂ ಇದೆ.
Brokers Excuse
Mob: 8123075038

SITE FOR SALE
30x55 South face MUDA approved
Suvarna layout, Bogadi
Rate Rs. 2500/- per sqft
Direct Owner, Brokers Excuse
9972399939

SITE FOR SALE
50x80 Commercial site, 80 feet road, Vijayanagar 4th Stage, 1st Phase, 100 meters from Ring Road. Price: Rs. 10,500 per sq.ft.
Call: 8197707001

ಹಳೇ ಕಬ್ಬಿಣ ಬೇಕಾಗಿದೆ. ಸಂಪರ್ಕಿಸಿ:
Mob: 7259407518

ತಂತಿ ಕಂಬದ ಬೇಲಿ ಹಾಕಲು ಮತ್ತು ಗ್ರಾವಲ್, ಕೆಮ್ಮಣ್ಣು, ಜೆಸಿಬಿ ವರ್ಕ್, ಟಿಪ್ಪರ್ ಬೇಕಾದಲ್ಲಿ ಹಾಗೂ ಸೈಟ್ & ಜಮೀನು ಲೆವಲ್ ಮಾಡಿಕೊಡಲು ಸಂಪರ್ಕಿಸಿ:
Shankar: 7259407518

SITE FOR SALE
30x50, 40x60 Srirampura Ring Road, Mysore.
Mob: 8050345574

ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ ಕೆಲಸಕ್ಕೆ ಗಂಡಸರು ಬೇಕಾಗಿದ್ದಾರೆ, ಸ್ನೇಹ ಅಸೋಸಿಯೇಟ್ಸ್ 4ನೇ ಫ್ಲೋರ್, ಭೀಮಾ ಜುವೆಲ್ಸ್ ಬಿಲ್ಡಿಂಗ್ ಜೆ.ಎಲ್.ಬಿ. ರಸ್ತೆ, ಮೈಸೂರು. ಸಂಪರ್ಕಿಸಿ:
9886745981

ಸೈಟುಗಳನ್ನು ಕೊಳ್ಳಲು / ಮಾರಲು ಸಂಪರ್ಕಿಸಿ:
Mob: 9538412881

ತಕ್ಷಣ ಬೇಕಾಗಿದ್ದಾರೆ
SSLC / PUC / ITI / Diploma in Civil
Age: 19 to 30 years.
ಸರ್ವೆ ಕೆಲಸಕ್ಕೆ
Call timings: 10.30 to 1 pm.
Mob: 9964095301

ಬೇಕಾಗಿದ್ದಾರೆ
ಮೈಸೂರಿನ ಗಣಗರಹುಂಡಿ (ಬೋಗಾದಿ) ಮತ್ತು ಸಿದ್ದಲಿಂಗಪುರ (ಶ್ರೀರಂಗಪಟ್ಟಣ) ಸೈಟ್‌ನಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಬೇಕಾಗಿದ್ದಾರೆ, ESI, PF ಇದ್ದು 12 ಗಂಟೆ ಪಾಳಿಗೆ, 20,000 ತಿಂಗಳ ವೇತನವಿರುತ್ತದೆ. 25ರಿಂದ 50 ವರ್ಷ ವಯಸ್ಸು. ಸಂಪರ್ಕಿಸಿ:
9945489996

ಬೇಕಾಗಿದ್ದಾರೆ
ಹಳದಿ ಬೋರ್ಡ್ ಚಾಲಕರು: 3 ಸಂಖ್ಯೆ (ಅನುಭವಿಗಳು ಮಾತ್ರ) ವಾಕ್ ಇನ್ ಸಂದರ್ಶನ
ಹೋಟೆಲ್ ಗುಪ್ತಾ
252/ಬಿ. ಅಶೋಕ ರಸ್ತೆ, ಮೈಸೂರು–570001. ಸಂಪರ್ಕಿಸಿ:
9886577795 / 740608855

ಜಮೀನು ಮಾರಾಟಕ್ಕಿದೆ
ಮೈಸೂರು ತಾ., ಜಯಪುರ ಹೋಬಳಿಯಲ್ಲಿ ಮಾವಿನಹಳ್ಳಿಯಲ್ಲಿ 3 ಎಕರೆ 07 ಗುಂಟೆ ಮತ್ತು 4 ಎಕರೆ 10 ಗುಂಟೆ ತಳೂರು ಸರ್ಕಲ್ ಹತ್ತಿರ 1 ಎಕರೆ 04 ಗುಂಟೆ ಮಾವಿನ ತೋಟ ವಸತಿ ಬಡಾವಣೆ ಮಾಡಲು ಸೂಕ್ತವಾಗಿದೆ ಮತ್ತು ಮಹಾಲಕ್ಷ್ಮೀ ಲೇಔಟ್ ಪಕ್ಕ 0–20 ಗುಂಟೆ ಮದ್ದೂರು ಹುಂಡಿ 0–32 ಗುಂಟೆ, ಮದ್ದೂರು 0–25 ಗುಂಟೆ ಜಮೀನುಗಳು ಮಾರಾಟಕ್ಕಿವೆ. ಸಂಪರ್ಕಿಸಿ:
9945661696, 9353458279

FOR SALE
1. 20x30 G+1, M Block, Kuvempunagar
2. 30x40 MUDA Approved Sites attached to KHB Kenchalgud, HD Kote Road
3. 27x60 & 30x45 Commercial present Old House @ Jayanagar
4. 30x40 Sites Near RT Nagar BSNL Layout @ Just 20 Lakhs
5. 80x78 Krishnamurthy Puram
PRAKRUTHI PROPERTIES
95386 90359, 90359 90359

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಬೇಕಾಗಿದ್ದಾರೆ
ಪಂಪ್‌ಸೆಟ್ ಅಂಗಡಿಯಲ್ಲಿ ಕೆಲಸ ಮಾಡಲು ಪುರುಷರು / ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ:
Mob: 9448059822

ಮನೆ ಬಾಡಿಗೆಗೆ & ಭೋಗ್ಯಕ್ಕೆ ಇದೆ
2 ಬೆಡ್‌ರೂಂವುಳ್ಳ ಗೀಸರ್ ವ್ಯವಸ್ಥೆ, ಕಾಲೇಜ್ ರಸ್ತೆ, SBI ಬ್ಯಾಂಕ್ ಎದುರು, ಟಿ.ನರಸೀಪುರ. ಬಾಡಿಗೆ 7000/-, advance: 50,000/-. ಭೋಗ್ಯಕ್ಕೆ 7.50 ಲಕ್ಷ.
9448037518, 8971247518

ತರಬೇತಿ
MK ಸರ್ವೀಸಸ್.in
ಪ್ರೀವೆಡ್ಡಿಂಗ್, ಕ್ಯಾಮರಾ ಟ್ರೈನಿಂಗ್, ಕ್ಯಾಮರಾ ಡ್ರೋನ್ ಎಡಿಟಿಂಗ್, ಕಲರಿಂಗ್, ಟೈಟಲ್ ಗ್ರಾಫಿಕ್ಸ್.
Mob: 8147784353

Agricultural Land Required
* 20 to 50 acres
* Budget: Rs. 20 Lakhs per acre or market value
* Distance no matter.
ಕೃಷಿ ಭೂಮಿ ಬೇಕಾಗಿದೆ
* ಪ್ರದೇಶ: 20 ರಿಂದ 50 ಎಕರೆಗಳವರೆಗೆ
* ಬಜೆಟ್: ಪ್ರತಿ ಎಕರೆಗೆ 20 ಲಕ್ಷ/ಮಾರುಕಟ್ಟೆ ಬೆಲೆ
* ದೂರ ಮಹತ್ವವಿಲ್ಲ. ಸಂಪರ್ಕಿಸಿ:
888 44 44 353

Ice Cream Parlour ನಲ್ಲಿ Part time ಕೆಲಸಕ್ಕೆ
(6 pm - 11 pm)
ಯುವಕರು ಬೇಕಾಗಿದ್ದಾರೆ.
ವಯೋಮಿತಿ (18–38). ಸಂಪರ್ಕಿಸಿ:
Mob: 8317386649

SITE FOR SALE
40x50 North-West Corner Roopa Nagar
CALL: 9880273834

ತಕ್ಷಣ ಕೆಲಸ
ಮೈಸೂರು ಹೆಬ್ಬಾಳಿನ ಕಂಪನಿಯಲ್ಲಿ ಕೆಲಸ ಮಾಡಲು ಹೆಲ್ಪರ್ ಕೆಲಸಕ್ಕೆ ಹುಡುಗರು, ಹುಡುಗಿಯರು ಮತ್ತು ಡ್ರೈವರ್ ಕಂ ಮಾರ್ಕೆಟಿಂಗ್‌ಗೆ ಗಂಡಸರು ತಕ್ಷಣ ಬೇಕಾಗಿದ್ದಾರೆ. ಸಂಪರ್ಕಿಸಿ:
8105249880, 7795285485

ಪೂಜಾ ಗೋಲ್ಡ್
PGM Pooja Gold Marketing
Mysore, Mandya ಮಾರ್ಕೆಟಿಂಗ್
ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ
ಫೀಲ್ಡ್ ವರ್ಕ್ ಕೆಲಸವಾಗಿರುತ್ತದೆ
15 ರಿಂದ 20000 ಸಾವಿರ ಸಂಬಳ ನೀಡಲಾಗುವುದು, ಬೈಕ್ ಕಡ್ಡಾಯ
9591044013

ಸೈಟು ಮಾರಾಟಕ್ಕಿದೆ
30x50 DTCP 11 "A" ಖಾತಾ, ರೇರಾ ಅಪ್ರೂವ್ಡ್ ಸೈಟು ಮಾರಾಟಕ್ಕಿದೆ. 24 ಲಕ್ಷದ 50 ಸಾವಿರಗಳು ಶ್ರೀಧರ ಲೇಔಟ್ (80 ಅಡಿ ಬಸ್ ರಸ್ತೆಗೆ ಹತ್ತಿರದಲ್ಲಿದೆ) ತಳೂರು ಟಿವಿಎಸ್ ಫ್ಯಾಕ್ಟರಿ ಹತ್ತಿರ, ಮೈಸೂರು.
Mob: 9742198093

ಸುಪ್ರೀಮ್ ಸೋಲಾರ್
ಕಂಪನಿಯಿಂದ 200 ಲೀಟರ್‌ಗೆ 700 ರೂ. ಗಳಿಗೆ (ಏಳು ನೂರು ರೂ.ಗಳು) ದಿನಾಂಕ 29–6–2025 ರಿಂದ 28–7–2025 ರವರೆಗೆ ಸರ್ವೀಸ್ ಮಾಡಿಕೊಡಲಾಗುತ್ತದೆ.
Mob: 9008711654

COMMERCIAL SITE FOR SALE
45x60 on 60 ft. road for sale in KBL Gardenia Layout, attached to Vijnayanagara 4th Stage. Market Price is Rs. 1.31 Cr. Selling for just 1.12 Cr. Call:
9591544080, 8073300783

ಜಮೀನು ಮಾರಾಟಕ್ಕಿದೆ
ಪಾಂಡವಪುರ ತಾಲ್ಲೂಕಿನ ಸುಂಕಾತೊಣ್ಣೂರು ಬಳಿ 3 ಎಕರೆ ಜಮೀನು ಮಾರಾಟಕ್ಕಿದೆ. ಬನ್ನೂರು ಸಮೀಪ 2 ಎಕರೆ ಜಮೀನು ಮಾರಾಟಕ್ಕಿದೆ. ಸಂಪರ್ಕಿಸಿ:
General Property
8496000727, 9632434689

ಕೆಲಸಕ್ಕೆ ಬೇಕಾಗಿದ್ದಾರೆ.
ವಯಸ್ಸಾದವರನ್ನು ನೋಡಿಕೊಳ್ಳು ಅನುಭವ ಇರುವ ಇಲ್ಲದೆ ಇರುವ ಮಹಿಳೆಯರು ಹಾಗೂ ಪುರುಷರು ಹಾಗೂ ANM, GNM, B.Sc. ಹುಡುಗ, ಹುಡುಗಿಯರು ಸಂಪರ್ಕಿಸಿ. ಸ್ಥಳ: ಮೈಸೂರು, ಬೆಂಗಳೂರು.
Mob: 8951717070

ಮೈಸೂರು ಮಿತ್ರ 46 ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ದ್ವೇಷ, ಅಸೂಯೆ ಬಿಟ್ಟು ಸಮಾಜದ ಅಭಿವೃದ್ಧಿಗೆ ಶ್ರಮಿಸಿ

ವೀರಶೈವ ಸಮುದಾಯದವರಿಗೆ ಕೆ.ಪಿ.ಮಹದೇವಸ್ವಾಮಿ ಸಲಹೆ



ವಾರ್ಷಿಕ ಮಹಾಸಭೆಯನ್ನು ಗ್ರಾಮ ವಿದ್ಯೋದಯ ಸಂಘದ ಗೌರವ ಪ್ರಧಾನ ಕಾರ್ಯದರ್ಶಿ ಕೆ.ಪಿ.ಮಹದೇವಸ್ವಾಮಿ ಉದ್ಘಾಟಿಸಿದರು.

ತಿ.ನರಸೀಪುರ, ಜೂ.29– ವೀರಶೈವ ಸಮಾಜ ಪ್ರಸಕ್ತ ಸನ್ನಿವೇಶದಲ್ಲಿ ನೀಡುವ ಸ್ಥಿತಿಯಿಂದ ಕೇಳುವ ಪರಿಸ್ಥಿತಿಗೆ ಬಂದಿದ್ದು, ಇದು ಹೋಗಬೇಕಾದರೆ ನಮ್ಮಲ್ಲಿರುವ ದ್ವೇಷ, ಅಸೂಯೆ ಮತ್ತು ಒಳ ಪಂಗಡಗಳ ಕಿತ್ತಾಟ ದೂರವಾಗಬೇಕು ಎಂದು ಗ್ರಾಮ ವಿದ್ಯೋದಯ ಸಂಘದ ಗೌರವ ಪ್ರಧಾನ ಕಾರ್ಯದರ್ಶಿ ಕೆ.ಪಿ.ಮಹದೇವಸ್ವಾಮಿ ತಿಳಿಸಿದರು.

ಪಟ್ಟಣದ ವಿದ್ಯೋದಯ ಕಲಾ ಮತ್ತು ವಾಣಿಜ್ಯ ಪ್ರಥಮ ದರ್ಜೆ ಕಾಲೇಜಿನ ಸಭಾಂಗಣದಲ್ಲಿ ನಡೆದ ಸಾಂಸ್ಕೃತಿಕ ನಾಯಕ ಶ್ರೀಬಸವೇಶ್ವರ ಸೌಹಾರ್ದ ಸಹಕಾರ ಸಂಘದ ಪ್ರಥಮ ವರ್ಷದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಹಾಗೂ ಸಂಘದ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು.

ಈ ಹಿಂದೆ ಬೇರೆ ಸಮಾಜಗಳು ನಮ್ಮ ವೀರಶೈವ ಸಮಾಜವನ್ನು ವಿಶೇಷ ಸ್ಥಾನಮಾನ ನೀಡಿ ಗೌರವದಿಂದ ಕಾಣುತ್ತಿತ್ತು. ಆದರೆ ಇಂದು ಆ ಪರಿಸ್ಥಿತಿ ಇಲ್ಲವಾಗಿದೆ. ವೀರಶೈವ ಸಮಾಜದಲ್ಲಿ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯಲ್ಲಿ ಗ್ರಾಮಕ್ಕೊಬ್ಬರು ಜಮೀನ್ದಾರರು, ಸಾಹುಕಾರರು ಇರುತ್ತಿದ್ದರು. ಅವರು ಸಮಾಜ ಸೇವೆಗೆ ತಮ್ಮನ್ನು ತೊಡಗಿಸಿಕೊಳ್ಳುವ ಮೂಲಕ ಶಾಲೆ, ಕಾಲೇಜುಗಳನ್ನು ಆರಂಭಿಸಿದ್ದರು. ಆದರೆ ಇಂದು ನಮ್ಮ ಸಮಾಜ ಆರ್ಥಿಕವಾಗಿ ಎಂತಹ ಸ್ಥಿತಿ ತಲುಪಿದೆ ಎಂದರೆ ಎರಡೂ ಜಿಲ್ಲೆಯನ್ನು ಹುಡುಕಿದರೂ ಇಬ್ಬರು, ಮೂವರು ಕೋಟ್ಯಾಧಿಪತಿಗಳು ಸಿಗಬಹುದು. ಅದೇ ಸರಿ ಸಮಾನ ಸಮಾಜದ ಉಪ್ಪಾರರು ಬಹಳ ಕಡಿಮೆ ಜನಸಂಖ್ಯೆ ಇದ್ದರೂ, 10 ರಿಂದ 15 ಮಂದಿ ನೂರಾರು ಕೋಟಿ ಆಸ್ತಿ ಹೊಂದಿರುವ ಸ್ಥಿತಿವಂತರಿದ್ದಾರೆ. ಹಾಗಾಗಿ ನಮ್ಮ ಸಮಾಜದ ಸ್ಥಿತಿ ಅಷ್ಟೇನೂ ಉತ್ತಮವಾಗಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ವೀರಶೈವ ಸಮಾಜ ತಮ್ಮಲ್ಲಿರುವ ದ್ವೇಷ, ಅಸೂಯೆ ಬಿಟ್ಟು ಒಗ್ಗಟ್ಟಾಗದೇ ಹೋದರೆ ಸಮಾಜವು ಮತ್ತಷ್ಟು ಅಧೋಗತಿಗೆ ಇಳಿಯಲಿದೆ. ಕೊಡುವ ಸ್ಥಿತಿಯಲ್ಲಿದ್ದ ಸಮಾಜ ಇಂದು ಕೇಳುವ ಮಟ್ಟಕ್ಕೆ ತಲುಪಿದೆ. ಇದು ಹೋಗಬೇಕಾದರೆ ನಮ್ಮಲ್ಲಿನ ಒಳಜಗಳ ಶಮನವಾಗಬೇಕಿದೆ. ಈ ನಿಟ್ಟಿನಲ್ಲಿ ಸಮಾಜದವರು ಜಾಗೃತರಾಗಿ ಕೆಲಸ ಮಾಡಬೇಕಿದೆ ಎಂದರು.

ವಾಟಾಳ್ ಸೂರ್ಯ ಸಿಂಹಾಸನ ಮಠದ ಡಾ. ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ವಿವಿಧ ಕ್ಷೇತ್ರಗಳಲ್ಲಿ ಅನುಭವ ಹೊಂದಿರುವವರು ಈ ಸಂಘದ ಅಧ್ಯಕ್ಷರು ಹಾಗೂ ನಿರ್ದೇಶಕರಾಗಿದ್ದಾರೆ. ಎಲ್ಲರ ಅನುಭವದಿಂದ ಸಮುದಾಯದ ಈ ಸಹಕಾರ ಸಂಘ ಮಾದರಿ ಸಂಘವಾಗಿ ಬೆಳವಣಿಗೆ ಹೊಂದಲಿದೆ. ಹಣ ನಿಂತ ನೀರಾಗಬಾರದು. ಸದಾ ಚಲನೆಯಲ್ಲಿರುವ ಮೂಲಕ ಇತರರಿಗೆ ಸಹಕಾರವಾಗುವಂತಿರಬೇಕು. ನಾನು ಎಲ್ಲಾ ಸಮುದಾಯದವರ, ಜಾತಿ ಜನಾಂಗದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರೂ ಇಂದು ಬಸವೇಶ್ವರ ಸಂಘ ಉದ್ಘಾಟನೆ ಅತೀವ ಸಂತಸ ತಂದಿದೆ. ವೈಯಕ್ತಿಕವಾಗಿ ನಾನು ಮುಡುಕನಪುರ ಹಾಗೂ ಚಿದರವಳ್ಳಿ ಗವಿಮಠದ ಶ್ರೀಗಳು ಸೇರಿ ಸಂಘಕ್ಕೆ 3 ಲಕ್ಷ ರೂ. ನೀಡುತ್ತೇವೆ. ಜೊತೆಗೆ ಸಂಘಕ್ಕೆ ಸದಸ್ಯರ ನೋಂದಣಿಗೂ ಸಹಕಾರ ನೀಡುತ್ತೇವೆ ಎಂದರು.

ಕಾರ್ಯಕ್ರಮದಲ್ಲಿ ಮುಡುಕನಪುರ ಹಲವಾರ ಮಠದ ಶ್ರೀಷಡಕ್ಷರ ದೇಶೀಕೇಂದ್ರಸ್ವಾಮಿ, ಚಿದರವಳ್ಳಿ ಪಾರಮಾರ್ಥಿಕ ಗವಿಮಠದ ಶ್ರೀಮಲ್ಲಿಕಾರ್ಜುನ ಸ್ವಾಮಿ, ವಾಟಾಳು ಮಠದ ಕಿರಿಯ ಶ್ರೀಗಳಾದ ಶಿವಕುಮಾರಸ್ವಾಮಿ, ಸಹಕಾರಿ ಸಂಘದ ಪ್ರಾಂತೀಯ ಅಧಿಕಾರಿ ಗುರುಪ್ರಸಾದ್ ಬಂಗೇರ, ಅಭಿವೃದ್ಧಿ ಅಧಿಕಾರಿ ಆರ್.ಎಸ್.ಸುರೇಶ್, ಬಸವೇಶ್ವರ ಸಹಕಾರಿ ಸಂಘದ ಉಪಾಧ್ಯಕ್ಷ ಎಂ.ಸಿದ್ದಲಿಂಗಸ್ವಾಮಿ, ಕಾರ್ಯಕಾರಿ ಮಂಡಳಿ ಸದಸ್ಯರಾದ ಪಿ.ಕುಮಾರ್, ಸೀಹಳ್ಳಿ ಗುರುಮೂರ್ತಿ, ಮಂಟೇಲಿಂಗಪ್ಪ, ಬಿ.ಜಿ. ರಾಜಶೇಖರ, ಸವಿತಾಪ್ರಕಾಶ್, ಎಂ.ಎಸ್.ಸುಧಾಕರ್, ಪರಮೇಶ ಪಟೇಲ್, ತುರುಗನೂರು ರಾಜಣ್ಣ, ಡಣಾಯಕನಪುರ ಮಲ್ಲಣ್ಣ, ಅಂಗಡಿ ನಾಗೇಶ್, ಅಖಿಲ ಭಾರತ ವೀರಶೈವ ಮಹಾಸಭಾದ ಅಧ್ಯಕ್ಷ ಎಸ್‌ಎಂಆರ್ ಪ್ರಕಾಶ್, ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ಮಹೇಶ್, ಮುಖಂಡರಾದ ಕಾವೇರಿಪುರ ಮಲ್ಲಣ್ಣ, ವಕೀಲ ಜ್ಞಾನೇಂದ್ರ ಮೂರ್ತಿ, ಮೂಗೂರು ಕುಮಾರಸ್ವಾಮಿ, ವೀರಶೈವ ಸಮಾಜದ ಅಧ್ಯಕ್ಷ ಶಾಂತ ರಾಜು, ಹೆಳವರಹುಂಡಿ ನಟರಾಜು, ತೊಂಟೇಶ್, ಕೈಯಂಬಳ್ಳಿ ಅಶೋಕ್, ಹೋಟೆಲ್ ರಾಜಣ್ಣ, ಹಿರಿಯೂರು ಸತ್ಯಪ್ಪ, ಪುರಸಭೆ ಸದಸ್ಯ ಎಸ್.ಕೆ.ಕಿರಣ್, ಷಡಕ್ಷರಿ, ಸಂಘದ ಸಿಇಓ ಬಿ.ಎಸ್.ಉಮಾ ಕೆಬ್ಬೆ ಹುಂಡಿ ಶಿವಕುಮಾರ್ ಸೇರಿದಂತೆ ಸಂಘದ ಷೇರುದಾರರು, ವೀರಶೈವ ಸಮಾಜದ ಮುಖಂಡರು ಹಾಜರಿದ್ದರು.

> ಹಲವು ವರ್ಷಗಳಿಂದ ಸಮಾಜದ ಸಂಘ ಸ್ಥಾಪಿಸಬೇಕೆಂಬ ಮಹತ್ತರ ಗುರಿ ಈಗ ಈಡೇರಿದಂತಿದೆ. ಸಂಘದಲ್ಲಿ ಉತ್ತಮವಾದ ತಂಡವಿದೆ. ಸಂಘ ಸ್ಥಾಪನೆ ಮುಖ್ಯವಲ್ಲ. ಅದನ್ನು ಉಳಿಸಿ ಬೆಳೆಸಿಕೊಂಡು ಹೋಗುವುದು ಬಹು ಮುಖ್ಯ ಆ ನಿಟ್ಟಿನಲ್ಲಿ ವೀರಶೈವ ಸಮಾಜದ ನಮ್ಮ ಪ್ರಯತ್ನಕ್ಕೆ ಸಾಥ್ ನೀಡಬೇಕು. ಪ್ರತಿ ಗ್ರಾಮದಲ್ಲೂ ಹೆಚ್ಚು ಸದಸ್ಯರನ್ನು ನೋಂದಾಯಿಸುವ ಕೆಲಸ ಮಾಡಬೇಕು. ಇಡೀ ಜಿಲ್ಲೆಯಲ್ಲೇ ವೀರಶೈವ ಸಮಾಜದ ಈ ಸಂಘವನ್ನು ಮಾದರಿ ಮಾಡಲು ತಾಲೂಕಿನ ವೀರಶೈವರು ನನ್ನೊಂದಿಗೆ ಕೈ ಜೋಡಿಸಬೇಕು.
>
> –ಎಸ್.ಬಿ.ಸುಗಂಧರಾಜು, ಅಧ್ಯಕ್ಷ, ಸಾಂಸ್ಕೃತಿಕ ನಾಯಕ ಶ್ರೀಬಸವೇಶ್ವರ ಸೌಹಾರ್ದ ಸಹಕಾರ ಸಂಘ

ಮನೆ ಮೇಲೆ ಕಾಡಾನೆ ದಾಳಿ: ದಾಂಧಲೆ



ಹೆಚ್.ಡಿ.ಕೋಟೆ, ಜೂ.29–ಮನೆ ಮೇಲೆ ಕಾಡಾನೆ ದಾಳಿ ನಡೆಸಿ ದಾಂಧಲೆ ಮಾಡಿರುವ ಘಟನೆ ಕೇರಳ ಗಡಿ ಭಾಗದಲ್ಲಿರುವ ತಾಲೂಕಿನ ಡಿ.ಬಿ.ಕುಪ್ಪೆ ಗ್ರಾಪಂ ವ್ಯಾಪ್ತಿಯ ಹೊಸೂರು ಗ್ರಾಮದಲ್ಲಿ ಶನಿವಾರ ರಾತ್ರಿ ನಡೆದಿದೆ.

ಹೊಸೂರು ಗ್ರಾಮದ ನಿವಾಸಿ ಬಸವರಾಜು ಅವರ ಮನೆ ಮೇಲೆ ಕಾಡಾನೆ ದಾಳಿ ನಡೆಸಿರುವುದು. ಶನಿವಾರ ರಾತ್ರಿ ಮನೆ ಬಳಿ ಬಂದ ಕಾಡಾನೆ ದಾಂಧಲೆ ನಡೆಸಿದೆ. ಈ ವೇಳೆ ಮನೆಯಲ್ಲಿದ್ದವರು ಗಾಬರಿಗೊಂಡು ಆನೆ ಮುಖಕ್ಕೆ ಟಾರ್ಚ್ ಬಿಟ್ಟು ಕಿರುಚಾಡಿದ್ದಾರೆ. ಈ ವೇಳೆ ಆನೆ ಬೇರೆಡೆಗೆ ತೆರಳಿದ್ದು, ಎಲ್ಲರೂ ನಿಟ್ಟುಸಿರು ಬಿಟ್ಟಿದ್ದಾರೆ ಎನ್ನಲಾಗಿದೆ.

ಭಾರತೀಯ ಕಿಸಾನ್ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ರವಿ ಮಾತನಾಡಿ, ಡಿ.ಬಿ.ಕುಪ್ಪೆ ಗ್ರಾಪಂ ವ್ಯಾಪ್ತಿಯ ಮಚ್ಚೂರು, ಹೊಸೂರು, ಗೋಳೂರು, ಆನೆಮಳ್ಳ, ಕಡೆಗದ್ದೆ, ವಡಕನಮಾಳ, ಬಾವಲಿ ಸೇರಿದಂತೆ ಇನ್ನಿತರ ಗ್ರಾಮಗಳ ರೈತರು ಕಾಡು ಪ್ರಾಣಿಗಳಿಂದ ರಕ್ಷಿಸಿಕೊಳ್ಳುವುದೇ ಸಮಸ್ಯೆಯಾಗಿದೆ. ಶಾಸಕರು, ಅರಣ್ಯ ಅಧಿಕಾರಿಗಳು ರೈಲ್ವೆಕಂಬಿ ಅಳವಡಿಸಿ ಮೂಲಕ ಈ ಭಾಗದ ರೈತರ ಬೆಳೆ, ರೈತರ ಪ್ರಾಣ ಸಂರಕ್ಷಿಸಿ ಎಂದು ಮನವಿ ಮಾಡಿದ್ದಾರೆ.

ಎಂಸಿಡಿಸಿಸಿ ಬ್ಯಾಂಕ್ ನೂತನ ನಿರ್ದೇಶಕರಿಗೆ ಅಭಿನಂದನೆ



ಎಂಸಿಡಿಸಿಸಿ ಬ್ಯಾಂಕ್ ಚುನಾವಣೆಯಲ್ಲಿ ನಿರ್ದೇಶಕರಾಗಿ ಆಯ್ಕೆಯಾದ ಶಾಸಕ ಜಿ.ಡಿ. ಹರೀಶ್‌ಗೌಡರನ್ನು ಹೆಚ್.ಡಿ.ಕೋಟೆ ಸಮಾಜ ಸೇವಕರೂ ಆದ ಜೆಡಿಎಸ್ ಮುಖಂಡ ಕೆ.ಎಂ.ಕೃಷ್ಣನಾಯಕ ಹಾಗೂ ಮುಖಂಡರು ಅಭಿನಂದಿಸಿದರು. ಈ ವೇಳೆ ಹೆಚ್.ಡಿ. ಕೋಟೆ ಜೆಡಿಎಸ್ ತಾಲೂಕು ಅಧ್ಯಕ್ಷ ರಾಜೇಂದ್ರ, ಗೋಪಾಲಯ್ಯ, ಯೋಗನರಸಿಂಹ ಗೌಡ, ಯತೀಶ್ ಕುಮಾರ್, ರಾಜಣ್ಣ, ರಾಮಣ್ಣ, ನಾಗಣ್ಣ, ಪ್ರಕಾಶ್, ಯೋಗ ಮಹೇಶ್, ಮಹೇಶ್, ಗ್ರಾಪಂ ಸದಸ್ಯ ಶಿವರಾಜು, ಲೇಖನ ಕುಮಾರ್, ರಾಮೇಗೌಡ, ಗಿರೀಶ್, ವಕೀಲ ಮೋಹನ್ ಕುಮಾರ್, ಸತೀಶ್, ಪ್ರಶಾಂತ್, ಪ್ರಸನ್ನ, ಪ್ರದೀಪ್ ಇನ್ನಿತರರಿದ್ದರು.

ಸರ್ಕಾರ ಶಿಕ್ಷಕರ ನಿವೃತ್ತಿ ವಯಸ್ಸನ್ನು ಏರಿಸಬೇಕು

ವಿಧಾನ ಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಸಲಹೆ



ನಿವೃತ ಶಿಕ್ಷಕಿ ಸಿ.ಇ.ತ್ರಿವೇಣಿ ಅವರನ್ನು ಎಂಎಲ್‌ಸಿ ಹೆಚ್.ವಿಶ್ವನಾಥ್ ಸನ್ಮಾನಿಸಿದರು.

ಕೆ.ಆರ್.ನಗರ, ಜೂ.29– ಶಿಕ್ಷಕರ ನಿವೃತ್ತಿ ವಯಸ್ಸನ್ನು ರಾಜ್ಯ ಸರ್ಕಾರ 60 ರಿಂದ 70 ವರ್ಷಕ್ಕೇರಿಸಿ, ಅವರ ಅನುಭವದ ಅನುಕೂಲ ಪಡೆದು ವಿದ್ಯಾರ್ಥಿಗಳು ಶೈಕ್ಷಣಿಕವಾಗಿ ಎತ್ತರದ ಸ್ಥಾನಕ್ಕೇರಲು ಹೊಸ ಕಾಯಿದೆ ರೂಪಿಸಬೇಕು ಎಂದು ವಿಧಾನಪರಿಷತ್ ಸದಸ್ಯ ಹೆಚ್. ವಿಶ್ವನಾಥ್ ತಿಳಿಸಿದರು.

ಪಟ್ಟಣದ ಈಶ್ವರ ನಗರದಲ್ಲಿ ನಿವೃತ್ತ ಶಿಕ್ಷಕಿ ಸಿ.ಇ.ತ್ರಿವೇಣಿ ಅವರಿಗೆ ಸಮಾನ ಮನಸ್ಕ ಶಿಕ್ಷಕರು ಮತ್ತು ಬಡಾವಣೆಯ ನಿವಾಸಿಗಳು ಆಯೋಜಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದ ಅವರು, ಪ್ರಸ್ತುತ ಬುದ್ದಿವಂತ ಮತ್ತು ಅನುಭವಿ ಶಿಕ್ಷಕರ ಕೊರತೆ ಇದ್ದು ನಿವೃತ್ತಿ ವಯಸ್ಸು ಏರಿಸಿದರೆ ಇದರ ಭವಣೆ ನೀಗಲಿದೆ ಎಂದರು.

ಅಕ್ಷರ ಮತ್ತು ಆರೋಗ್ಯ ಸುಭಿಕ್ಷವಾಗಿ ಇರದ ದೇಶ ಎಂದಿಗೂ ಅಭಿವೃದ್ಧಿ ಹೊಂದಲು ಸಾಧ್ಯವಿಲ್ಲ. ಆದರೆ ರಾಜ್ಯದಲ್ಲಿ ಅಧಿಕಾರದಲ್ಲಿರುವ ಸಿದ್ದರಾಮ್ಮಯ್ಯನವರ ಸರ್ಕಾರದಲ್ಲಿ ಇವೆರಡು ಇಲ್ಲದೆ ಮಹಿಳೆಯರಿಗೆ 2 ಸಾವಿರ ನೀಡಿ ಉಚಿತ ಬಸ್ ಪ್ರಯಾಣ ನೀಡಿರುವುದೇ ಸಾಧನೆ ಎಂದು ವ್ಯಂಗ್ಯವಾಡಿದರು.

2004ರಲ್ಲಿ ನಾನು ಶಿಕ್ಷಣ ಸಚಿವನಾಗಿದ್ದಾಗ ಅಂದು ರಾಷ್ಟ್ರಪತಿಗಳಾಗಿದ್ದ ಭಾರತ ರತ್ನ ಡಾ.ಎ.ಪಿ.ಜೆ.ಅಬ್ದುಲ್ ಕಲಾಂ ಅವರು ನನ್ನನ್ನು ಸೇರಿದಂತೆ ಕೆಲವು ಶಿಕ್ಷಕ ಭಾಂದವರನ್ನು ಕರೆಯಿಸಿ ಶಾಲಾ ಶಿಕ್ಷಣ ಕ್ಷೇತ್ರದಲ್ಲಿ ಕರ್ನಾಟಕ ದೇಶದಲ್ಲಿಯೇ ಉತ್ತುಂಗ ಸ್ಥಾನದಲ್ಲಿದೆ ಎಂದು ಸನ್ಮಾನಿಸಿದ್ದರು ಎಂದು ನೆನೆಸಿಕೊಂಡರು.

ಇಲಾಖೆಯಲ್ಲಿ ನನ್ನ ಬಿಗಿ ಕ್ರಮಗಳು ಮತ್ತು ಕಠಿಣ ನಿಯಮಗಳನ್ನು ಸಹಿಸದ ಕೆಲವು ಮಠಾಧೀಶರು, ಚರ್ಚ್‌ನ ಪಾದ್ರಿಗಳು ಮತ್ತು ಮಸೀದಿಯ ಮುಲ್ಲಾಗಳು ಮುಖ್ಯಮಂತ್ರಿಗಳಿಗೆ ಚಾಡಿ ಹೇಳಿ ನನ್ನನ್ನು ಸಚಿವ ಸ್ಥಾನದಿಂದ ತೆಗೆಸಿದ್ದರು. ಇದು ದೇಶದ ಪ್ರಸ್ತುತ ಸ್ಥಿತಿ ಎಂದು ವಿಷಾದ ವ್ಯಕ್ತಪಡಿಸಿದ ಅವರು ಸತ್ಯ ಹೇಳುವವರು ಮತ್ತು ಪ್ರಾಮಾಣಿಕವಾಗಿ ಕೆಲಸ ಮಾಡುವವರು ಯಾರಿಗೂ ಬೇಡ ಎಂದು ನೊಂದು ನುಡಿದರು.

ನಿವೃತ ಡಿಡಿಪಿಐ ಸಿ.ಎಸ್.ರಾಮಲಿಂಗು, ಶಿಕ್ಷಣ ತಜ್ಞ ಡಾ.ಜಿ.ಅಚ್ಚುತ ರಾವ್, ಸರ್ಕಾರಿ ನೌಕರರ ಸಂಘದ ಗೌರವಾಧ್ಯಕ್ಷ ರಾಜಶೇಖರ, ರಾಜ್ಯಶಾಸ್ತ್ರ ಉಪನ್ಯಾಸಕ ಕೆ.ಎಲ್.ರಮೇಶ್ ಮಾತನಾಡಿದರು. ಅರಕೆರೆ ವಿರಕ್ತ ಮಠದ ಸಿದ್ದೇಶ್ವರ ಶ್ರೀಗಳ ಸಾನಿಧ್ಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ನಿವೃತ ಶಿಕ್ಷಕಿ ಸಿ.ಇ.ತ್ರಿವೇಣಿ ದಂಪತಿಯನ್ನು ಆತ್ಮೀಯವಾಗಿ ಅಭಿನಂದಿಸಲಾಯಿತು.

ನವ ನಗರ ಬ್ಯಾಂಕ್ ಅಧ್ಯಕ್ಷ ಕೆ.ಎನ್. ಬಸಂತ್, ಪುರಸಭೆ ಮಾಜಿ ಉಪಾಧ್ಯಕ್ಷ ನಾರತ್ನಮ್ಮ, ಸದಸ್ಯರಾದ ಕೆ.ಪಿ.ಪ್ರಭು ಶಂಕರ್, ಕೆ.ಎಲ್.ಜಗದೀಶ್, ಅಖಿಲ ಭಾರತ ವೀರಶೈವ ಮಹಾಸಭಾ ತಾಲೂಕು ಅಧ್ಯಕ್ಷ ಕೆಂಪರಾಜು, ವಕೀಲ ಕೆ.ವಿ.ಮಹೇಶ್, ಮುಖಂಡರಾದ ಅರುಣ್ ಬಿ.ನರಗುಂದ್, ಸಣ್ಣಲಿಂಗಪ್ಪ, ಎಂ.ಬಿ.ಲೋಕ ನಾಥ್, ನಾಗಭೂಷಣ್, ಮಂಚೇಗೌಡ, ಮತ್ತಿತರರಿದ್ದರು.

ಹೊರಗಿನಿಂದ ಬಂದವರು ಬಿಜೆಪಿ ರಾಜ್ಯಾಧ್ಯಕ್ಷರಾದರೆ

ಪೆಟ್ರೋಲ್ ಸುರಿದುಕೊಂಡು ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ: ಎಚ್ಚರಿಕೆ



ತೋಟದಪ್ಪ ಬಸವರಾಜು

ತಿ.ನರಸೀಪುರ, ಜೂ.29– ಹೊರಗಿನಿಂದ ಬಂದ ಯಾರನ್ನೇ ಬಿಜೆಪಿ ರಾಜ್ಯಾಧ್ಯಕ್ಷರನ್ನಾಗಿ ಮಾಡಿದರೆ ರಾಜ್ಯ ಬಿಜೆಪಿ ಕಚೇರಿ ಎದುರು ಪೆಟ್ರೋಲ್ ಸುರಿದುಕೊಂಡು ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ ಎಂದು ತಾಲೂಕು ಬಿಜೆಪಿ ಮಾಜಿ ಅಧ್ಯಕ್ಷ ತೋಟದಪ್ಪ ಬಸವರಾಜು ಎಚ್ಚರಿಸಿದ್ದಾರೆ.

ಪಟ್ಟಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ವಿಧಾನಸಭೆ ಹಾಗೂ ಲೋಕಸಭೆ ಚುನಾವಣೆ ನಂತರ ರಾಜ್ಯ ಬಿಜೆಪಿಯಲ್ಲಿ ನಡೆಯುತ್ತಿರುವ ವಿದ್ಯಮಾನಗಳು ನಿಷ್ಠಾವಂತ ಕಾರ್ಯಕರ್ತರಿಗೆ ಮುಜುಗರ ಹಾಗೂ ನೋವನ್ನುಂಟು ಮಾಡುತ್ತಿವೆ. ಕಳೆದ ಲೋಕಸಭಾ ಚುನಾವಣೆ ಸಂದರ್ಭ ಜೆಡಿಎಸ್ ಜೊತೆ ಮೈತ್ರಿ ಮಾಡಿಕೊಂಡಾಗಲೇ ರಾಜ್ಯ ರಾಜಕಾರಣದಲ್ಲಿ ಕುಟುಂಬ ರಾಜಕಾರಣ ಹಾಗೂ ಭ್ರಷ್ಟಾಚಾರ ವಿರೋಧಿ ರಾಜಕಾರಣ ಸತ್ತು ಹೋಗಿದೆ. ಈ ಮಾನದಂಡ ಇಟ್ಟುಕೊಂಡು ಹೋರಾಟ ಮಾಡುವ ನಾಯಕರು ಆತ್ಮಾವಲೋಕನ ಮಾಡಿಕೊಳ್ಳುವುದು ಒಳಿತು. ವಿಜಯೇಂದ್ರ ಅವರು ರಾಜ್ಯಾಧ್ಯಕ್ಷರಾದ ನಂತರ ಈ ವಿಷಯ ಮುಂದಿಟ್ಟುಕೊಂಡು ಅವರನ್ನು ಹತ್ತಿಕ್ಕುವ ಕೆಲಸ ನಡೆಯುತ್ತಿದೆ ಇದು ಖಂಡನೀಯ. ಯಾರೇ ಪಕ್ಷದ ಅಧ್ಯಕ್ಷರಾದರೂ 3 ವರ್ಷಗಳ ಅವಧಿಗೆ ಜವಾಬ್ದಾರಿ ಇರುತ್ತದೆ. ಆದರೆ ವಿಜಯೇಂದ್ರರ ಅವಧಿ ಇನ್ನೂ ಮುಗಿದಿಲ್ಲ. ಅವಧಿ ಮುಗಿಯೋವರೆಗೆ ಅವರನ್ನು ಬದಲಾಯಿಸುವುದು ಸರಿಯಲ್ಲ ಎಂದರು.

ವಿಜಯೇಂದ್ರರ ಅವಧಿ ಮುಗಿದ ನಂತರ ಅಧ್ಯಕ್ಷರ ಬದಲಾವಣೆ ಮಾಡಬೇಕಾದಲ್ಲಿ ಶ್ರೀರಾಮುಲು ಅಥವಾ ತೇಜಸ್ವಿನಿ ಅನಂತ್ ಕುಮಾರ್ ಅವರನ್ನು ಅಧ್ಯಕ್ಷರನ್ನಾಗಿ ಮಾಡಿದರೆ ಪಕ್ಷಕ್ಕೆ ಒಳ್ಳೆಯದಾಗುತ್ತದೆ ಎಂದರು.

ಹೊರಗಿನವರಿಗೆ ಅಧ್ಯಕ್ಷ ಸ್ಥಾನಬೇಡ: ಕೇಂದ್ರದ ವರಿಷ್ಠರು ಹೊರಗಿನಿಂದ ಬಂದವರನ್ನು ರಾಜ್ಯಾಧ್ಯಕ್ಷರನ್ನಾಗಿ ಮಾಡಲು ಹೊರಟಿರುವ ವರ್ತಮಾನಗಳಿದ್ದು, ಇದು ಬಿಜೆಪಿ ಕಾರ್ಯಕರ್ತರಿಗೆ ಮಾಡುವ ಅಪಮಾನವಾಗಿದೆ. ಇದು ಖಂಡನೀಯ. ಕೇಂದ್ರ ಸಚಿವ ವಿ.ಸೋಮಣ್ಣ ರಾಜ್ಯ ಕಂಡ ಜನಪ್ರಿಯ ನಾಯಕರಿರಬಹುದು. ಆದರೆ ಬಿಜೆಪಿಗೂ ಇವರಿಗೂ ಏನು ಸಂಬಂಧ ಇವರು ಸರ್ವ ಪಕ್ಷ ನಾಯಕರು ಅಧಿಕಾರಕ್ಕಾಗಿ ಏನು ಬೇಕಾದರೂ ಮಾಡುವವರು. ಕಳೆದ ಚುನಾವಣೆಯಲ್ಲಿ ವರುಣ ಕ್ಷೇತ್ರದಲ್ಲಿ ಸೋತ ನಂತರ ತುಂಬಿದ ಸಭೆಯಲ್ಲಿ ಕ್ಷೇತ್ರದ ಕಾರ್ಯಕರ್ತರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿ ಅಪಮಾನ ಮಾಡಿದ್ದಾರೆ. ಇಂತಹವರಿಗೆ ರಾಜ್ಯಾಧ್ಯಕ್ಷ ಸ್ಥಾನ ನೀಡುವುದು ಬೇಡ. ಹೊರಗಿನಿಂದ ಬಂದ ಯಾರನ್ನೇ ಬಿಜೆಪಿ ರಾಜ್ಯಾಧ್ಯಕ್ಷರನ್ನಾಗಿ ಮಾಡಿದರೆ ರಾಜ್ಯ ಬಿಜೆಪಿ ಕಚೇರಿ ಮುಂದೆ ಪೆಟ್ರೋಲ್ ಸುರಿದುಕೊಂಡು ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ ಎಂದು ಎಚ್ಚರಿಕೆ ನೀಡಿದರು.

ಹಳೆ ಕೆಂಪಯ್ಯನಹುಂಡಿಯಲ್ಲಿ ಕೆಂಪೇಗೌಡ ಜಯಂತಿ



ತಿ.ನರಸೀಪುರ ತಾಲೂಕಿನ ಹಳೆ ಕೆಂಪಯ್ಯನಹುಂಡಿ ಗ್ರಾಮದಲ್ಲಿ ನಾಡಪ್ರಭು ಕೆಂಪೇಗೌಡ ಒಕ್ಕಲಿಗ ಯುವಸೇನೆ ವತಿಯಿಂದ ಕೆಂಪೇಗೌಡರ 516ನೇ ಜಯಂತಿಯನ್ನು ಅದ್ದೂರಿಯಾಗಿ ಆಚರಿಸಲಾಯಿತು. ಸೇನೆಯ ಗೌರವಾಧ್ಯಕ್ಷ ಜೀವನ್, ಅಧ್ಯಕ್ಷ ಕಾರ್ತಿಕ್, ಉಪಾಧ್ಯಕ್ಷ ಅಭಿಷೇಕ್, ಪ್ರಧಾನ ಕಾರ್ಯದರ್ಶಿ ನಂಜುಂಡೇಗೌಡ, ಸಂಘಟನಾ ಕಾರ್ಯದರ್ಶಿ ತೇಜಸ್‌ಗೌಡ, ಸಹ ಕಾರ್ಯದರ್ಶಿ ಗುರುಮೂರ್ತಿ, ಖಜಾಂಚಿ ಶ್ರೇಯಸ್, ಸದಸ್ಯರಾದ ಸಾಗರ್, ಪವನ್, ನಾಗರಾಜ್, ದರ್ಶನ್, ಮುಖಂಡರಾದ ಆನಂದ್, ಕುಮಾರ್, ಪಾಪು, ಸತೀಶ್, ಅಶೋಕ್ ಮತ್ತಿತರರಿದ್ದರು.

ಸಾಲಬಾಧೆ: ರೈತ ಆತ್ಮಹತ್ಯೆ



ಸಾಲಿಗ್ರಾಮ, ಜೂ.29– ಸಾಲಬಾಧೆ ತಾಳಲಾರದೇ ರೈತನೋರ್ವ ವಿಷಸೇವಿಸಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ತಾಲೂಕಿನ ಲಕ್ಷ್ಮೀಪುರ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ರೈತ ಗೋವಿಂದೇಗೌಡ(45) ಆತ್ಮಹತ್ಯೆ ಮಾಡಿಕೊಂಡವರು. ಈತ ವ್ಯವಸಾಯಕ್ಕಾಗಿ ಬಳ್ಳೂರು ಸಹಕಾರ ಸಂಘ ಮತ್ತು ಖಾಸಗಿಯವರಿಂದ ಕೈಸಾಲ ಸೇರಿದಂತೆ 15ಲಕ್ಷಕ್ಕೂ ಹೆಚ್ಚು ಸಾಲ ಮಾಡಿದ್ದರು ಎನ್ನಲಾಗಿದೆ. ಆದರೆ ಬೆಳೆದ ಬೆಳೆ ಕೈಸೇರದೆ ನಷ್ಟ ಅನುಭವಿಸಿದ್ದ ಗೋವಿಂದೇಗೌಡ ಸಾಲ ಮರುಪಾವತಿಸಲಾಗದೆ ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ್ದರು. ಅವರನ್ನು ಮೈಸೂರಿನ ಕೆ.ಆರ್.ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಭಾನುವಾರ ಬೆಳಗ್ಗೆ ಸಾವನ್ನಪ್ಪಿದ್ದಾರೆ. ಈ ಸಂಬಂಧ ಸಾಲಿಗ್ರಾಮ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಾಡಪ್ರಭು ಕೆಂಪೇಗೌಡರು ಸದಾ ಸ್ಮರಣೀಯರು

ಮೈಮುಲ್ ಅಧ್ಯಕ್ಷ ಆರ್.ಚೆಲುವರಾಜು



ಕಾರ್ಯಕ್ರಮದಲ್ಲಿ ಗಣ್ಯರನ್ನು ಸನ್ಮಾನಿಸಲಾಯಿತು.

ತಿ.ನರಸೀಪುರ, ಜೂ.29– ಇಪ್ಪತ್ತೂರು ವರ್ಷಗಳ ಕಾಲ ಆಡಳಿತ ನಡೆಸಿ ಇಂದಿನ ಬಹುದೊಡ್ಡ ಸುಸಜ್ಜಿತ ನಗರಕ್ಕೆ ಶಾಶ್ವತ ಭದ್ರ ಬುನಾದಿ ಹಾಕಿದ ನಾಡಪ್ರಭು ಕೆಂಪೇಗೌಡರು ಸದಾ ಸ್ಮರಣೀಯರು ಎಂದು ಮೈಮುಲ್ ಅಧ್ಯಕ್ಷ ಆರ್.ಚೆಲುವರಾಜು ತಿಳಿಸಿದರು.

ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ಹಾಗೂ ತಾಲೂಕು ಒಕ್ಕಲಿಗರ ಸಂಘದ ಸಂಯುಕ್ತಾಶ್ರಯದಲ್ಲಿ ಪಟ್ಟಣದ ಗುರುಭವನದಲ್ಲಿ ನಡೆದ ನಾಡಪ್ರಭು ಕೇಂಪೇಗೌಡರ 516ನೇ ಜಯಂತಿಯಲ್ಲಿ ಮಾತನಾಡಿದ ಅವರು, ಶಿಸ್ತುಬದ್ಧ ಆಡಳಿತ, ಯೋಜನೆ–ಯೋಚನೆಗಳ ಮೂಲಕ ಬಾಲ್ಯದಲ್ಲಿ ಕಂಡ ಜನಪರ ಕನಸನ್ನು ನನಸಾಗಿಸಲು ಕೆಂಪೇಗೌಡರ ತ್ಯಾಗ ಹಾಗೂ ಶ್ರಮವನ್ನು ನೆನಪು ಮಾಡಿಕೊಳ್ಳಬೇಕು. ಮೂಲ ಸೌಕರ್ಯ, ನಗರಾಭಿವೃದ್ಧಿ, ಕೃಷಿ, ನೀರಾವರಿ, ಕೆರೆಗಳ ಅಭಿವೃದ್ಧಿ ಸೇರಿದಂತೆ ಹಲವು ಯೋಜನೆಗಳನ್ನು ಕೆಂಪೇಗೌಡರು ಜಾರಿಗೆ ತಂದರು. ತಮ್ಮ ಕೊನೆ ದಿನಗಳವರೆಗೂ ಅವುಗಳಿಗೆ ಚ್ಯುತಿ ಬಾರದಂತೆ ಸಮರ್ಥವಾಗಿ ಆಡಳಿತ ನಡೆಸಿ ಬಹುದೊಡ್ಡ ಸುಸಜ್ಜಿತ ನಗರಕ್ಕೆ ಶಾಶ್ವತ ಭದ್ರ ಬುನಾದಿ ಹಾಕಿದರು ಎಂದರು.

ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಕೆಂಪೇಗೌಡರ ಪ್ರಾಧಿಕಾರ ರಚಿಸಲು 5 ಎಕರೆ ಭೂಮಿ ನೀಡಿ ಭೂಮಿ ಪೂಜೆ ನೆರವೇರಿಸಿದ್ದಾರೆ. ಈ ಸಂದರ್ಭ ಅವರಿಗೆ ಮತ್ತು ಸರ್ಕಾರಕ್ಕೆ ಜನಾಂಗದ ಪರವಾಗಿ ಅಭಿನಂದನೆ ಸಲ್ಲಿಸುತ್ತೇನೆ ಎಂದರು.

ಮಾಜಿ ಶಾಸಕಿ ಜೆ.ಸುನೀತಾ ವೀರಪ್ಪಗೌಡ ಮಾತನಾಡಿದರು. ಮಾಜಿ ಶಾಸಕ ಎಸ್.ಕೃಷ್ಣಪ್ಪ, ಪಿಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ಕೆ.ವಜ್ರೇಗೌಡ, ಒಕ್ಕಲಿಗರ ಸಂಘದ ಕಾರ್ಯದರ್ಶಿ ವೈ.ಎಸ್. ರಾಮಸ್ವಾಮಿ, ಪಿ.ಸ್ವಾಮಿನಾಥಗೌಡ, ಪುರಸಭಾ ಸದಸ್ಯ ಚೇತನ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮುದ್ದೇಗೌಡ, ಅಂಬೇಡ್ಕರ್ ಅಭಿವೃದ್ಧಿ ಸಂಘದ ಅಧ್ಯಕ್ಷ ಕರೋಹಟ್ಟಿ ಮಹದೇವಯ್ಯ, ಕಸಬಾ ಕೃಷಿ ಪತ್ತಿನ ಸಹಕಾರ ಸಂಘದ ಉಪಾಧ್ಯಕ್ಷ ಫಣೀಶ್ ಕುಮಾರ್, ಕೆ.ಎನ್.ಪ್ರಭುಸ್ವಾಮಿ, ಬನ್ನೂರು ಪುರಸಭೆ ಮಾಜಿ ಸದಸ್ಯ ಸಿದ್ದೇಗೌಡ, ಕೇತುಪುರ ಶಿವಕುಮಾರ್, ಹೊಸಕೋಟೆ ಗ್ರಾಪಂ ಮಾಜಿ ಅಧ್ಯಕ್ಷ ಆನಂದ್, ಕುಮಾರ್, ತಹಸೀಲ್ದಾರ್ ಸುರೇಶಾಚಾರ್, ಪುರಸಭೆ ಮುಖ್ಯಾಧಿಕಾರಿ ಬಿ.ಕೆ.ವಸಂತ ಕುಮಾರಿ, ಲೋಕೋಪಯೋಗಿ ಇಲಾಖೆಯ ಎಇಇ ಸತೀಶ್‌ಚಂದ್ರ, ತಾಪಂ ಇಓ ಅನಂತರಾಜು, ಬಿಇಓ ಶಿವಸ್ವಾಮಿ, ಸಿಡಿಪಿಓ ಗೋವಿಂದರಾಜು ಸೇರಿದಂತೆ ಮತ್ತಿತರರಿದ್ದರು.

ಮೂಗೂರಲ್ಲಿ ಶಾಲಾಭಿವೃದ್ಧಿ ಸಮಿತಿ ರಚನೆ



ಮೂಗೂರಲ್ಲಿ ಶಾಲಾಭಿವೃದ್ಧಿ ಸಮಿತಿ ರಚಿಸಲಾಯಿತು.

ಮೂಗೂರು, ಜೂ.29– ಇಲ್ಲಿನ ಸರ್ಕಾರಿ ಹಿರಿಯ ಪ್ರಾಥಮಿಕ ಬಾಲಕಿಯರ ಶಾಲೆಯ ಶಾಲಾಭಿವೃದ್ಧಿ ಸಮಿತಿ ರಚನೆ ಕರ್ನಾಟಕ ಪಬ್ಲಿಕ್ ಶಾಲೆ ಮುಖ್ಯಸ್ಥ ರಾಚಯ್ಯ ಅವರ ನೇತೃತ್ವದಲ್ಲಿ ನಡೆಯಿತು.

ಮೂಗೂರಿನ ಬಾಲಕಿಯರ ಪ್ರಾಥಮಿಕ ಶಾಲೆಯಲ್ಲಿ ಕರೆಯಲಾಗಿದ್ದ ಪೋಷಕರ ಸಭೆಯಲ್ಲಿ ನೂತನ ಸಮಿತಿ ರಚನೆಗೆ ಪೋಷಕರ ಸಮ್ಮತಿ ಮೇರೆಗೆ 18 ಮಂದಿ ಎಸ್‌ಡಿಎಂಸಿ ಸದಸ್ಯರನ್ನು ಆಯ್ಕೆ ಮಾಡಲಾಯಿತು. ಸಮಿತಿ ಅಧ್ಯಕ್ಷರಾಗಿ ಎಂ.ಕೆ. ಬಾಲುಶಂಕರ್, ಉಪಾಧ್ಯಕ್ಷೆಯಾಗಿ ಅಶ್ವಿನಿ ಅವರನ್ನು ಸಮಿತಿ ಸದಸ್ಯರು ಸರ್ವಾನುಮತದಿಂದ ಆಯ್ಕೆ ಮಾಡಿದರು.

ಎಸ್‌ಡಿಎಂಸಿ ಅಧ್ಯಕ್ಷ ಬಾಲುಶಂಕರ್ ಮಾತನಾಡಿ, ಶೈಕ್ಷಣಿಕವಾಗಿ ಶಾಲೆಯಲ್ಲಿ ಯಾವುದೇ ಸಮಸ್ಯೆ ಇದ್ದರೂ ಪೋಷಕರು ಸಮಿತಿ ಗಮನಕ್ಕೆ ತರಬೇಕು. ಶಾಲೆ ಅಭಿವೃದ್ಧಿಗೆ ಪೋಷಕರ ಸಹಕಾರ ಅತ್ಯಗತ್ಯ ಎಂದರು.

ಈ ವೇಳೆ ಕೆಪಿಎಸ್ ಶಾಲೆ ಉಪಪ್ರಾಂಶುಪಾಲ ಸಿ.ಪುಟ್ಟಸ್ವಾಮಿ, ಹಿರಿಯ ಶಿಕ್ಷಕರಾದ ಕೃಷ್ಣೇಗೌಡ ಹಾಗೂ ಶಾಲೆ ಶಿಕ್ಷಕ ವೃಂದ, ಪೋಷಕರು, ಉಪಸ್ಥಿತರಿದ್ದರು.

ವ್ಯಕ್ತಿ ನಾಪತ್ತೆ



ಬೆಟ್ಟದಪುರ, ಜೂ.29– ಇಲ್ಲಿಗೆ ಸಮೀಪದ ರಾಗಿ ಆಲದಮರ ಗ್ರಾಮದ ವಿನು(25) ನಾಪತ್ತೆಯಾಗಿರುವ ಸಂಬಂಧ ಬೆಟ್ಟದಪುರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಈತನ ಬಗ್ಗೆ ಮಾಹಿತಿ ಸಿಕ್ಕಲ್ಲಿ ಹತ್ತಿರದ ಪೊಲೀಸ್ ಠಾಣೆ ಅಥವಾ ಬೆಟ್ಟದಪುರ ಪೊಲೀಸ್ ಠಾಣೆ ಮೊ:9480805060 ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

ನಮಗೆ ಸಾಮಾಜಿಕ ಸ್ವಾತಂತ್ರ್ಯ ಬೇಕು

ಸಾಹಿತಿ ಡಾ.ಬಂಜಗೆರೆ ಜಯಪ್ರಕಾಶ್ ಅಭಿಪ್ರಾಯ



ನಂಜನಗೂಡಿನಲ್ಲಿ ಜನಜಾಗೃತಿ ಸಮಾವೇಶ ನಡೆಯಿತು.

ನಂಜನಗೂಡು, ಜೂ.29– ದೇಶದಲ್ಲಿ ರಾಜಕೀಯ ಸ್ವಾತಂತ್ರ್ಯಕ್ಕಿಂತ ಸಾಮಾಜಿಕ ಸ್ವಾತಂತ್ರ್ಯ ಬೇಕಾಗಿದೆ ಎಂದು ಸಾಹಿತಿ ಡಾ.ಬಂಜಗೆರೆ ಜಯಪ್ರಕಾಶ್ ಅಭಿಪ್ರಾಯಪಟ್ಟರು.

ನಗರದ ಶ್ರಾವಣ ಕಲ್ಯಾಣ ಮಂಟಪದಲ್ಲಿ ಬುದ್ಧ, ಬಸವಣ್ಣ, ಅಂಬೇಡ್ಕರ್ ಜಯಂತಿ ಅಂಗವಾಗಿ ನಡೆದ ಸಂವಿಧಾನದ ಆಶಯಗಳು ಮತ್ತು ಬಹುತ್ವದ ಭಾರತಕ್ಕಿರುವ ಸವಾಲುಗಳು ಜನಜಾಗೃತಿ ಸಮಾವೇಶವನ್ನು ಬುದ್ಧ, ಬಸವಣ್ಣ, ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸುವ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು, ಬೌದ್ಧ ಧರ್ಮದ ಪರಿಕಲ್ಪನೆಗಳನ್ನು ಸಮಾಜಕ್ಕೆ ತಿಳಿಸುವ ಕೆಲಸವನ್ನು ಯುವಕರು ಮಾಡಬೇಕಾಗಿದೆ. ಬುದ್ಧನ ಪ್ರಜ್ಞಾ, ಕರುಣ, ಮೈತ್ರಿಯನ್ನು ಯುವ ಜನತೆಗೆ ತಿಳಿಸಬೇಕು. ರಾಜಕೀಯ ಸ್ವಾತಂತ್ರ್ಯ ಮಾತ್ರವಲ್ಲದೇ ಪ್ರತಿಯೊಬ್ಬರಿಗೂ ಸಾಮಾಜಿಕ ಸ್ವಾತಂತ್ರ್ಯ ಅಗತ್ಯವಾಗಿದೆ. ನಮಗೆ ಬೇಕಾದ ಶಿಕ್ಷಣ, ಉದ್ಯೋಗ, ಸ್ನೇಹ, ಪ್ರೀತಿಯ ಜೊತೆಗೆ ಎಲ್ಲರಿಗೂ ಸಮಾನತೆಯ ಸ್ವಾತಂತ್ರ್ಯ ಸಿಗಬೇಕು. ಸಮಾನತೆ ಹುಟ್ಟಿದರೆ ಭ್ರಾತೃತ್ವ ಬೆಳೆಯುತ್ತದೆ. 11ನೇ ಶತಮಾನದಲ್ಲಿ ಬಸವಣ್ಣನವರ ಕಾಲಘಟ್ಟದಲ್ಲಿ ಲಿಂಗ ತಾರತಮ್ಯ ಹೋಗಲಾಡಿಸಿ ಸಮಾನತೆಯ ಸಮಾಜ ನಿರ್ಮಾಣವಾಗಿತ್ತು. ಜಾತ್ಯಾತೀತ ಎನ್ನುವುದು ಎಲ್ಲಾ ಸಮುದಾಯವನ್ನು ಒಳಗೊಳ್ಳುತ್ತದೆ. ಎಲ್ಲರ ಏಳಿಗೆಗೆ ಸಹಕಾರಿಯಾಗುತ್ತದೆ. ಇದರ ವಿರುದ್ಧ ಆರ್‌ಎಸ್‌ಎಸ್ ಇದೆ ಎಂದು ಹೇಳಿದ ಅವರು, ಒಂದೇ ಧರ್ಮ ರಾಷ್ಟ್ರ ಧರ್ಮವಾಗುತ್ತದೆ ಎಂದು ಹೇಳುತ್ತಿದ್ದಾರೆ. ಹಿಂದೂ ರಾಷ್ಟ್ರ ಮಾಡುವ ಹುನ್ನಾರ ನಡೆಸಲಾಗುತ್ತಿದೆ. ಧರ್ಮದ ಪ್ರತಿಪಾದನೆ ಯಲ್ಲಿ ಮೇಲು–ಕೀಳು, ಆಹಾರ ಸೇವನೆಯಲ್ಲೂ ಹಕ್ಕನ್ನು ಕಿತ್ತುಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗಿದೆ. ಭಾರತವು ಮಾಂಸಾಹಾರಿಗಳ ದೇಶವಾಗಿದೆ. ಸಂವಿಧಾನದ ಆಶಯಗಳನ್ನು ಪಾಲಿಸಬೇಕು. ಭಾರತದಲ್ಲಿ ಏಕ ಭಾಷೆ, ಒಂದೇ ಧರ್ಮ ಏರಲು ಸಾಧ್ಯವಿಲ್ಲ. ಪ್ರತಿ ಗ್ರಾಮಗಳಲ್ಲಿ ಸಂವಿಧಾನದ ಆಶಯಗಳನ್ನು ಗೌರವಿಸಿ ಭಾರತದ ಸಂವಿಧಾನವನ್ನು ಕಾಪಾಡಿಕೊಳ್ಳುವ ಜವಾಬ್ದಾರಿ ಎಲ್ಲರೂ ತೆಗೆದುಕೊಳ್ಳಬೇಕು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ದಸಂಸ ಜಿಲ್ಲಾ ಸಂಚಾಲಕ ಬೆಟ್ಟಯ್ಯ ಕೋಟೆ ಹಾಗೂ ರಾಜ್ಯ ಸಂಚಾಲಕ ಗುರುಪ್ರಸಾದ್ ಕೆರೆಗೋಡು ವಹಿಸಿದ್ದರು. ಈ ವೇಳೆ ದಸಂಸ ಜಿಲ್ಲಾ ಸಂಚಾಲಕ ಶಿವಕುಮಾರ್, ಜಿಲ್ಲಾ ಸಂಘಟನಾ ಸಂಚಾಲಕ ಶಂಭುಲಿಂಗಸ್ವಾಮಿ, ನಿಂಗ ರಾಜು, ಖಜಾಂಚಿ ಬಿ.ಡಿ.ಶಿವ ಬುದ್ದಿ, ಉಪವಿಭಾಗೀಯ ಸಂಚಾಲಕ ಮಂಜು, ಸಂಘಟನಾ ಸಂಚಾಲಕ ಕೃಷ್ಣಮೂರ್ತಿ, ತಾಲೂಕು ಸಂಚಾಲಕ ಮಹೇಶ್, ತಾಲೂಕು ಸಂಘಟನಾ ಸಂಚಾಲಕ ಸುರೇಶ್, ನಟರಾಜು, ಗಜೇಂದ್ರ, ಮರಿಸ್ವಾಮಿ, ಹೊಳೆಯಪ್ಪ, ಸಿದ್ದರಾಜು, ಮಹೇಶ್ ಸೇರಿದಂತೆ ಇತರರಿದ್ದರು.

ಹೆಚ್.ಡಿ.ಕೋಟೆ: 20 ಅಡಿ ಗುಂಡಿಗೆ ಬಿದ್ದ ಹಸು ರಕ್ಷಣೆ



ಗುಂಡಿಗೆ ಬಿದ್ದ ಹಸು ರಕ್ಷಣೆ ಮಾಡುತ್ತಿರುವುದು

ಹೆಚ್.ಡಿ.ಕೋಟೆ, ಜೂ.29– ತಾಲೂಕಿನ ಕಬಿನಿ ಜಲಾಶಯದ ಎದುರು ನೂತನ ಸೇತುವೆ ನಿರ್ಮಾಣಕ್ಕೆ ತೆಗೆದಿದ್ದ 20 ಅಡಿ ಗುಂಡಿಗೆ ಬಿದ್ದಿದ್ದ ಹಸುವನ್ನು ಗ್ರಾಮಸ್ಥರು ರಕ್ಷಿಸಿದ್ದಾರೆ.

ಹೊಸ ಬಿದರಹಳ್ಳಿ ಗ್ರಾಮದ ರೈತ ಶಿವಲಿಂಗನಾಯಕ ಅವರಿಗೆ ಸೇರಿದ ಹಸು ಗುಂಡಿಗೆ ಬಿದ್ದಿರುವುದು. ಈತ ಇಂದು ತಮ್ಮ ಹಸುವನ್ನು ಮೇಯಿಸುತ್ತಿದ್ದ ವೇಳೆ ಕಬಿನಿ ಜಲಾಶಯದ ಎದುರು ನೂತನ ಸೇತುವೆ ನಿರ್ಮಾಣಕ್ಕೆ ಪಿಲ್ಲರ್ ಹಾಕಲು ತೆಗೆದಿದ್ದ 20 ಅಡಿ ಗುಂಡಿಗೆ ಹಸು ಬಿದ್ದಿದೆ. ತಕ್ಷಣ ಬಿದರಹಳ್ಳಿ ಗ್ರಾಮಸ್ಥರಾದ ನಾಗರಾಜು, ಪ್ರಕಾಶ್, ಚಿಕ್ಕಣ್ಣನಾಯಕ, ಸಿದ್ದರಾಜು, ಚಂದ್ರು, ಭೀಮನಾಯಕ, ಶಿವಲಿಂಗ ನಾಯಕ ಸೇರಿದಂತೆ ಇನ್ನಿತರರು ಕ್ರೇನ್ ಮೂಲಕ ಹಸುವನ್ನು ರಕ್ಷಿಸಿದ್ದಾರೆ.

ನೂತನ ಸೇತುವೆ ನಿರ್ಮಾಣಕ್ಕೆ ತೆಗೆದಿರುವ ಗುಂಡಿಗಳ ಸಮೀಪ ಬ್ಯಾರಿಕೇಡ್ ಅಳವಡಿಸಿ, ಕಾವಲುಗಾರರನ್ನು ಹಾಕಿ ಇಂತಹ ಅನಾಹುತ ಸಂಭವಿಸದಂತೆ ಎಚ್ಚರ ವಹಿಸುವಂತೆ ಗ್ರಾಮಸ್ಥರು ಕಬಿನಿ ಜಲಾಶಯದ ಅಧಿಕಾರಿಗಳಿಗೆ ಮನವಿ ಮಾಡಿದ್ದಾರೆ.

ವೆಂಕಟಮ್ಮ ನಿಧನ



ಹೆಚ್.ಡಿ.ಕೋಟೆ, ಜೂ.29– ತಾಲೂಕಿನ ಹೆಬ್ಬಲುಗುಪ್ಪೆ ಗ್ರಾಮದ ನಿವಾಸಿ, ಗ್ರಾಪಂ ಮಾಜಿ ಅಧ್ಯಕ್ಷ ಶಿವಪ್ಪಶೆಟ್ಟಿ ಅವರ ತಾಯಿ ವೆಂಕಟಮ್ಮ (77) ಭಾನುವಾರ ನಿಧನರಾದರು. ಮೃತರು ಪತಿ, ಇಬ್ಬರು ಪುತ್ರರು, ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸೋಮವಾರ ಸ್ವಗ್ರಾಮದ ರುದ್ರಭೂಮಿಯಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಮಿತ್ರ

ಸೋಮವಾರ 30 ಜೂನ್ 2025

ಆಷಾಡ ಶುಕ್ರವಾರದಂದು ಚಾಮುಂಡಿಬೆಟ್ಟದಲ್ಲಿ

ಭಕ್ತರಿಗೆ ಸಮಸ್ಯೆ ಆಗದಂತೆ ಕ್ರಮ ವಹಿಸಲು ಅಧಿಕಾರಿಗಳಿಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಸೂಚನೆ

ಮೈಸೂರು,ಜೂ.29(ಎಂಟಿವೈ)– ಆಷಾಢಮಾಸ ಶುಕ್ರವಾರ ಸೇರಿದಂತೆ ವಾರಾಂತ್ಯ ದಿನದಂದು ಚಾಮುಂಡಿಬೆಟ್ಟಕ್ಕೆ ಬರುವ ಭಕ್ತರು ದೇವರ ದರ್ಶನ ಪಡೆಯಲು ಯಾವುದೇ ಸಮಸ್ಯೆ ಆಗದಂತೆ ಕಟ್ಟೆಚ್ಚರ ವಹಿಸುವಂತೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಸೂಚಿಸಿದ್ದಾರೆ.

ಆಷಾಡ ಮಾಸದ ಮೊದಲ ಶುಕ್ರವಾರವಾದ ಜೂ.27ರಂದು ಚಾಮುಂಡಿಬೆಟ್ಟಕ್ಕೆ ಅಪಾರ ಸಂಖ್ಯೆ ಭಕ್ತರು ಆಗಮಿಸಿದ್ದರಿಂದ ಉಂಟಾಗಿದ್ದ ಕೆಲ ಗೊಂದಲದ ಹಿನ್ನೆಲೆಯಲ್ಲಿ ಇಂದು ಬೆಳಗ್ಗೆ ಚಾಮುಂಡಿಬೆಟ್ಟಕ್ಕೆ ಆಗಮಿಸಿದ ಸಚಿವರು, ಅಧಿಕಾರಿಗಳಿಂದ ಮಾಹಿತಿ ಪಡೆದರು. ಅಲ್ಲದೆ, ಮೊದಲ ವಾರ ಆಗಿರುವ ಗೊಂದಲ ನಿವಾರಿಸಿ, ಮುಂದಿನ ವಾರದಿಂದು ಬೆಟ್ಟಕ್ಕೆ ಬರುವ ಭಕ್ತರಿಗೆ ತೊಂದರೆಯಾಗದಂತೆ ಕ್ರಮ ಕೈಗೊಳ್ಳಬೇಕು. ಆಗಿರುವ ನ್ಯೂನತೆ ಸರಿಪಡಿಸಿ, ಭಕ್ತರಿಗೆ ನೆರವಾಗಬೇಕು ಎಂದು ಸಲಹೆ ನೀಡಿದರು.

ಬೆಟ್ಟದ ಪಾರ್ಕಿಂಗ್ ಸ್ಥಳದಿಂದಲೇ ಪರಿಶೀಲನೆ ಆರಂಭಿಸಿದ ಸಚಿವರಿಗೆ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ ಹಾಗೂ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಡಾ.ಎಂ.ಜೆ.ರೂಪ ಅವರು ಬೆಟ್ಟದಲ್ಲಿ ಆಷಾಡ ಶುಕ್ರವಾರದ ವಿಶೇಷ ಪೂಜಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ಆಗಮಿಸುವ ಭಕ್ತರ ಸುರಕ್ಷತೆಗಾಗಿ ಕೈಗೊಂಡಿರುವ ಕ್ರಮ ಕುರಿತಂತೆ ವಿವರಣೆ ನೀಡಿದರು. ಧರ್ಮ ದರ್ಶನ, 300 ರೂ. ಹಾಗೂ ಎರಡು ಸಾವಿರ ರೂ. ಟಿಕೆಟ್ ಪಡೆದ ಭಕ್ತರಿಗಾಗಿ ಪ್ರತ್ಯೇಕ ಲೈನ್ ವ್ಯವಸ್ಥೆ ಮಾಡಲಾಗಿದೆ. ಎರಡು ಸಾವಿರ ರೂ.ಟಿಕೆಟ್ ಪಡೆದವರಿಗೆ ದೇವಸ್ಥಾನಕ್ಕೆ ನೇರವಾಗಿ ಹೋಗಲು ವ್ಯವಸ್ಥೆ ಇದ್ದು, ದೇವಾಲಯದ ಗರ್ಭಗುಡಿ ಮುಂಭಾಗದ ಪ್ರಾಂಗಣದಿಂದ ಇತರೆ ಭಕ್ತರೊಂದಿಗೆ ದರ್ಶನ ಮಾಡಬಹುದಾಗಿದೆ ಎಂದು ತಿಳಿಸಿದರು.



ಆಷಾಢ ಶುಕ್ರವಾರದ ಅಂಗವಾಗಿ ಭಕ್ತರ ಅನುಕೂಲಕ್ಕಾಗಿ ಚಾಮುಂಡಿಬೆಟ್ಟದಲ್ಲಿ ಮಾಡಿರುವ ವ್ಯವಸ್ಥೆಯನ್ನು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಪರಿಶೀಲಿಸಿದರು.

ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಮಾತನಾಡಿ, ಆಷಾಡ ಮಾಸದ ಶುಕ್ರವಾರ, ಶನಿವಾರ ಹಾಗೂ ಭಾನುವಾರದಂದು ಬೆಟ್ಟಕ್ಕೆ ಬರುವ ಭಕ್ತರು ಹಾಗೂ ಪ್ರವಾಸಿಗರ ಖಾಸಗಿ ವಾಹನಗಳಿಗೆ ಬೆಟ್ಟಕ್ಕೆ ಪ್ರವೇಶ ನಿರ್ಬಂಧಿಸಲಾಗಿದೆ. ಇದರಿಂದ ಬೆಟ್ಟದಲ್ಲಿ ಸುಗಮ ಸಂಚಾರ ಸಾಧ್ಯವಾಗಿದೆ ಲಲಿತಮಹಲ್ ಪ್ಯಾಲೇಸ್ ಮೈದಾನದಲ್ಲಿ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗಿದೆ. ಬಗ್ಗೆ ಯಾವುದೇ ಸಮಸ್ಯೆ ಇಲ್ಲ. ಆಯಾಯ ಸ್ಥಳಗಳಲ್ಲಿ ವಾಹನ ನಿಲುಗಡೆ ಮಾಡಲು ಸೂಚನೆ ನೀಡಲಾಗಿದೆ ಎಂದು ತಿಳಿಸಿದರು.

ಮಳಿಗೆ ತೆರೆಯಲು ಅವಕಾಶ ಕೊಡಿ: ಆಷಾಡಮಾಸದ ಶುಕ್ರವಾರ ಹೊರತುಪಡಿಸಿ ಉಳಿದ ದಿನ ಬೆಟ್ಟದಲ್ಲಿರುವ ಮಳಿಗೆಗಳನ್ನು ತೆರೆಯಲು ಅವಕಾಶ ನೀಡುವಂತೆ ವ್ಯಾಪಾರಿಗಳು ಸಚಿವರಿಗೆ ಮನವಿ ಮಾಡಿದರು. ಶುಕ್ರವಾರದಂದು ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಬರುವುದರಿಂದ ತೊಂದರೆಯಾಗದಂತೆ ನೋಡಿಕೊಳ್ಳಲು ಸ್ವಯಂ ಪ್ರೇರಣೆಯಿಂದ ಒಂದು ದಿನ ನಾವೇ ಮಳಿಗೆ ತೆರೆಯುವುದಿಲ್ಲ. ಆದರೆ, ಶನಿವಾರ ಮತ್ತು ಭಾನುವಾರದಂದು ಮಳಿಗೆ ತೆರೆಯಲು ಅವಕಾಶ ನೀಡದೇ ಇದ್ದರೆ ತೊಂದರೆಯಾಗುತ್ತದೆ. ಆಷಾಢ ಮಾಸದ ಒಂದು ತಿಂಗಳಲ್ಲಿ ನಡೆಯುವ ವ್ಯಾಪಾರ ಒಂದು ವರ್ಷಕ್ಕೆ ಜೀವನ ಮಾಡಬಹುದು. ತಿಂಗಳಲ್ಲಿ 12 ದಿನಗಳು ಬಾಗಿಲು ಹಾಕಿದರೆ ಕಷ್ಟವಾಗುತ್ತದೆ ಎಂದು ಅಳಲು ತೋಡಿಕೊಂಡರು.

ಇದಕ್ಕೆ ಪ್ರತಿಕ್ರಿಯಿಸಿದ ಸಚಿವರು, ಆಷಾಡ ಶುಕ್ರವಾರ ಹಾಗೂ ವಾರಾಂತ್ಯ ರಜೆ ದಿನದಂದು ಲಕ್ಷಾಂತರ ಭಕ್ತರು ಬೆಟ್ಟಕ್ಕೆ ಆಗಮಿಸುತ್ತಾರೆ. ಭಕ್ತರ ಹಿತ ಕಾಪಾಡಲು ಕೆಲವು ಮಾರ್ಪಾಡು ಮಾಡಬೇಕಾಗುತ್ತದೆ. ಆದರೆ, ಭಕ್ತರನ್ನು ನಂಬಿಕೊಂಡಿರುವ ವ್ಯಾಪಾರಿಗಳಿಗೂ ಅನುಕೂಲವಾಗುವಂತೆ ಪರಿಶೀಲಿಸಲಾಗುತ್ತದೆ. ಜಿಲ್ಲಾಧಿಕಾರಿಗಳು ಈ ಬಗ್ಗೆ ಪರಿಶೀಲಿಸಿ ಅಗತ್ಯ ತೀರ್ಮಾನ ಕೈಗೊಳ್ಳಲಿದ್ದಾರೆ ಎಂದರು.

ವ್ಯಾಪಾರಿಗಳಿಗೆ ಅವಕಾಶ ಮಾಡಿಕೊಡಬೇಕು. ಏಕೆಂದರೆ ಎಲ್ಲರಿಗೂ ಜೀವನ ಮುಖ್ಯ ಎಂಬುದು ಗೊತ್ತಿದೆ. ನಿರೀಕ್ಷೆಗೂ ಮೀರಿ ಜನರು ಬರುವ ಕಾರಣ ನಾವು ಅದಕ್ಕೆ ತಕ್ಕಂತೆ ಮಾಡಬೇಕು. ಗ್ರಾಮಸ್ಥರಿಗೆ ಓಡಾಡಲು ತೊಂದರೆ ಆಗಿರುವ ಬ್ಯಾರಿಕೇಡ್‌ಗಳನ್ನು ತೆಗೆಸಲು ಸೂಚಿಸುವುದಾಗಿ ತಿಳಿಸಿದರು.

ಈ ಸಂದರ್ಭದಲ್ಲಿ ಜಿಪಂ ಸಿಇಓ ಎಸ್.ಯುಕೇಶ್ ಕುಮಾರ್, ನಗರಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್, ಡಿಸಿಪಿಗಳಾದ ಎಂ.ಮುತ್ತುರಾಜ್, ಕೆ.ಎಸ್.ಸುಂದರರಾಜ್ ಮತ್ತಿತರರು ಹಾಜರಿದ್ದರು.

> ಆಷಾಢಮಾಸದ ದರ್ಶನಕ್ಕೆ ಆಗಮಿಸುವ ಭಕ್ತರಿಗೆ ಮಾಡಿರುವ ವ್ಯವಸ್ಥೆ ಚೆನ್ನಾಗಿದೆ. ಸಣ್ಣ ಪುಟ್ಟ ವ್ಯತ್ಯಾಸಗಳು ಉಂಟಾಗುವುದು ಸಹಜ. ಮುಂದೆ ಅವುಗಳನ್ನು ಸರಿಪಡಿಸಿಕೊಳ್ಳಲಾಗುವುದು. ಆಷಾಢ ಶುಕ್ರವಾರ ಸಾರಿಗೆ ಬಸ್‌ಗಳಲ್ಲಿ 80 ಸಾವಿರ, ಮೆಟ್ಟಿಲುಗಳಲ್ಲಿ 50 ಸಾವಿರ ಮಂದಿ ಆಗಮಿಸಿ ದರ್ಶನ ಪಡೆದಿರುವ ಮಾಹಿತಿ ಇದೆ ಹಾಗಾಗಿ, ಅನಾನುಕೂಲವಾಗದಂತೆ ತಡೆಯಲು ಏನಾದರೂ ಸ್ಟ್ರೀಮ್‌ಲೈನ್ ಮಾಡುವುದು ಅಗತ್ಯ ವಿದ್ದರೆ ಮಾಡಬಹುದೆಂದು ಅಧಿಕಾರಿಗಳಿಗೆ ಸಲಹೆ ನೀಡಿದ್ದೇನೆ
> - ಡಾ.ಹೆಚ್.ಸಿ.ಮಹದೇವಪ್ಪ,
> ಜಿಲ್ಲಾ ಉಸ್ತುವಾರಿ ಸಚಿವ

ಸೆಪ್ಟಂಬರ್‌ನಲ್ಲಿ ಯಾವ ಕ್ರಾಂತಿಯೂ ಇಲ್ಲ, ಸಿದ್ದರಾಮಯ್ಯ ಸಿಎಂ ಆಗಿ ಪೂರ್ಣಾವಧಿ ಪೂರೈಸಲಿದ್ದಾರೆ

ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ



ಮೈಸೂರು, ಜೂ.29(ಎಂಟಿವೈ)– ಸೆಪ್ಟಂಬರ್ ತಿಂಗಳಲ್ಲಿ ಯಾವ ಕ್ರಾಂತಿಯೂ, ಮಹಾಕ್ರಾಂತಿಯೂ ನಡೆಯುವುದಿಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಕಾಂಗ್ರೆಸ್ ಸರ್ಕಾರ ಸ್ಥಿರತೆ ಮತ್ತು ಭದ್ರತೆಯಿಂದ ಪೂರ್ಣಾವಧಿ ಪೂರೈಸಲಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್. ಸಿ. ಮಹದೇವಪ್ಪ, ವಿಪಕ್ಷ ನಾಯಕ ಆರ್. ಅಶೋಕ್ ಅವರಿಗೆ ತಿರುಗೇಟು ನೀಡಿದ್ದಾರೆ.

ಸೆಪ್ಟಂಬರ್‌ನಲ್ಲಾಗುವ ಕ್ರಾಂತಿಯಲ್ಲಿ ಮುಖ್ಯಮಂತ್ರಿ ಬದಲಾಗುತ್ತಾರೆ ಎಂದು ವಿಪಕ್ಷ ನಾಯಕ ಆರ್.ಅಶೋಕ್ ನೀಡಿರುವ ಹೇಳಿಕೆಗೆ ಮೈಸೂರಲ್ಲಿ ಭಾನುವಾರ ಪ್ರತಿಕ್ರಿಯಿಸಿದ ಅವರು, ಕ್ರಾಂತಿಯೂ, ಮಹಾಕ್ರಾಂತಿಯೂ ನಡೆಯುವುದಿಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ ಗಟ್ಟಿಯಾಗಿ ಖುರ್ಚಿ ಮೇಲೆ ಕುಳಿತಿದ್ದಾರೆ. ಸರ್ಕಾರ ಸುಭದ್ರವಾಗಿದೆ. ಸಿಎಂ ಸ್ಥಾನದ ಬಯಕೆ ಎಲ್ಲರಲ್ಲೂ ಇರುವುದು ಸಹಜ. ಇರುವ ಕುರ್ಚಿಯಲ್ಲಿ ಕುಳಿತಿರುವುದರಿಂದ ಇನ್ನೆಲ್ಲಿ ಕೂರಲು ಸಾಧ್ಯವಿದೆ. ಆ ಕಾರಣದಿಂದ ಐದು ವರ್ಷಗಳ ಕಾಲ ಯಾವ ಗೊಂದಲ ಇಲ್ಲದೆ ಮುಂದುವರಿಯುತ್ತದೆ. ನಾವು ವರ್ಷಕ್ಕೊಮ್ಮೆ ಬರುವ ಸಂಕ್ರಾಂತಿ ಬಗ್ಗೆ ಕೇಳಿದ್ದೇವೆ. ಪ್ರಜಾಪ್ರಭುತ್ವ ಮತ್ತು ಸಂವಿಧಾನದ ರಕ್ಷಣೆಗಾಗಿ ಕ್ರಾಂತಿಗಳು ನಡೆಯುತ್ತಲೇ ಇರುತ್ತದೆ. ಸೆಪ್ಟಂಬರ್‌ನಲ್ಲಿ ನಡೆಯುವ ಕ್ರಾಂತಿ ನನಗೇನೂ ಗೊತ್ತಿಲ್ಲ ಎಂದರು.

ಪ್ರತಿಪಕ್ಷದ ನಾಯಕ ಆರ್.ಅಶೋಕ್ ಕಾಂಗ್ರೆಸ್ ಹೈಕಮಾಂಡ್ ಅಲ್ಲ. ಇಕ್ಬಾಲ್ ಅನ್ಸಾರಿ ಅವರು ಹೊಸದಿಲ್ಲಿಯಲ್ಲಿ ನಡೆದ ಸಭೆಯ ಬಗ್ಗೆ ಯಾವ ರೀತಿಯಲ್ಲಿ ಮಾತನಾಡಿದ್ದಾರೋ ಗೊತ್ತಿಲ್ಲ. ಆ ಸಭೆಯಲ್ಲಿ ನಾನಂತೂ ಇರಲಿಲ್ಲ. ಯಾವ್ಯಾವ ಅರ್ಥದಲ್ಲಿ ಏನೇನು ಮಾತನಾಡುತ್ತಾರೋ ಎಂಬುದು ಗೊತ್ತಿಲ್ಲ. ಅವರನ್ನೇ ಕೇಳಬಹುದು ಎಂದು ಹೇಳಿದರು. ಅಧಿಕಾರ ಹಂಚಿಕೆ ಕುರಿತು ಒಪ್ಪಂದವಾಗಿರುವುದು ಗೊತ್ತಿಲ್ಲ. ಅದನ್ನು ಹೈಕಮಾಂಡ್ ನಾಯಕರನ್ನು ಕೇಳಬೇಕು. ಸಿದ್ದರಾಮಯ್ಯ ಅವರು ಉತ್ತಮವಾಗಿ ಆಡಳಿತ ನೀಡುತ್ತಿದ್ದಾರೆ. ಮುಂದೆಯೂ ನೀಡಲಿದ್ದಾರೆ. ಇದರಲ್ಲಿ ಯಾವ ಅನುಮಾನ ಬೇಡ ಎಂದು ಸ್ಪಷ್ಟಪಡಿಸಿದರು.

ಆನೆ ನಡೆದುಕೊಂಡು ಹೋಗುವಾಗ ಕೆಳಗೆ ಬೀಳುತ್ತದೆ ಎಂದು ಕೆಲವರು ಕಾಯುತ್ತಿರುತ್ತಾರೆ. ಅದು ಬೀಳಲ್ಲ. ಬಿಜೆಪಿಯವರು ಕಾಯುವುದನ್ನು ಬಿಡುತ್ತಿಲ್ಲ. ಯಾವುದೇ ಕಾರಣಕ್ಕೂ ಬಿಜೆಪಿ ನಾಯಕರಿಂದ ಸರ್ಕಾರವನ್ನು ಅಸ್ಥಿರಗೊಳಿಸುವುದಕ್ಕೆ ಸಾಧ್ಯವಿಲ್ಲ. ಸಿದ್ದರಾಮಯ್ಯ ಸಿಎಂ ಸ್ಥಾನದಲ್ಲಿದ್ದಾರೆ. ಅವರೇ ದಸರಾ ಮಹೋತ್ಸವವನ್ನು ಉದ್ಘಾಟಿಸಲಿದ್ದಾರೆ. ಅಶೋಕ್ ಹೇಳಿದಂತೆ ಯಾವ ಬದಲಾವಣೆಯೂ ಇಲ್ಲ ಎಂದು ತಿರುಗೇಟು ನೀಡಿದರು.

ಕಾಮಾಕ್ಷಿ ಆಸ್ಪತ್ರೆಯಲ್ಲಿ ಸಂಸ್ಥಾಪನ ದಿನ, 52ನೇ ವಾರ್ಷಿಕೋತ್ಸವ ಆಚರಣೆ

25 ವರ್ಷಗಳಿಂದ ಸೇವೆ ಸಲ್ಲಿಸಿದವರಿಗೆ ಸನ್ಮಾನ, ಪ್ರತಿಭಾವಂತ ಮಕ್ಕಳಿಗೆ ಪುರಸ್ಕಾರ ವಿತರಣೆ

ಮೈಸೂರು, ಜೂ.29(ಜಿಎ)–ಮೈಸೂರಿನ ಕಾಮಾಕ್ಷಿ ಆಸ್ಪತ್ರೆ ಆವರಣದಲ್ಲಿ ಆಸ್ಪತ್ರೆಯ ಸಂಸ್ಥಾಪನ ದಿನ ಮತ್ತು 52ನೇ ವಾರ್ಷಿಕೋತ್ಸವವನ್ನು ಆಚರಿಸಲಾಯಿತು.

ಬಂಟ್ವಾಳ ಮಾಧವ ಶೆಣೈ ಮತ್ತು ಶ್ರೀಮತಿ ಸುಲೋಚನಾ ಮಾಧವ ಶೆಣೈ ಅವರು ಆಸ್ಪತ್ರೆಯನ್ನು ಸಹಾನುಭೂತಿ, ಕೈಗೆಟುಕುವ ಮತ್ತು ಗುಣಮಟ್ಟದ ಆರೋಗ್ಯ ಸೇವೆಯನ್ನು ಒದಗಿಸುವ ಉದಾತ್ತ ಧ್ಯೇಯದೊಂದಿಗೆ ಕಾಮಾಕ್ಷಿ ಸಂಸ್ಥೆಗೆ ಅಡಿಪಾಯ ಹಾಕಿದರು. ಇಂದು ಈ ಸಂಸ್ಥೆ 52 ವರ್ಷಗಳ ಪೂರ್ಣಗೊಳಿಸಿದ್ದು, ಭರವಸೆಯ ದಾರಿದೀಪವಾಗಿದೆ, ಕ್ಲಿನಿಕಲ್ ಶ್ರೇಷ್ಠತೆಯ ಕೇಂದ್ರವಾಗಿದೆ ಮತ್ತು ಆರೋಗ್ಯ ರಕ್ಷಣೆಯಲ್ಲಿ ವಿಶ್ವಾಸಾರ್ಹತೆಗೆ ಹೆಸರಾಗಿದೆ.

ವಾರ್ಷಿಕೋತ್ಸವದ ಅಂಗವಾಗಿ ಆಸ್ಪತ್ರೆ ಆವರಣದಲ್ಲಿರುವ ಗಣೇಶ ದೇವಸ್ಥಾನದಲ್ಲಿ ನಡೆದ ಪೂಜೆಯಲ್ಲಿ ಸಂಸ್ಥೆಯ ಮ್ಯಾನೇಜಿಂಗ್ ಟ್ರಸ್ಟಿ ಎಂ.ಮಹೇಶ್ ಶೆಣೈ, ಅಧ್ಯಕ್ಷ ವಿಶ್ವನಾಥ ರಾವ್, ಜಂಟಿ ಮ್ಯಾನೇಜಿಂಗ್ ಟ್ರಸ್ಟಿ ಗಜಾನನ ಶೆಣೈ, ಆಡಳಿತಗಾರರಾದ ಡಾ.ಕೆ. ಆರ್.ಕಾಮತ್, ಟ್ರಸ್ಟಿಗಳಾದ ಸುರೇಶ್ ರಾವ್, ಜಗನ್ನಾಥ ಶೆಣೈ ಮತ್ತು ಮನೋಜ್ ಶೆಣೈ ಪಾಲ್ಗೊಂಡು ನಂತರ ಆಸ್ಪತ್ರೆಯಲ್ಲಿರುವ ಎಲ್ಲಾ ಒಳರೋಗಿಗಳಿಗೆ ಹಣ್ಣು ವಿತರಿಸಿದರು.

ನಂತರ ಸಂಸ್ಥೆಯಲ್ಲಿ ಕಳೆದ 25 ವರ್ಷಗಳಿಂದ ಸೇವೆ ಸಲ್ಲಿಸಿರುವ ಶ್ರೀಮತಿ ವನಜಾಕ್ಷಿ, ವಿಶ್ವನಾಥ್, ಸುಬ್ರಹ್ಮಣ್ಯ, ಶಂಕರ್ ಅವರನ್ನು ಗೌರವಿಸಲಾಯಿತು. ಕಾಮಾಕ್ಷಿ ಆಸ್ಪತ್ರೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಮಕ್ಕಳು 2024–25ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಶೇ.80 ಮತ್ತು ಅದಕ್ಕಿಂತ ಹೆಚ್ಚಿನ ಅಂಕಗಳನ್ನು ಗಳಿಸಿದ ವಿದ್ಯಾರ್ಥಿಗಳಾದ ಸಂಜನಾ, ಚಂದನಾ, ಮಾಸ್. ಚಿರಾಗ್ ಅವರುಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಅಭಿನಂದಿಸಲಾಯಿತು.

ಈ ಸಂದರ್ಭದಲ್ಲಿ ಜನರಲ್ ಮ್ಯಾನೇಜರ್ ಎಸ್.ವಿ.ಪ್ರಸನ್ನ ಕುಮಾರ್, ಸಹಾಯಕ ಜನರಲ್ ಮ್ಯಾನೇಜರ್ ಜಿ.ಎನ್. ಭಾಸ್ಕರ್, ನಿರ್ವಹಣಾ ಸಂಯೋಜಕಿ ಶೃತಿ ಅಶೋಕ, ಡಾ. ಸಿ. ಡಿ. ಶ್ರೀನಿವಾಸ ಮೂರ್ತಿ, ಡಾ. ಸಿ. ಜಿ. ನರಸಿಂಹನ್, ಡಾ. ಯು. ಜಿ. ಶೆಣೈ, ಡಾ. ಅರುಣ್ ಶ್ರೀನಿವಾಸ್, ಡಾ.ಕೆ.ಆರ್.ನಾಗಭೂಷಣ್, ಡಾ. ಎಂ. ಡಿ. ಕೆಂಪರಾಜು, ಡಾ. ಸಿರ್ನಿವಾಸ್ ಸೇರಿದಂತೆ ಮತ್ತಿತರರು ಪಾಲ್ಗೊಂಡಿದ್ದರು.



ಮೈಸೂರಿನ ಕಾಮಾಕ್ಷಿ ಆಸ್ಪತ್ರೆ ಆವರಣದಲ್ಲಿ ಆಸ್ಪತ್ರೆಯ ಸಂಸ್ಥಾಪನ ದಿನ ಮತ್ತು 52ನೇ ವಾರ್ಷಿಕೋತ್ಸವವನ್ನು ಆಚರಿಸಿ, ಸಂಸ್ಥೆಯಲ್ಲಿ ಕಳೆದ 25 ವರ್ಷಗಳಿಂದ ಸೇವೆ ಸಲ್ಲಿಸಿರುವ ಸಿಬ್ಬಂದಿಗಳನ್ನು ಅಭಿನಂದಿಸಲಾಯಿತು.

ಮಹಿಳೆ ನಾಪತ್ತೆ



ಮೈಸೂರು, ಜೂ.29– ಮೈಸೂರಿನ ಶ್ರೀರಾಂಪುರ ಬಡಾವಣೆಯಿಂದ ಮಹಿಳೆಯೊಬ್ಬರು ಕಾಣೆಯಾಗಿದ್ದಾರೆ. ಇಲ್ಲಿನ ಎರಡನೇ ಹಂತ, ಕುಂದಾಯನಗರದಲ್ಲಿ ಮಗಳು–ಅಳಿಯನೊಂದಿಗೆ ವಾಸವಿದ್ದ ಮಹದೇವಮ್ಮ(54) ಅವರು ಶನಿವಾರ ಬೆಳಗ್ಗೆ ಮನೆಯಿಂದ ಹೊರಹೋದವರು ಈವರೆಗೂ ವಾಪಸ್ಸಾಗಿಲ್ಲ. ಎಲ್ಲಾ ಕಡೆ ಹುಡುಕಾಡಿದರೂ ಅವರ ಬಗ್ಗೆ ಸುಳಿವು ಸಿಕ್ಕಿಲ್ಲ ಎಂದು ಕುಟುಂಬದವರು ಕುವೆಂಪುನಗರ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಮಹದೇವಮ್ಮ ಅವರ ಬಗ್ಗೆ ಸುಳಿವು ಸಿಕ್ಕವರು ಕುವೆಂಪುನಗರ ಪೊಲೀಸ್ ಠಾಣೆ(0821–2418124) ಅಥವಾ ಕುಟುಂಬದವರಿಗೆ(9513594135) ಮಾಹಿತಿ ನೀಡುವಂತೆ ಕೋರಲಾಗಿದೆ.

ಮೈಸೂರಿನ ಬಹುತೇಕ ಭಾಗಕ್ಕೆ ನೀರು ಸರಬರಾಜಾಗುವ

ಜಲ ಸಂಗ್ರಹಗಾರ ಈಗ ಸುರಕ್ಷಿತವಾಗಿಲ್ಲ!

ನಾಯಿ–ನರಿಗಳ ಓಡಾಟ; ಮೂತ್ರ ವಿಸರ್ಜನೆ ಪ್ರಶಸ್ತ ಸ್ಥಳವಾಗಿ ಪರಿವರ್ತನೆ

ಮೈಸೂರು, ಜೂ.29– ಮೈಸೂರು ಯಾದವಗಿರಿಯಲ್ಲಿನ ಉನ್ನತ ಮಟ್ಟದ ಜಲ ಸಂಗ್ರಹಗಾರ (ಹೆಚ್‌ಎಲ್‌ಆರ್)ದ ಕಾಂಪೌಂಡ್ ನೆಲಸಮಗೊಂಡಿರುವುದರಿಂದ ಹಲವು ಸಮಸ್ಯೆಗಳು ಸೃಷ್ಟಿಯಾಗಿವೆ ಎಂದು ಸ್ಥಳೀಯ ನಿವಾಸಿಗಳು ಬೇಸರ ವ್ಯಕ್ತಪಡಿಸಿದ್ದಾರೆ.

ಯಾದವಗಿರಿ ಒಂದನೇ ಮುಖ್ಯರಸ್ತೆ ಕಡೆಗಿರುವ ಜಲಸಂಗ್ರಹಗಾರದ ಕಾಂಪೌಂಡ್, ಬೃಹತ್ ಪೈಪ್‌ಲೈನ್ ಕಾಮಗಾರಿ ವೇಳೆ ನೆಲಕ್ಕುರುಳಿತ್ತು. ಆದರೆ ಕಾಂಪೌಂಡ್ ಮರುನಿರ್ಮಾಣ ವಿಳಂಬವಾಗಿರುವುದರಿಂದ ಜಲ ಸಂಗ್ರಹಗಾರದ ಸುರಕ್ಷತೆಗೆ ಅಪಾಯವಾಗುವುದರ ಜೊತೆಗೆ ಅನೈರ್ಮಲ್ಯಕ್ಕೆ ಆಸ್ಪದ ಮಾಡಿಕೊಟ್ಟಂತಾಗಿದೆ.

ಕೆಲವರು ಈ ಜಾಗದಲ್ಲಿ ವಾಹನ ನಿಲ್ಲಿಸಿ, ಜಲಸಂಗ್ರಹಗಾರದ ಕಟ್ಟಡಕ್ಕೆ ಮೂತ್ರ ವಿಸರ್ಜನೆ ಮಾಡುತ್ತಾರೆ. ವಾಹನಗಳಲ್ಲಿ ಹೋಗುತ್ತಲೇ ಪ್ಲಾಸ್ಟಿಕ್ ಕವರ್‌ಗಳಲ್ಲಿ ಕಟ್ಟಿದ್ದ ತ್ಯಾಜ್ಯವನ್ನು ಇಲ್ಲಿ ಬೀಸಾಡಿ ಹೋಗುತ್ತಾರೆ. ಧೂಮಪಾನ ಹಾಗೂ ಮದ್ಯಪಾನ ಮಾಡುವವರಿಗೂ ಪ್ರಶಸ್ತ ಸ್ಥಳವಾಗಿದೆ. ಬೀದಿ ನಾಯಿಗಳು ಹಿಂಡು ಹಿಂಡಾಗಿ ಜಲಸಂಗ್ರಹಗಾರದ ಪ್ರದೇಶದಲ್ಲೆಲ್ಲಾ ಅಡ್ಡಾಡುತ್ತಿರುತ್ತವೆ. ಬೃಹತ್ ಪೈಪ್‌ಗಳ ಅವಶೇಷಗಳನ್ನು ಅಲ್ಲೇ ಬಿಟ್ಟಿದ್ದು, ಅವುಗಳ ಸುತ್ತಲೂ ಗಿಡಗಂಟಿ ಬೆಳೆಯುವುದರಿಂದ ವಿಷ ಜಂತುಗಳು ಹಾಗೂ ಸೊಳ್ಳೆ ಸಂತತಿ ಹೆಚ್ಚುತ್ತಿದೆ.

ಭದ್ರವಾದ ಕಾಂಪೌಂಡ್, ಗೇಟ್, ಕಾವಲುಗಾರರಿಂದ ಅತ್ಯಂತ ಸುರಕ್ಷಿತವಾಗಿದ್ದ ಜಲ ಸಂಗ್ರಹಗಾರಕ್ಕೆ ಇದೀಗ ಭದ್ರತೆಯೇ ಇಲ್ಲವಾಗಿದೆ. ಸಣ್ಣ ಪ್ರಾಣಿಯೂ ನುಸುಳದಂತಿದ್ದ ಜಾಗದಲ್ಲೀಗ ನಾಯಿಗಳು ಬೀಡು ಬಿಡುವಂತಾಗಿದೆ. ಇವು ರಾತ್ರಿಯಿಡೀ ಬೊಗಳುವುದರಿಂದ ಅನಾರೋಗ್ಯಪೀಡಿತ ವೃದ್ಧರು, ಮಕ್ಕಳು ಭಯಭೀತರಾಗಿದ್ದಾರೆ. ಇದು ನಿರ್ಲಕ್ಷಿಸುವ ಅಥವಾ ವಿಳಂಬ ಮಾಡುವ ಸಂಗತಿಯಲ್ಲ. ದುಷ್ಕರ್ಮಿಗಳು ಏನಾದರೂ ಅನಾಹುತ ಮಾಡಿದರೆ ಅಥವಾ ಯಾವುದಾದರೂ ಪ್ರಾಣಿ ಜನ ಸಂಗ್ರಹಗಾರ ಸೇರಿದರೆ ಗತಿಯೇನು?. ಆಗಬಹುದಾದ ಅನಾಹುತಕ್ಕೆ ಯಾರು ಜವಾಬ್ದಾರರು ಎಂದು ನಿವಾಸಿಗಳು ಆತಂಕ ವ್ಯಕ್ತಪಡಿಸಿದ್ದಾರೆ.

ಈ ಜಾಗದಲ್ಲಿ ಫುಟ್‌ಪಾತ್ ಕೂಡ ನಾಶವಾಗಿರುವುದರಿಂದ ಪಾದಚಾರಿಗಳಿಗೆ ತುಂಬಾ ತೊಂದರೆಯಾಗುತ್ತಿದೆ. ಒಂದನೇ ಮುಖ್ಯರಸ್ತೆ ಹಾಗೂ ಪರಮಹಂಸ ರಸ್ತೆಯಲ್ಲಿ ಹೆಚ್ಚು ವಾಹನ ಸಂಚಾರವಿದ್ದು, ಪಾದಚಾರಿಗಳು ಜೀವಭಯದಲ್ಲಿ ಓಡಾಡುವಂತಾಗಿದೆ.

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ(ಕೆಯುಡಬ್ಲ್ಯೂಎಸ್&ಡಿಬಿ) ಅಧಿಕಾರಿಗಳು ಈ ಗಂಭೀರ ಸಮಸ್ಯೆಗೆ ಕೂಡಲೇ ಪರಿಹಾರ ಕ್ರಮ ಕೈಗೊಳ್ಳಬೇಕು. ಮೈಸೂರಿನ ಬಹುತೇಕ ಭಾಗಕ್ಕೆ ನೀರು ಸರಬರಾಜಾಗುವ ಈ ಜಲಸಂಗ್ರಹಗಾರಕ್ಕೆ ಶೀಘ್ರ ಜಲಸಂಗ್ರಹಗಾರದ ಕಾಂಪೌಂಡ್ ನಿರ್ಮಿಸುವುದರ ಜೊತೆಗೆ ಫುಟ್‌ಪಾತ್ ಅನ್ನೂ ಸರಿಪಡಿಸಬೇಕು ಎಂದು ಆಗ್ರಹಿಸಿದ್ದಾರೆ.

> **ಇನ್ನೆರಡು ವಾರದಲ್ಲಿ ಕಾಮಗಾರಿ...**
> ಎಂಟು ಪೈಪ್‌ಗಳನ್ನು ಅಳವಡಿಸಲಾಯಿತು. ಆದರೆ ಎಕ್ಸಿಸ್ಟಿಂಗ್ ಪೈಪ್‌ನ ಸೋರಿಕೆಯಿಂದಾಗಿ ಕಾಂಪೌಂಡ್ ಹಾಳಾಯಿತು. ಇದರಿಂದ ಸ್ಥಳೀಯ ನಿವಾಸಿಗಳಿಗೆ ತೊಂದರೆಯಾಗಿರುವುದು ಗಮನಕ್ಕೆ ಬಂದಿದೆ. ಕಾಂಪೌಂಡ್ ಅವಶೇಷವನ್ನು ತೆರವು ಮಾಡಿಸಲಾಗಿದೆ. ಕಾಮಗಾರಿ ಸೇರಿದಂತೆ ಜಲಸಂಗ್ರಹಗಾರದ ಎಲ್ಲಾ ಕೆಲಸಗಳಿಗೂ ಸಹಕಾರ ನೀಡಿರುವ ಸಾರ್ವಜನಿಕರಿಗೆ ತೊಂದರೆ ಕೊಡುವ ಯಾವುದೇ ಉದ್ದೇಶವಿಲ್ಲ. ಗುತ್ತಿಗೆದಾರರೊಂದಿಗೆ ಮಾತನಾಡಿದ್ದು ಇನ್ನೆರಡು ವಾರದಲ್ಲಿ ಕಾಂಪೌಂಡ್ ನಿರ್ಮಾಣ ಕಾಮಗಾರಿ ಆರಂಭಿಸಲಾಗುವುದು.
> -ಆಸಿಫ್ ಇಕ್ಬಾಲ್ ಖಲೀಲ್,
> ಇಇ, ಕೆಯುಡಬ್ಲ್ಯೂಎಸ್&ಡಿಬಿ



ಯಾದವಗಿರಿಯಲ್ಲಿನ ಹೆಚ್‌ಎಲ್‌ಆರ್ ಕಾಂಪೌಂಡ್ ನೆಲಸಮಗೊಂಡಿರುವುದರಿಂದ ಸೃಷ್ಟಿಯಾಗಿರುವ ರಹದಾರಿ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಮಾರ್ಗನ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಮಾದೇವ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಮಾ (ಹಿಂ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಮಾದೇವ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಮಾದೇವ (ಕ)	4 ಪ್ರದರ್ಶನಗಳು
ರಾಜಕಮಲ್	
ಕಣ್ಣಪ್ಪ (ತೆ)	4 ಪ್ರದರ್ಶನಗಳು
ಸಂಗಂ	
ಕುಬೇರನ್(ತ) + ಕುಬೇರಾ (ಕ)	2+2 ಪ್ರದರ್ಶನಗಳು
ಲಿಡೋ	
ರಾಜರತ್ನಾಕರ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಭಗೀರಥ (ಕ–1), ಎಕ್ಸ್ ಅಂಡ್ ವೈ (ಕ–3)	3+1 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	28 ಇಯರ್ಸ್ ಲೇಟರ್ (ಇಂ): ಬೆ.10.40ಕ್ಕೆ, ರಾ.7.55ಕ್ಕೆ, ಡಿಎನ್‌ಎ (ತ): ಮ.1.10ಕ್ಕೆ, ಕುಬೇರಾ (ತೆ): ಸಂ.4.05ಕ್ಕೆ, ಸಿತಾರೆ ಜಮೀನ್ ಪರ್ (ಹಿಂ): ರಾ.10.25ಕ್ಕೆ.
ಸ್ಕ್ರೀನ್ 2	ಇಲಿಯೋ (3ಡಿ)(ಇಂ): ಬೆ.11.30ಕ್ಕೆ, ಮ.1.45ಕ್ಕೆ, ಸಿತಾರೆ ಜಮೀನ್ ಪರ್ (ಹಿಂ): ಸಂ.4ಕ್ಕೆ, ರಾ.7.10ಕ್ಕೆ, ಯುನೈಟೆಡ್ ಕಿಂಗ್‌ಡಮ್ ಆಫ್ ಕೇರಳ (ಮ): ರಾ.10.20ಕ್ಕೆ.
ಸ್ಕ್ರೀನ್ 3	ಮಾದೇವ (ಕ): ಬೆ.10.30ಕ್ಕೆ, ರಾ.7.10ಕ್ಕೆ, ಮಾತೊಂದ ಹೇಳುವೆ (ಕ): ಮ.1.15ಕ್ಕೆ, 28 ಇಯರ್ಸ್ ಲೇಟರ್ (ಇಂ): ಸಂ.4.30ಕ್ಕೆ, ವ್ಯಾಸನಸಮೇತಂ ಬಂಧುಮಿತ್ರ (ಮ): ರಾ.10ಕ್ಕೆ.

ಐನಾಕ್ಸ್ ಮೂವೀಸ್
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ):

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಎಡಗೈಯೇ ಅಪಘಾತಕ್ಕೆ ಕಾರಣ (ಕ): ಮ.1.45ಕ್ಕೆ, ಸಂ.4.25ಕ್ಕೆ, ಸಂ.6.50ಕ್ಕೆ, ಮಾದೇವ (ಕ): ರಾ.9.15ಕ್ಕೆ.
ಸ್ಕ್ರೀನ್ 2	ಮಾದೇವ (ಕ): ಮ.1.15ಕ್ಕೆ, ಸಂ.4.30ಕ್ಕೆ, ರಾ.7.30ಕ್ಕೆ.
ಸ್ಕ್ರೀನ್ 3	ಯುದ್ಧಕಾಂಡ 2 (ಕ): ಸಂ.6.50ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಏಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.


ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಇಂದಿನಿಂದ ಮೂರು ದಿನ ನೀರು ಸರಬರಾಜು ವ್ಯತ್ಯಯ

ಮೈಸೂರು, ಜೂ.29–ಮೈಸೂರು ನಗರಕ್ಕೆ ನೀರು ಸರಬರಾಜು ಮಾಡುವ ಮೇಳಾಪುರ ಮತ್ತು ರಮ್ಮನಹಳ್ಳಿ ಯಂತ್ರಾಗಾರಗಳಿಗೆ ವಿದ್ಯುತ್ ಸರಬರಾಜು ಮಾಡುವ ದೇವನೂರು ಸಬ್ ಸ್ಟೇಷನ್‌ನಲ್ಲಿ ಕೆಪಿಟಿಸಿಎಲ್ ಇಲಾಖೆಯೂ ಮೊದಲ ತ್ರೈಮಾಸಿಕ ನಿರ್ವಹಣಾ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಜೂ.30 ಹಾಗೂ ಜು.1, 2ರಂದು ಮೈಸೂರಿನ ಕೆಲವೆಡೆ ನೀರು ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ವಾರ್ಡ್ ನಂ. 9, 16, 28ರಿಂದ 39 ಮತ್ತು 52, 53 ಇದಕ್ಕೆ ಸಂಬಂಧಪಟ್ಟ ಪ್ರದೇಶಗಳಾದ ಕೆಸರೆ, ರಾಜೇಂದ್ರನಗರ, ಸುಭಾಷನಗರ, ಎನ್.ಆರ್.ಮೊಹಲ್ಲಾ, ಗಾಂಧಿನಗರ, ಉದಯಗಿರಿ, ರಾಜೀವ್ ನಗರ 1, 2, 3ನೇ ಹಂತ, ಶಾಂತಿನಗರ, ಕಲ್ಯಾಣಗಿರಿ, ಡಾ.ರಾಜ್‌ಕುಮಾರ್ ರಸ್ತೆಗೆ ಸೇರಿಕೊಂಡ ಪ್ರದೇಶಗಳು, ಯರಗನಹಳ್ಳಿ, ಸಿದ್ಧಾರ್ಥ ಬಡಾವಣೆ, ಆಲನಹಳ್ಳಿ ಬಡಾವಣೆ, ಗಿರಿದರ್ಶಿನಿ ಬಡಾವಣೆ, ಗೌಸಿಯಾನಗರ, ಕ್ಯಾತಮಾರನಹಳ್ಳಿ ಹಾಗೂ ಇನ್ನಿತರ ಪ್ರದೇಶದಲ್ಲಿ ನೀರು ಸರಬರರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಮೈಸೂರು ಮಹಾನಗರ ಪಾಲಿಕೆ ನೀರು ಸರಬರಾಜು ಮತ್ತು ಒಳಚರಂಡಿ ವಿಭಾಗದ ಕಾರ್ಯಪಾಲಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಾಜ್ಯದ ನಾಲ್ಕು ವಿಮಾನ ನಿಲ್ದಾಣಗಳಿಗೆ ಬಾಂಬ್ ಬೆದರಿಕೆ



ಹುಬ್ಬಳ್ಳಿ: ರಾಜ್ಯದ ಹುಬ್ಬಳ್ಳಿ, ಬೆಳಗಾವಿ, ಮಂಗಳೂರು ಮತ್ತು ಬೆಂಗಳೂರು ವಿಮಾನ ನಿಲ್ದಾಣಗಳ ನಿರ್ದೇಶಕರಿಗೆ ವಿಮಾನ ನಿಲ್ದಾಣದಲ್ಲಿ ಬಾಂಬ್ ಸ್ಫೋಟಿಸುವ ಕುರಿತು ಭಾನುವಾರ ಮಧ್ಯಾಹ್ನ ಇ–ಮೇಲ್ ಮೂಲಕ ಬೆದರಿಕೆ ಸಂದೇಶ ರವಾನೆಯಾಗಿದೆ. ಮುಂಜಾಗ್ರತಾ ಕ್ರಮವಾಗಿ ನಿಲ್ದಾಣಗಳಲ್ಲಿ ಬಿಗಿ ಭದ್ರತೆ ಹೆಚ್ಚಿಸಲಾಗಿದೆ.

ವಿಮಾನ ನಿಲ್ದಾಣದ ಆವರಣ ಪ್ರವೇಶಿಸುವ ಪ್ರತಿಯೊಬ್ಬ ಪ್ರಯಾಣಿಕರನ್ನು ಮತ್ತು ಸಾರ್ವಜನಿಕರನ್ನು ತೀವ್ರ ತಪಾಸಣೆಗೆ ಒಳಪಡಿಸಲಾಗುತ್ತಿದೆ. ಬಾಂಬ್ ನಿಷ್ಕ್ರಿಯ ದಳ, ಶ್ವಾನ ದಳ ಸಿಬ್ಬಂದಿ, ಪೊಲೀಸ್ ಅಧಿಕಾರಿಗಳು, ಆಂತರಿಕ ಭದ್ರತಾ ಸಿಬ್ಬಂದಿ ಮತ್ತು ಗುಪ್ತಚರ ಇಲಾಖೆ ಸಿಬ್ಬಂದಿ ನಿಗಾ ವಹಿಸಿದ್ದಾರೆ.

ರಾಜ್ಯದ ನಾಲ್ಕು ವಿಮಾನ ನಿಲ್ದಾಣಗಳಿಗೆ roadkill kyo ಹೆಸರಿನ ಇ–ಮೇಲ್ ಐಡಿಯಿಂದ ಬೆದರಿಕೆ ಸಂದೇಶ ಬಂದಿದೆ. ತಕ್ಷಣ ಬಾಂಬ್ ತಪಾಸಣಾ ದಳ ಮತ್ತು ಭದ್ರತಾ ಸಿಬ್ಬಂದಿ ಜತೆ ಸಭೆ ನಡೆಸಿ, ನಿಲ್ದಾಣಕ್ಕೆ ಬಿಗಿ ಭದ್ರತೆ ಒದಗಿಸಿದ್ದೇವೆ. ವಿಮಾನ ನಿಲ್ದಾಣದ ಸುತ್ತಮುತ್ತಲಿನ ಸುಮಾರು 50–60 ಎಕರೆ ಪ್ರದೇಶವನ್ನು ಭದ್ರತಾ ಸಿಬ್ಬಂದಿ ಪರಿಶೀಲಿಸಿದ್ದಾರೆ. ಸಂದೇಶ ಬಂದ ಇ–ಮೇಲ್ ಐಡಿಯ ಮಾಹಿತಿಯನ್ನು ಪೊಲೀಸರಿಗೆ ನೀಡಿ, ಪ್ರಕರಣ ದಾಖಲಿಸುತ್ತೇವೆ ಎಂದು ಹುಬ್ಬಳ್ಳಿ ವಿಮಾನ ನಿಲ್ದಾಣದ ನಿರ್ದೇಶಕ ರೂಪೇಶಕುಮಾರ ಶ್ರೀಪಾದ ಮಾಧ್ಯಮಕ್ಕೆ ತಿಳಿಸಿದರು.

ಕೆಆರ್ ಕ್ಷೇತ್ರದ ಯುವ ಕಾಂಗ್ರೆಸ್ ನೂತನ ಪದಾಧಿಕಾರಿಗಳ ಪದಗ್ರಹಣ



ನಗರದ ಕಾಂಗ್ರೆಸ್ ಕಚೇರಿಯಲ್ಲಿ ಕೆ.ಆರ್.ವಿಧಾನ ಸಭಾ ಕ್ಷೇತ್ರದ ಯುವ ಕಾಂಗ್ರೆಸ್ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭ ನಡೆಯಿತು.

ಮೈಸೂರು, ಜೂ.29(ಎಂಕೆ)– ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಕಾಂಗ್ರೆಸ್ ಕಚೇರಿಯಲ್ಲಿ ಕೆ.ಆರ್.ವಿಧಾನ ಸಭಾ ಕ್ಷೇತ್ರದ ಯುವ ಕಾಂಗ್ರೆಸ್ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭ ಭಾನುವಾರ ನಡೆಯಿತು.

ಸಮಾರಂಭವನ್ನು ಉದ್ಘಾಟಿಸಿದ ಕರ್ನಾಟಕ ಪ್ರದೇಶ ಯುವ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಹೆಚ್.ಎಸ್. ಮಂಜುನಾಥ್ ಗೌಡ, ಕೆ.ಆರ್. ವಿಧಾನಸಭಾ ಕ್ಷೇತ್ರದ ಯುವ ಕಾಂಗ್ರೆಸ್ ಅಧ್ಯಕ್ಷ ಎಂ.ಆರ್.ಹೊಯ್ಸಳ ನೇತೃತ್ವದ ಪದಾಧಿಕಾರಿಗಳನ್ನು ಅಭಿನಂದಿಸಿದರು.

ಬಳಿಕ ಮಾತನಾಡಿದ ಅವರು, 2028ಕ್ಕೆ ರಾಜ್ಯದಲ್ಲಿ ಮತ್ತೆ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರುವುದು ಯುವ ಕಾಂಗ್ರೆಸ್ ಗುರಿಯಾಗಿದೆ. ಈ ನಿಟ್ಟಿನಲ್ಲಿ ಯುವ ಕಾಂಗ್ರೆಸ್ ಪದಾಧಿಕಾರಿಗಳು ಭಯ ಬಿಟ್ಟು ಬೂತ್ ಮಟ್ಟದಲ್ಲಿ ಕೆಲಸ ಮಾಡಬೇಕು. ಇಂದಿನಿಂದಲೇ ಸಂಘಟಿತರಾಗಿ ಕೆಲಸ ಮಾಡುತ್ತಲೇ ಯುವಕರು ಮತ್ತು ಯುವತಿಯರನ್ನು ಪಕ್ಷಕ್ಕೆ ಸೇರಿಸಿಕೊಳ್ಳುವ ಮೂಲಕ ಪಕ್ಷದ ಬಲ ಹೆಚ್ಚಿಸಬೇಕು ಎಂದು ಕರೆ ನೀಡಿದರು.

ಯುವ ಕಾಂಗ್ರೆಸ್ ಪದಾಧಿಕಾರಿಗಳು ಉತ್ತಮವಾಗಿ ಸಂಘಟನಾ ಕೆಲಸ ಮಾಡಿದರೆ, ಪಕ್ಷ ಅವರನ್ನು ಗುರ್ತಿಸಿ ಸ್ಥಾನ–ಮಾನಗಳನ್ನು ನೀಡಲಿದೆ. ಆದ್ದರಿಂದ ನೀವಿರುವ ಸ್ಥಳದಲ್ಲಿಯೇ ಜನರ ಮಧ್ಯೆ ಕೆಲಸ ಮಾಡಿ. ಸರ್ಕಾರದ ಜನಪರ ಕಾರ್ಯಕ್ರಮಗಳನ್ನು ಮನೆ ಮನೆಗೆ ತಲುಪಿಸಿ ಎಂದು ತಿಳಿಸಿದರು.

'ನೋ ಡ್ರಗ್ಸ್' ಜಾಗೃತಿ ಅಭಿಯಾನ: ಕೆ.ಆರ್.ವಿಧಾನ ಸಭಾ ಕ್ಷೇತ್ರದ ಯುವ ಕಾಂಗ್ರೆಸ್ ಅಧ್ಯಕ್ಷ ಎಂ.ಆರ್. ಹೊಯ್ಸಳ ಮಾತನಾಡಿ, ಬೂತ್ ಮಟ್ಟದಲ್ಲಿ ಕೆಲಸ ಮಾಡುವ ಮೂಲಕ ಪಕ್ಷ ಮತ್ತು ಪಕ್ಷದ ಯುವ ಪಡೆಯನ್ನು ಸಂಘಟಿಸಲಾಗುವುದು. ಕೆ.ಆರ್.ಕ್ಷೇತ್ರದಲ್ಲಿ 'ನೋ ಡ್ರಗ್ಸ್' ಜಾಗೃತಿ ಅಭಿಯಾನ ನಡೆಸುವ ಮೂಲಕ ಯುವಕರಲ್ಲಿ ಆರೋಗ್ಯದ ಅರಿವು ಮೂಡಿಸಲಾಗುವುದು. ಅಲ್ಲದೆ ಕ್ಷೇತ್ರದ ಪ್ರತೀ ಮನೆಗೂ ಭೇಟಿ ನೀಡಿ ರಾಜ್ಯ ಕಾಂಗ್ರೆಸ್ ಸರ್ಕಾರದ ಜನಪ್ರಿಯ ಗ್ಯಾರಂಟಿ ಯೋಜನೆಗಳ ಕುರಿತು ತಿಳಿಹೇಳಲಾಗುವುದು ಎಂದು ಹೇಳಿದರು.

ರಾಜ್ಯ ಯುವ ಕಾಂಗ್ರೆಸ್ ಉಸ್ತುವಾರಿ ನಿಗಮ್ ಭಂಡಾರಿ, ರಾಷ್ಟ್ರೀಯ ವಿದ್ಯಾರ್ಥಿ ಕಾಂಗ್ರೆಸ್‌ನ ನಾಗೇಶ್ ಕರಿಯಪ್ಪ, ಮೈಸೂರ ನಗರಾಧ್ಯಕ್ಷ ಆರ್.ಮೂರ್ತಿ, ಮೈಸೂರು ಗ್ರಾಮಾಂತರ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್, ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್, ಕೆ.ಆರ್.ಕ್ಷೇತ್ರದ ಬ್ಲಾಕ್ ಅಧ್ಯಕ್ಷ ಸೋಮಶೇಖರ್, ಮುಖಂಡರಾದ ನವೀನ್‌ಕುಮಾರ್, ಪ್ರದೀಪ್ ಕುಮಾರ್, ಹಿಂದುಳಿದ ವರ್ಗಗಳ ವಿಭಾಗದ ನಗರಾಧ್ಯಕ್ಷ ಎನ್.ಆರ್.ನಾಗೇಶ್, ಮಾಜಿ ಮೇಯರ್ ಟಿ.ಬಿ.ಚಿಕ್ಕಣ್ಣ, ಪ್ರಚಾರ ಸಮಿತಿ ಅಧ್ಯಕ್ಷ ರಘುರಾಜ್ ಮತ್ತಿತರರಿದ್ದರು.

ಮೊದಲನೇ ವರ್ಷದ ಪುಣ್ಯಸ್ಮರಣೆ



ನೀವು ನಮ್ಮನ್ನಗಲಿ ಇಂದಿಗೆ 1 ವರ್ಷ ಕಳೆದರೂ ನಿನ್ನ ನೆನಪಲ್ಲೇ ಇರುವ ನಿನ್ನ ಅಮ್ಮ, ಹೇಮ, ನಿನ್ನ ತಮ್ಮ ಮನೋಜ್ ಹಾಗೂ ನಿನ್ನ ಬಂಧು ಬಳಗದವರು.

ಮಂಜುಳ (ನಯನ)

ಜನನ: 07.02.2002 | ಮರಣ: 11.07.2024

13ನೇ ವರ್ಷದ ಪುಣ್ಯಸ್ಮರಣೆ



ನೀವು ನಮ್ಮನ್ನಗಲಿ ಇಂದಿಗೆ 13 ವರ್ಷ ಕಳೆದರೂ ನಿಮ್ಮ ನೆನಪಿನಲ್ಲಿರುವ ದುಃಖತಪ್ತರು: ತಾಯಿ, ಅಜ್ಜಿ, ಅತ್ತೆ, ಮಾವ, ಪತ್ನಿ, ತಮ್ಮ, ಮಕ್ಕಳು, ಕುಟುಂಬ ವರ್ಗದವರು ಹಾಗೂ ಬಂಧುಮಿತ್ರರು.

ಎಸ್.ನಾಗೇಶ್‌ರಾವ್ (ಅಪ್ಪು)



ಹೋಮೇಜ್ : ನೆನಪು

ನೆಲ್ಲಮಕ್ಕಡ ಶೀಲಾ ಕಾವೇರಪ್ಪ


4-7-1953 : 30-6-2024

ನಮ್ಮ ಬದುಕಿಗೆ ಬೆನ್ನೆಲುಬಾಗಿ, ಮೈಸೂರಿನ ಹೆಸರಾಂತ "ಭರಣಿ ಆರ್ಟ್ ಗ್ಯಾಲರಿ"ಯ ಸಹ–ಸಂಸ್ಥಾಪಕಿಯಾಗಿ ಸದಾ ಸೇವಾನಿರತರಾಗಿ ಬದುಕಿದ ನಿಮ್ಮ ಒಡನಾಟದ ನೆನಪು ಸದಾ ನಮ್ಮಲ್ಲಿ ತುಂಬಿದೆ. ನಿಮ್ಮ ಆತ್ಮ ಚಿರಶಾಂತಿಯಲ್ಲಿ ಇರಲೆಂದೂ ನಮ್ಮನ್ನು ಸತ್ಸೇವೆಯಲ್ಲಿ ಮುನ್ನಡೆಸಲೆಂದೂ ಪ್ರಾರ್ಥಿಸಿಕೊಳ್ಳುತ್ತೇವೆ.

****

ಪತಿ: ನೆಲ್ಲಮಕ್ಕಡ ಬಿ. ಕಾವೇರಪ್ಪ, ಮಗ: ಎನ್. ಕೆ. ಪೂಣಚ್ಚ, ಸೊಸೆ: ನೀಮಾ, ಮಗಳು: ಡಾ॥ ಕೃತಿ, ಅಳಿಯ : ಕೊಂಡಿರ ರತನ್ ಮೊಣ್ಣಪ್ಪ, ಮೊಮ್ಮಗ: ಧ್ರುವ ಕುಶಾಲಪ್ಪ, ಕುಟುಂಬಸ್ಥರು, ಬಂಧುಗಳು.

ಮೊಬೈಲ್ ಸಂಖ್ಯೆ: 94485 54221



The Best WATER PROOF Plywood
₹66/-* PER SQFT.
15 YEARS CERTIFIED WARRANTY
Neem® BOND PLATINUM | Neem™ AKSHAYAGOLD
9148991267 | 9901291267

DESIGNED TO MAKE EVERY SPACE BEAUTIFUL
2 BHK HOME INTERIORS @ ₹2.9 LAKHS
HOME SPACE MART
Kushalnagar • Mysuru • Bengaluru
For Site Vist : 98809 72999

ಮಾರಾಟಕ್ಕಿದೆ

2 ಎಕರೆ ತೋಟ ಮೈಸೂರಿನಿಂದ 17 ಕಿಮಿ, ಮುಖ್ಯರಸ್ತೆ, ಹೊಂದಿಕೊಂಡಿದೆ, ಆಸಕ್ತರು ಸಂಪರ್ಕಿಸಿ

9686714571

ಮಧ್ಯವರ್ತಿಗಳಿಗೆ ಅವಕಾಶವಿಲ್ಲ

ಮೈಸೂರು ಮಿತ್ರ 46

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಅನನ್ಯ ವೈವಾಹಿಕ ಜೀವನ ಪಯಣಕ್ಕೆ ಇಂದು 50 ವರ್ಷಗಳು ಪೂರ್ಣ



51ನೇ ವಿವಾಹ ವಾರ್ಷಿಕೋತ್ಸವದ ಶುಭಾಶಯಗಳು

ಶ್ರೀಮತಿ ಭಾಗ್ಯಲಕ್ಷ್ಮಿ ಮತ್ತು ಶ್ರೀ ಚಂದ್ರಶೇಖರ್ ತಿವಾರಿ

ಶುಭಕೋರುವವರು: ಮಗ, ಸೊಸೆ, ರೀನಾ, ತಾರಾ, ವಾಣಿ ಮತ್ತು ಮೊಮ್ಮಕ್ಕಳು, ಶಾಮಂತ, ನೇತ್ರ, ನಾಗರಾಜು, ಜಯರಾಜು, ಪುಷ್ಪ ಹಾಗೂ ಬಂಧುಮಿತ್ರರು

G9 projects
Designing your Dreams
MUDA APPROVED LAYOUT
BOOK PLOT @ ₹2LAKHS, REST IN EMI - A SMART MOVE TOWARD PROPERTY
HERITAGE CITY
Site Value ₹ 20,00,000
Marketed by Vee2 Developers
8088707707
Ring Road, Uttanahalli Mysuru

ಸೈಟುಗಳು ಮಾರಾಟಕ್ಕಿವೆ

ಇದೀಗ ಕೇವಲ ರೂ.6 ಲಕ್ಷದಲ್ಲಿ ಸೈಟ್ ನಿಮ್ಮದಾಗಿಸಿಕೊಳ್ಳಿ !
ಉಳಿದ ಹಣಕ್ಕೆ ಬ್ಯಾಂಕ್ ಲೋನ್ ಸೌಲಭ್ಯ – ಬೋಗಾದಿ ರಸ್ತೆಯ ಹೊಸ ಅಂತರಾಷ್ಟ್ರೀಯ ಕ್ರಿಕೆಟ್ ಸ್ಟೇಡಿಯಂ ಹತ್ತಿರ !
ಸ್ಥಳ: ಮೈಸೂರು ಬೋಗಾದಿ ರಸ್ತೆಯ ಪ್ರಮುಖ ಸ್ಥಳಗಳಲ್ಲಿ MUDA / RERA ಅನುಮೋದಿತ ಯೋಜನೆ

- ಅಳತೆ: 20x30 ಅಡಿ
- ಒಟ್ಟು ಬೆಲೆ ರೂ.18 ಲಕ್ಷ
- ಸೈಟು ನೋಂದಣಿಗೆ ಹಾಗೂ ಮನೆ ನಿರ್ಮಾಣಕ್ಕೆ ತಕ್ಷಣ ಸಿದ್ಧವಾಗಿದೆ
- ಈ ಅವಕಾಶವನ್ನೀಗಲೇ ಬಳಸಿಕೊಳ್ಳಿ

ಕರೆ ಮಾಡಿ 8310839079

